

# ಅಖಿಲ ಭಾರತ ಪತ್ರಿಕೆ

ಆಗಸ್ಟ್ 2018

# ಪ್ರಕಾಶದ ಪುನರಾಗಮನ

(ಭಾರತಕ್ಕೆ ಶ್ರೀ ಅರವಿಂದರ ಪುನರಾಗಮನದ ೧೨೫ನೆಯ ವಾರ್ಷಿಕೋತ್ಸವ)

ಬೆಲೆ : 15/–



*The future is for those*
*who have the soul of a hero.*

- The Mother

# ಅಖಿಲ ಭಾರತ ಪತ್ರಿಕೆ


**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಪ್ರಕಾಶದ ಪುನರಾಗಮನ"

(ಭಾರತಕ್ಕೆ ಶ್ರೀ ಅರವಿಂದರ ಪುನರಾಗಮನದ ೧೨೫ನೆಯ ವಾರ್ಷಿಕೋತ್ಸವ)


**ಅನು : ಡಾ. ಕೆ.ಎಸ್. ಆಮೂರ**

ಜನ್ಮ ಹಾಗೂ ಮುಂಚಿನ ವರ್ಷಗಳು 4
ಮುಂಚಿನ ಕವನಗಳು 11
ಮುಂಚಿನ ಗದ್ಯ ಬರಹಗಳು 13

**ಅನು: ಶ್ರೀ. ಎಮ್. ಎಸ್. ರವಿಶಂಕರ ಮತ್ತು ಡಾ. ಕೆ. ಎಸ್. ಆಮೂರ**

ಭಾರತೀಯ ಪುರಾಣ ಮತ್ತು ಆಖ್ಯಾನ ಕುರಿತು 21

**ಅನು : ಡಾ. ಕೆ.ಎಸ್. ಆಮೂರ**

ಶ್ರೀ ಅರವಿಂದರ ಕೆಲವು ಮುಖಭಾವಗಳು 31

**ಅನು: ಡಾ. ಬಿ. ಆರ್. ಭೀಡ**

ಬರೋಡಾದಲ್ಲಿದ್ದಾಗ ಆದ ಆರಂಭದ ಅನುಭವಗಳು 35

**ಅನು: ಶ್ರೀ. ಪುಟ್ಟು ಕುಲಕರ್ಣಿ**

ಸ್ಮರಣೆಗಳು ಹಾಗೂ ಉಪಾಖ್ಯಾನಗಳು 46

## (All India Magazine) ಸಂಪಾದಕೀಯ:

ಶ್ರೀ ಅರವಿಂದರು ಇಂಗ್ಲಂಡಿನಲ್ಲಿ ಹದಿನಾಲ್ಕು ವರ್ಷಗಳ ಕಾಲ ತಾತ್ಕಾಲಿಕ ವಾಸಮಾಡಿ 6–2–1893ರಂದು ಭಾರತಕ್ಕೆ ಮರಳಿ ಬಂದರು, ಅವರನ್ನು ಅಲ್ಲಿಗೆ ಅವರ ತಂದೆ ವಿದ್ಯಾಭ್ಯಾಸ ಮಾಡುವುದಕ್ಕಾಗಿ ಹಾಗೂ ಭಾರತೀಯ ಸಂಸ್ಕೃತಿಯಿಂದ ದೂರ ಉಳಿಯುವುದಕ್ಕಾಗಿ ಕಳಿಸಿಕೊಟ್ಟಿದ್ದರು. ಅವರು ಇಂಗ್ಲಂಡಿನಲ್ಲಿ ಕಳೆದ ದಿನಗಳು ಅವರಿಗೆ ಪಾಶ್ಚಿಮಾತ್ಯ ರೀತಿಯಲ್ಲಿ ಯೋಚಿಸುವುದನ್ನು ಕುರಿತು, ನಂತರ ಅವರ ಕಾರ್ಯಗಳಲ್ಲಿ ಒಂದು ಕಾರ್ಯಕ್ಕಾಗಿ ಸಹಾಯ ಒದಗಿಸುವುದನ್ನು ಕುರಿತು, ಅದು ಸಾಮಾನ್ಯವಾಗಿ ಪೂರ್ವಾತ್ಯ ರೀತಿ ಹಾಗೂ ಪಾಶ್ಚಿಮಾತ್ಯ ರೀತಿ ಎಂದು ತಿಳಿಯಲಾದುದರ ನಡುವೆ ಇರುವ ಅಂತರಕ್ಕೆ ಸೇತುವೆ ನಿರ್ಮಿಸುವುದಕ್ಕಾಗಿ ಇತ್ತು ಎಂಬುದನ್ನು ನಾವು ನೋಡಬಹುದು. ಅದೇ ಕಾಲಕ್ಕೆ ಬ್ರಿಟಿಶರ ಮನಸ್ಸು ಹೇಗೆ ಕಾರ್ಯಮಾಡುತ್ತದೆ ಎಂಬುದನ್ನು ಅದು ಸ್ಪಷ್ಟವಾಗುವಂತೆ ಮಾಡಿರಬಹುದು. ಇನ್ನೂ ಆಗ ತಾನೇ ಆರಂಭವಾಗುತ್ತಿದ್ದ ಭಾರತದ ಸ್ವಾತಂತ್ರ್ಯಕಾಗಿ ಹೋರಾಟ ನಡೆಸಲು ಮುಂಚೂಣಿಯ ದಳದಲ್ಲಿದ್ದ ಅವರಿಗೆ ಯೋಜನೆ ಹಾಗೂ ಸಮರತಂತ್ರ ರೂಪಿಸಲು ಸಹಾಯ ಮಾಡುವಂತಿತ್ತು. ಬರೋಡಾದಲ್ಲಿದ್ದ ದಿನಗಳು ಶ್ರೇಷ್ಠತರ ಕಾರ್ಯಕ್ಕಾಗಿ ಜನ್ಮತಾಳಿ ಬಂದಿದ್ದ ಅವರಿಗೆ ತಯಾರಿಯ ದಿನಗಳಾಗಿದ್ದವು. ಉತ್ಕ್ರಾಂತಿಯಲ್ಲಿ ಮುಂದಿನ ಹೆಜ್ಜೆಯಾದ ಅತಿಮಾನಸದತ್ತ ಮಾನವ ಕುಲ ಮಾನಸಿಕ ಹಂತದಿಂದ ವಿಮೋಚನೆ ಪಡೆದು, ಮೇಲ್ಗಡೆ ಜಿಗಿದು ಹೋಗುವುದಿತ್ತು. ಈ ಸಂಚಿಕೆಯಲ್ಲಿ ಅವರು ಬರೋಡಾದಲ್ಲಿದ್ದ ದಿನಗಳ ಮೇಲೆ ಮುಖ್ಯವಾಗಿ ಲಕ್ಷ್ಯಕೊಟ್ಟಿದ್ದೇವೆ. ಈ ಅವಧಿಯಲ್ಲಿ ಅವರ ಯೋಚನೆಗಳು, ಭಾವನೆಗಳು, ಅನುಭವಗಳ ಹೆಚ್ಚಿನ ಭಾಗ ಇವುಗಳತ್ತ ತೀವ್ರಗತಿಯಲ್ಲಿ ಇಣುಕು ನೋಟವನ್ನು ಕೊಟ್ಟು, ನಿರ್ವಾಣದ ಸಿದ್ಧಿ ಪಡೆದುದರೊಂದಿಗೆ ಮುಕ್ತಾಯಗೊಳಿ–ಸುತ್ತೇವೆ. ಇದು ಶ್ರೀ ಅರವಿಂದರು ಭಾರತಕ್ಕೆ ಮರಳಿ ಬಂದ ನೂರಿಪ್ಪತ್ತೈದನೆಯ ವಾರ್ಷಿಕಾಚರಣೆಯ ನಿಮಿತ್ತ ಅವರಿಗೆ ನಮ್ಮ ಕೃತಜ್ಞತೆಯನ್ನು ಹಾಗೂ ಗೌರವಾರ್ಪಣೆಯನ್ನು ಅಭಿವ್ಯಕ್ತಪಡಿಸುವುದಕ್ಕಾಗಿದೆ. ಸಹಜವಾಗಿ, ಎಲ್ಲರಿಗೂ ತಿಳಿದ ಹಾಗೆ ನಿರ್ವಾಣ ಶ್ರೀ ಅರವಿಂದರಿಗೆ ಹೊಸ ಅಭೂತಪೂರ್ವ ಆಧ್ಯಾತ್ಮಿಕ ಸಾಹಸದ ಪ್ರಾರಂಭ ಬಿಂದುವಾಗಿತ್ತು, ಅದು ಇಲ್ಲಿಯವರೆಗೆ ಗುರುತಿಸದ, ಅಭೂತಪೂರ್ವ ದಿವ್ಯಾತ್ಮದ ಕ್ಷೇತ್ರಗಳಲ್ಲಿ ಸಾಗಿಹೋಗುವುದಕ್ಕಾಗಿತ್ತು.

*



## ಪ್ರಕಾಶ

**(ಶ್ರೀ ಅರವಿಂದರು ತಮ್ಮ 11ನೆಯ ವಯಸ್ಸಿನಲ್ಲಿ ಬರೆದ ಕವನ)**

ಪುರಾತನ ವಿಷಣ್ಣತೆಯಿಂದ ತೀವ್ರಗೊಂಡ ಗರ್ಭದಿಂದ
ಸೂರ್ಯ ಉರುಳಿದ ಕಪ್ಪಾಗಿ ಬರಿದಾಗಿ,
ನಾನವನ ಕಪ್ಪಾದ ಎದೆ ಮುಚ್ಚಲು ನನ್ನ ಹೊಂಬಣ್ಣದ
ಕೂದಲಿನಿಂದ ನಡುವಂಗಿಯನು ನೇಯುವವರೆಗೆ.

ಮುಕ್ತಗೊಳಿಸುವ ಸ್ವರ್ಗದ ಯೋಜನೆಯ
ಮುನ್ಸೂಚನೆಗಳನು ಅವರ ದೃಷ್ಟಿಯ ಮುಂದೆ ನಾ ಬೆಳಗಿದಾಗ

ಮುಂಜಾವಿನ ಮಂತ್ರವನವರು ಪಠಿಸುತ್ತಿದ್ದಾಗ, ದೈವೀ ಸಂರಕ್ಷಕನು
ಜನ್ಮತಾಳಿಹನು
ಬಹಿಷ್ಕೃತ ಮಾನವನಿಗೆ ಸಂತಸವೆ ಸಂತಸ!

ಮೇಲರಿಮೆಯವರಿರಲಿ, ಕೀಳರಿಮೆಯವರಿರಲಿ ಸಮಾನ ಒಲವ
ತೋರಿಸುವೆ
ತಕ್ಕವರು, ತಕ್ಕವರಲ್ಲದವರು ಇವರೆಲ್ಲರ ಮೇಲೆ ಕೆಳಗಿಳಿದು ಬರುವೆ;
ಅಂಧಕಾರ ಕಣ್ಣೀರುಗಳ ವ್ಯರ್ಥ್ಯ ಗಗನಗಳಲಿ ಉರುಳುತಿಹ ಕುರುಡರೇ
ಇರಲಿ
ಸ್ನೇಹಿತನಾದ ನನ್ನ ಪವಿತ್ರ ಮಂದಹಾಸವನವರು ಭಾವನೆಗೆ
ತಂದುಕೊಳ್ಳುವರು.
ಓ, ಕ್ಷಣಿಕ ಬಿಟ್ಟು ಬಿಟ್ಟು ಬರುವ ನನ್ನ ಸಾನ್ನಿಧ್ಯ ಇಷ್ಟೊಂದು
ಸಂತಸ ಕೊಡುವ ಅರ್ಹತೆಯನೀರೀತಿ ಪಡೆದಿರಲು,
ಪವಿತ್ರರಾದವರ ಮನೆಯ ಮೇಲೆ ದೇವತೆಯ ಮುಗುಳ್ನಗೆಯಿಂದ
ಸದಾ ಉಜ್ವಲವಾಗಿ ನೆಲೆಸಿರುವ ವೈಭವಗಳೆಂತಿರಬಹುದು!

*

## ಜನ್ಮ ಹಾಗೂ ಮುಂಚಿನ ವರ್ಷಗಳು

### ಇಂಗ್ಲೆಂಡಿಗೆ ಹೊರಟು ಹೋದದ್ದು

[ಶ್ರೀ] ಅರವಿಂದರು ಕೊಲ್ಕತ್ತಾದಲ್ಲಿ ದಿನಾಂಕ 15–8–1872ರಂದು ಜನ್ಮತಾಳಿದರು. ಅವರ ತಂದೆ ಬಹಳ ಶಕ್ತವಾದ ಹಾಗೂ ಬಲವತ್ತಾದ ವೈಯಕ್ತಿಕತೆ ಹೊಂದಿದ್ದರು. ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹೋದ ಜನರಲ್ಲಿ ಅವರು ಮೊದಲನೆಯವರಾಗಿದ್ದರು. ಅವರು ರೂಢಿಗಳಲ್ಲಿ, ವಿಚಾರಗಳಲ್ಲಿ ಹಾಗೂ ಆದರ್ಶಗಳಲ್ಲಿ ಎಷ್ಟೊಂದು ಬ್ರಿಟಿಶ್ ರೀತಿಯವರಾಗಿ ಮಾರ್ಪಾಟು ಹೊಂದಿ ಬಂದಿದ್ದರೆಂದರೆ ಬಾಲಕ ಅರವಿಂದರು ಇಂಗ್ಲಿಷ್ ಹಾಗೂ ಹಿಂದುಸ್ತಾನಿ ಭಾಷೆಗಳಲ್ಲಿ ಮಾತನಾಡುತ್ತಿದ್ದರು ಮತ್ತು ಅವರು ತಮ್ಮ ಮಾತೃಭಾಷೆಯನ್ನು ಇಂಗ್ಲಂಡಿನಿಂದ ಮರಳಿ ಬಂದ ನಂತರ ಕಲಿತುಕೊಂಡರು. ಅರವಿಂದರ ತಂದೆ

ತಮ್ಮ ಮಕ್ಕಳು ಇಡಿಯಾಗಿ ಯುರೋಪಿಯನ್ ಪಾಲನೆ ಪೋಷಣೆ ಪಡೆಯಬೇಕೆಂದು ನಿರ್ಧರಿಸಿದ್ದರು. ಮಕ್ಕಳು ಭಾರತದಲ್ಲಿದ್ದಾಗ ಅವರ ವಿದ್ಯಾಭ್ಯಾಸದ ಪ್ರಾರಂಭಕ್ಕಾಗಿ ಅವರನ್ನು ದಾರ್ಜಿಲಿಂಗದಲ್ಲಿದ್ದ ಆಯರಿಸ್ (Irish) ಕ್ರೈಸ್ತ ಸನ್ಯಾಸಿನಿಯ ಬಳಿ ಕಳಿಸಿಕೊಟ್ಟಿದ್ದರು. ಮತ್ತು 1879ರಲ್ಲಿ ತಮ್ಮ ಮಕ್ಕಳನ್ನು ಅವರು ಇಂಗ್ಲೆಂಡಿಗೆ ಕರೆದುಕೊಂಡು ಹೋದ ನಂತರ ಅಲ್ಲಿ ಒಬ್ಬ ಕ್ರೈಸ್ತ ಪಾದ್ರಿ ಹಾಗೂ ಅವನ ಹೆಂಡತಿ ಇವರ ಪಾಲನೆಯಲ್ಲಿರಿಸಿದರು. ತಮ್ಮ ಮಕ್ಕಳು ಬೇರೆ ಯಾವ ಭಾರತೀಯನ ಪರಿಚಯ ಮಾಡಿಕೊಳ್ಳದಂತೆ ಹಾಗೂ ಭಾರತೀಯ ಪ್ರಭಾವಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು ಎಂದು ಅವರಿಗೆ ಕಟ್ಟುನಿಟ್ಟಿನ ಆಜ್ಞೆ ನೀಡಲಾಗಿತ್ತು. ಈ ಆಜ್ಞೆಗಳನ್ನು ಅಕ್ಷರಶಃ ಪಾಲಿಸಲಾಗಿತ್ತು. ಅರವಿಂದರು, ಭಾರತ ಅದರ ಜನರು, ಧರ್ಮ ಹಾಗೂ ಸಂಸ್ಕೃತಿ ಬಗ್ಗೆ ಇಡಿಯಾದ ಅಜ್ಞಾನದಲ್ಲಿ ಬೆಳೆದರು.

**(CWSA, 36/15)** **– ಶ್ರೀ ಅರವಿಂದರು**

*

**ಶಾಲೆಯಲ್ಲಿ ವಿದ್ಯಾಭ್ಯಾಸ ಹಾಗೂ ಸ್ವಯಂಪ್ರೇರಿತವಾಗಿ ಕೈಕೊಂಡ ಅಭ್ಯಾಸ**

ಮ್ಯಾಂಚೆಸ್ಟರ ಹಾಗೂ ಸೇಂಟಪಾಲ್ ಶಾಲೆಗಳಲ್ಲಿ ಅರವಿಂದರು ತಮ್ಮ ಲಕ್ಷ್ಯವನ್ನು ಪ್ರಾಚೀನ ಶ್ರೇಷ್ಠ ಕೃತಿಗಳತ್ತ (Classics) ಹರಿಸಿದರು, ಆದರೆ ಸೇಂಟಪಾಲ್ ಶಾಲೆಯಲ್ಲಿರುವಾಗ ಕೊನೆಯ ಮೂರು ವರ್ಷಗಳ ಕಾಲ ಕೇವಲ ತಮ್ಮ ಶಾಲೆಯಲ್ಲಿ ಹೇಳಿಕೊಟ್ಟುದುದನ್ನು ಕಲಿತರು ಮತ್ತು ತಮ್ಮ ಬಿಡುವಿನ ಸಮಯವನ್ನು ಸಾರ್ವತ್ರಿಕ ರೂಪದ ಓದಿನಲ್ಲಿ ಕಳೆದರು, ವಿಶೇಷವಾಗಿ ಇಂಗ್ಲಿಷ್ ಕಾವ್ಯ, ಸಾಹಿತ್ಯ ಹಾಗೂ ಕಾದಂಬರಿ, ಫ್ರೆಂಚ್ ಸಾಹಿತ್ಯ, ಪ್ರಾಚೀನ ಮಧ್ಯಕಾಲದ ಹಾಗೂ ಆಧುನಿಕ ಯುರೋಪ ಇವುಗಳ ಇತಿಹಾಸ ಅವರು ಓದಿದ ವಿಷಯಗಳಾಗಿದ್ದವು. ಅವರು ಕೆಲಸಮಯವನ್ನು ಇಟಾಲಿಯನ್ ಭಾಷೆ ಹಾಗೂ ಜರ್ಮನ್ ಭಾಷೆ ಹಾಗೂ ಸ್ಪಾನಿಷ್ ಭಾಷೆ ಇವುಗಳನ್ನು ಕಲಿತುಕೊಳ್ಳುವುದರಲ್ಲಿ ಕಳೆದರು. ಅವರು ಬಹಳಷ್ಟು ಸಮಯವನ್ನು ಕಾವ್ಯರಚನೆಯಲ್ಲಿ ಕಳೆದರು. ಈ ಅವಧಿಯಲ್ಲಿ ಶಾಲೆಯ ವಿದ್ಯಾಭ್ಯಾಸಕ್ಕೆ ಬಹಳ ಸಮಯ ಬೇಕಾಗುತ್ತಿರಲಿಲ್ಲ. ಅವರು ಅದಾಗಲೆ ಅದನ್ನು ಸುಲಭವಾಗಿ ಮಾಡಬಲ್ಲವರಾಗಿದ್ದರು ಮತ್ತು ಇನ್ನು

ಮುಂದೆ ಅವುಗಳಿಗಾಗಿ ಶ್ರಮಪಡಬೇಕಾಗುತ್ತದೆಂದು ಯೋಚಿಸುವುದು ಅವಶ್ಯವಾಗಿರಲಿಲ್ಲ. ಹಾಗಿದ್ದರೂ ಅವರು ಕಿಂಗ್ಸ ಕಾಲೇಜಿನಲ್ಲಿ ಕಲಿಯುತ್ತಿದ್ದಾಗಿನ ಒಂದು ವರ್ಷದ ಅವಧಿಯಲ್ಲಿ ಗ್ರೀಕ್ ಹಾಗೂ ಲ್ಯಾಟಿನ್ ಭಾಷೆಗಳಲ್ಲಿ ಬರೆದ ಶ್ಲೋಕಗಳಿಗೆ ಎಲ್ಲ ಬಹುಮಾನ ಪಡೆದರು. ಅವರು ಗ್ರೀಕ್ ಮತ್ತು ಲ್ಯಾಟಿನ್, ಇಂಗ್ಲಿಷ್ ಹಾಗೂ ಫ್ರೆಂಚ್ ಭಾಷೆಗಳ ಮೇಲೆ ಪ್ರಭುತ್ವ ಪಡೆದಿದ್ದರು ಮತ್ತು ಯುರೋಪ ಭೂಖಂಡದ ಭಾಷೆಗಳಾದ ಜರ್ಮನ್ ಹಾಗೂ ಇಟಾಲಿಯನ್ ಭಾಷೆಗಳ ಅಲ್ಪ ಪರಿಚಯ ಮಾಡಿಕೊಂಡಿದ್ದರು.

**(CWSA, 36/15)** **– ಶ್ರೀ ಅರವಿಂದರು**

*

**ರಾಜಕೀಯ ಆಸಕ್ತಿಗಳು ಹಾಗೂ ಚಟುವಟಿಕೆಗಳು**

ಅವರ ತಂದೆ ವಾರ್ತಾಪತ್ರಿಕೆಯನ್ನು ಕಳಿಸಲು ಪ್ರಾರಂಭಿಸಿದರು, ಅವುಗಳಲ್ಲಿ ಬಂಗಾಲಿ ಭಾಷೆಯಲ್ಲಿ ಬರೆದ ಪರಿಚ್ಛೇದಗಳಿರುತ್ತಿದ್ದವು, ಇಂಗ್ಲಿಷ್ ಜನರು ಭಾರತೀಯರನ್ನು ಎಷ್ಟು ಕೆಟ್ಟರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದರು ಎಂಬುದರ ಉಲ್ಲೇಖಗಳಿರುತ್ತಿದ್ದವು. ತಮ್ಮ ಪತ್ರದಲ್ಲಿ ಅವರು ಭಾರತದಲ್ಲಿದ್ದ ಬ್ರಿಟಿಶ್ ಸರಕಾರ ಕಾರುಣ್ಯರಹಿತ ಸರಕಾರವೆಂದು ಬಹಿರಂಗವಾಗಿ ಖಂಡಿಸಿದ್ದರು. ಜಗತ್ತಿನಲ್ಲಿ ಸಾರ್ವತ್ರಿಕ ವಿಪ್ಲವ ಹಾಗೂ ಭವ್ಯ ಕ್ರಾಂತಿಕಾರಕ ಬದಲಾವಣೆಗಳು ಬರಲಿವೆ, ಅರವಿಂದರೇ ಸ್ವತಃ ಅದರಲ್ಲಿ ಭಾಗವಹಿಸಬೇಕಾದ ಅದೃಷ್ಟವಿದೆ ಎಂಬುದರ ಭಾವನೆ ಅವರ ಹನ್ನೊಂದನೇ ವಯಸ್ಸಿದ್ದಾಗಲೇ ಬಂದಿತ್ತು. ಅವರ ಲಕ್ಷ್ಯವನ್ನು ಈಗ ಭಾರತದತ್ತ ಸೆಳೆಯಲಾಯಿತು ಮತ್ತು ಈ ಭಾವನೆ ಕೂಡಲೆ ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ವಾಹಿನಿ ರೂಪದಲ್ಲಿ ಹರಿಯಿತು. ಆದರೆ "ದೃಢ ನಿಶ್ಚಯ" ನಾಲ್ಕು ವರ್ಷಗಳ ನಂತರ ಆಕಾರ ಪಡೆಯಿತು. ಅವರು ಕ್ಯಾಂಬ್ರಿಜ್‌ಕ್ಕೆ ಹೋಗುವುದಕ್ಕಿಂತ ಮೊದಲೇ ಅದನ್ನು ಮಾಡಲಾಗಿತ್ತು, ಅವರು ಅಲ್ಲಿದ್ದ ಇಂಡಿಯನ್ ಮಜ್ಲಿಸ್‌ದ ಸದಸ್ಯರಾಗಿದ್ದರು ಹಾಗೂ ಕೆಲಕಾಲ ಅದರ ಕಾರ್ಯದರ್ಶಿಯಾಗಿದ್ದರು. ಅಲ್ಲಿ ಅವರು ಬಹಳಷ್ಟು ಕ್ರಾಂತಿಕಾರಕ ಭಾಷಣಗಳನ್ನು ಮಾಡಿದರು. ಅವುಗಳ ಪರಿಣಾಮ ಏನಾಯಿತು ಎಂಬುದು ನಂತರ ತಿಳಿದುಬಂದಿತು. ಅವರನ್ನು ಅಲ್ಲಿಯ ಅಧಿಕಾರಿಗಳು ಇಂಡಿಯನ್

ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಯಶಸ್ಸು ಪಡೆಯುವುದರಿಂದ ದೂರವಿರಿಸಿದರು. ಅದಕ್ಕೆ ಅರವಿಂದರು ಕುದುರೆ ಸವಾರಿ ಮಾಡುವುದರಲ್ಲಿ ವಿಫಲರಾಗಿದ್ದರು ಎಂಬ ಕಾರಣ ನೀಡಲಾಗಿತ್ತು, ಆ ವಿಫಲತೆ ಕೇವಲ ಒಂದು ಪ್ರಸಂಗ, ಏಕೆಂದರೆ ಬೇರೆ ಇಂತಹ ಸಂದರ್ಭಗಳಲ್ಲಿ ಭಾರತದಲ್ಲಿಯೇ ಉಪಾಯ ಕಂಡುಕೊಳ್ಳಲು ಅವಕಾಶ ನೀಡಲಾಗುತ್ತಿತ್ತು.

ಲಂಡನ್‌ನಲ್ಲಿದ್ದ ಭಾರತೀಯ ವಿದ್ಯಾರ್ಥಿಗಳು ಒಂದು ರಹಸ್ಯ ಸಮಿತಿಯನ್ನು ರೂಪಿಸಲು ಒಮ್ಮೆ ಭೇಟಿಮಾಡಿದರು, ಅದಕ್ಕೆ ರೋಮಾಂಚಕವೆನಿಸುವ ರೀತಿಯಲ್ಲಿ "Lotus ಕಮಲ Dagger ಖಡ್ಗ" ಎಂದು ಕರೆದರು. ಅದರಲ್ಲಿ ಪ್ರತಿಯೊಬ್ಬ ಸದಸ್ಯ ಸಾರ್ವತ್ರಿಕ ರೀತಿಯಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಹಾಗೂ ಅದರ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಕೊನೆ ಕಂಡುಕೊಳ್ಳುವು–ದಕ್ಕಾಗಿ ವಿಶಿಷ್ಟ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದ. ಅರವಿಂದರು ಸಮಿತಿಯನ್ನು ರೂಪಿಸಿರಲಿಲ್ಲ, ಆದರೆ ತಮ್ಮ ಸಹೋದರರೊಂದಿಗೆ ಅದರ ಸದಸ್ಯರಾಗಿದ್ದರು. ಸಮಿತಿ ಇನ್ನೂ ನಿರ್ಜೀವ ಸ್ಥಿತಿಯಲ್ಲಿತ್ತು.

ಇದು ಸಂಭವಿಸಿದ್ದು ಅವರು ಕ್ಯಾಂಬ್ರಿಜ್‌ನ್ನು ಕೊನೆಯಬಾರಿ ಬಿಟ್ಟುಕೊಟ್ಟು ಭಾರತಕ್ಕೆ ಮರಳಿ ಬರುವುದಕ್ಕಿಂತ ಸ್ವಲ್ಪ ಮೊದಲು. ಭಾರತೀಯ ರಾಜಕೀಯ ಆ ಸಮಯದಲ್ಲಿ ಅಂಜುಬುರುಕವಾಗಿತ್ತು, ಮಧ್ಯಮವೇಗದಿಂದ ನಡೆದಿತ್ತು. ಮತ್ತು ಇದು ಇಂಗ್ಲಂಡಿನಲ್ಲಿ ಭಾರತೀಯ ವಿದ್ಯಾರ್ಥಿಗಳ ಮೊದಲ ಪ್ರಯತ್ನವಾಗಿತ್ತು.

*

ಇಂಗ್ಲಂಡನ್ನು ಬಿಟ್ಟುಬರುವುದು ಅವರಿಗೆ ದುಃಖದಾಯಕವಾಗಿರಲಿಲ್ಲ, ಗತಕಾಲಕ್ಕೆ ಅಂಟಿಕೊಂಡಿರುವುದಿರಲಿಲ್ಲ ಇಲ್ಲವೆ ಭವಿಷ್ಯತ್ತಿಗಾಗಿ ಕಳವಳಪಡು–ವುದಿರಲಿಲ್ಲ. ಇಂಗ್ಲಂಡನಲ್ಲಿ ಅವರ ಮಿತ್ರರ ಸಂಖ್ಯೆ ಬಹಳ ಕಡಿಮೆ ಇತ್ತು ಮತ್ತು ಅವರಲ್ಲಿ ಯಾರೂ ಆತ್ಮೀಯರಾಗಿರಲಿಲ್ಲ, ಅಲ್ಲಿಯ ಮಾನಸಿಕ ವಾತಾವರಣ ಸರಿಹೋಗುವಂತಹದಿರಲಿಲ್ಲ. ಹಾಗಾಗಿ ಅಲ್ಲಿಂದ ತಪ್ಪಿಸಿಕೊಂಡು ಬರುವ ಆವಶ್ಯಕತೆ ಇರಲಿಲ್ಲ.

*

ಇಂಗ್ಲಿಷ್ ಭಾಷೆ; ಯುರೋಪಿಯನ್ ಯೋಚನೆ ಹಾಗೂ ಸಾಹಿತ್ಯ ಇವುಗಳಲ್ಲಿ ಅವರ ಆಸಕ್ತಿ ಉಳಿದಿತ್ತು, ಆದರೆ ದೇಶವೆಂದು ಇಂಗ್ಲಂಡಕ್ಕಾಗಿ ಅಲ್ಲ, ಅವರನ್ನು ಅಲ್ಲಿ ಕಟ್ಟಿಹಾಕುವಂತಹವೇನೂ ಇರಲಿಲ್ಲ, ಇಂಗ್ಲಂಡನ್ನು ತಮ್ಮ ಪ್ರೀತಿಪಾತ್ರ ದೇಶವೆಂದು ಅವರು ಪರಿಗಣಿಸಿರಲಿಲ್ಲ. ಮನಮೋಹನ ಕೆಲಕಾಲ ಆ ರೀತಿ ಭಾವಿಸಿದ್ದರು. ಎರಡನೆಯ ದೇಶವೆಂದು ಯುರೋಪಿಯನ್ ದೇಶವೊಂದಕ್ಕೆ ಅಂಟಿಕೊಂಡಿದ್ದರೆ ಅದು ಬೌದ್ಧಿಕವಾಗಿ ಹಾಗೂ ಭಾವನಾತ್ಮಕವಾಗಿ ಅಂಟಿ–ಕೊಳ್ಳುವುದಾಗಿತ್ತು, ಆ ದೇಶ ಇಂಗ್ಲಂಡ ಆಗಿರಲಿಲ್ಲ, ಫ್ರಾನ್ಸ್ ಆಗಿತ್ತು.

*

ನನ್ನದು ಬ್ಯಾರನ್‌ನ ಮಿಂಚುವ ಭರ್ಚೆಯಲ್ಲ,
ಇಲ್ಲವೆ ವರ್ಡ್ಸ್‌ವರ್ಥನ ಬೆಳಗುವ ಕೃತಕ ಕೃತಿಯಲ್ಲ
ಇಲ್ಲವೆ ಶೆಲಿಯದರ ಹಾಗೆ ಹಾಡಲು ತಕ್ಕದ್ದಾದುದಲ್ಲ,
ಇಲ್ಲವೆ ಯಾರಿಗೂ ಸರಿಸಾಟಿಯಾಗಿರದ ಕೀಟ್ಸನಂತಹದಲ್ಲ.
ನಾನು ಭಾರತೀಯ ವಿಶಾಲ ಜಲರಾಶಿಗಳ ಬದಿಯಲ್ಲಿ ಕುಳಿತು
ಗತಕಾಲದ ಜಾದೂ ಇರುವುದರ ಇಣುಕು ನೋಟ ನೋಡಿದೆ,
ಮತ್ತು ನಾನು ಓಟಸಸಿಯಿಂದ ಬಾಗಿಸಿದ ಕೊಳವೆಯನು ಬಾರಿಸಿದೆ
ಅವು ಮುಂಚಿನ ದಿನವೊಂದರ ಡೊಂಕಾಗಿರಿಸಿದ ಪ್ರತಿಧ್ವನಿಗಳಾಗಿಹವು.

*

ಶ್ರೀ ಅರವಿಂದರು 1893 ರಿಂದ 1906ರ ನಡುವಿನ ಹದಿಮೂರು ವರ್ಷಗಳ ಕಾಲವನ್ನು ಬರೋಡಾ ಸರಕಾರದ ಸೇವೆಯಲ್ಲಿ ಕಳೆದರು. ಮೊದಲು ಮಹಾರಾಜನಿಗಾಗಿ ಹಣಕಾಸಿನ ವಿಭಾಗದಲ್ಲಿ ಹಾಗೂ ಆಡಳಿತ ಕಚೇರಿಯಲ್ಲಿ ಸೇವೆ ಸಲ್ಲಿಸಿದರು. ನಂತರ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಮತ್ತು ಕೊನೆಗೆ ಬರೋಡಾ ಕಾಲೇಜಿನ ಉಪ–ಪ್ರಾಂಶುಪಾಲರಾಗಿ ಕಾರ್ಯಕೈಕೊಂಡರು. ಈ ವರ್ಷಗಳನ್ನು ಅವರು ಸ್ವ–ಸಂಸ್ಕೃತಿಯ ಹಾಗೂ ಸಾಹಿತ್ಯಕ ಚಟುವಟಿಕೆಯ ಅಭಿವೃದ್ಧಿಗಾಗಿ ಉಪಯೋಗಿಸಿದರು– ಏಕೆಂದರೆ ನಂತರ ಪಾಂಡಿಚೇರಿಯಿಂದ ಪ್ರಕಟಿಸಿದ ಕಾವ್ಯದ ಬಹಳಷ್ಟು ಭಾಗವನ್ನು ಆ ಸಮಯದಲ್ಲಿ ಬರೆಯಲಾಗಿತ್ತು

ಮತ್ತು ಆಗ ಭವಿಷ್ಯತ್ತಿನ ಕಾರ್ಯಕ್ಕಾಗಿ ತಯಾರಿ ಮಾಡಿಕೊಳ್ಳಲಾಗಿತ್ತು. ತಮ್ಮ ತಂದೆ ಅಭಿವ್ಯಕ್ತಿಪಡಿಸಿದ್ದ ಕಟ್ಟುನಿಟ್ಟಿನ ಆಜ್ಞೆಯ ಪ್ರಕಾರ ಅವರು ಇಂಗ್ಲಂಡಿನಲ್ಲಿದ್ದಾಗ ಇಡಿಯಾಗಿ ಪಾಶ್ಚಿಮಾತ್ಯ ಶಿಕ್ಷಣವನ್ನು ಪಡೆಯಬೇಕಾಗಿತ್ತು, ಭಾರತ ಹಾಗೂ ಪೌರ್ವಾತ್ಯದ ಬಗ್ಗೆ ಯಾವ ಸಂಪರ್ಕವೂ ಬಂದಿರಲಿಲ್ಲ.[1] ಬರೋಡಾದಲ್ಲಿ ಆ ಕೊರತೆ ಇಲ್ಲದಂತೆ ಮಾಡಿಕೊಂಡರು. ಸಂಸ್ಕೃತವನ್ನು ಹಾಗೂ ಭಾರತದ ಅನೇಕ ಆಧುನಿಕ ಭಾಷೆಗಳನ್ನು ಕಲಿತರು. ಕೊನೆಯ ವರ್ಷಗಳ ಹೆಚ್ಚಿನ ಭಾಗವನ್ನು ನಿಶ್ಚಲನೀರವತೆಯಲ್ಲಿದ್ದ ರಾಜಕೀಯ ಚಟುವಟಿಕೆಯಿಂದ ರಜೆ ತೆಗೆದುಕೊಂಡಿದ್ದರು. ಏಕೆಂದರೆ ಅವರ ಸ್ಥಾನಮಾನದಿಂದಾಗಿ ಸಾಮಾಜಿಕ ಕ್ರಿಯೆಯನ್ನು ಕೈಕೊಳ್ಳದ ಹಾಗೆ ಅವರನ್ನು ಬಹಿಷ್ಕರಿಸಲಾಗಿತ್ತು. 1905ರಲ್ಲಾದ ಬಂಗ್ಲಾದೇಶದ ವಿಭಜನೆಯ ಚಳುವಳಿ ರೂಪದ ಗಲಭೆ ಸುರುವಾದಾಗ ಅವರಿಗೆ ಬರೋಡಾದಲ್ಲಿಯ ಸೇವೆಯನ್ನು ಬಿಟ್ಟುಕೊಡಲು ಹಾಗೂ ರಾಜಕೀಯ ಚಲನೆಯಲ್ಲಿ ತೆರೆದಿರಿಸಿಕೊಂಡವರ ರೀತಿಯಲ್ಲಿ ಕೂಡಿಕೊಳ್ಳಲು ಒಂದು ಅವಕಾಶ ದೊರೆಯಿತು. 1906ರಲ್ಲಿ ಅವರು ಬರೋಡಾವನ್ನು ಬಿಟ್ಟುಕೊಟ್ಟು ಕೊಲ್ಕತ್ತಾದಲ್ಲಿ ಹೊಸದಾಗಿ ಸ್ಥಾಪಿಸಿದ ಬಂಗಾಲ ನ್ಯಾಶನಲ್ ಕಾಲೇಜಿನ ಪ್ರಾಂಶುಪಾಲರೆಂದು ಕಾರ್ಯಕೈಕೊಳ್ಳಲು ಹೋದರು.

---

ಶ್ರೀ ಅರವಿಂದರು ಇಂಗ್ಲಂಡಿನಲ್ಲಿ ದೊರಕಿಸಿದ ಶಿಕ್ಷಣ ಅವರಿಗೆ ಪ್ರಾಚೀನ, ಮಧ್ಯಕಾಲದ ಹಾಗೂ ಆಧುನಿಕ ಯುರೋಪಿನ ಸಂಸ್ಕೃತಿ ಕುರಿತು ವಿಸ್ತಾರವಾದ ಪ್ರಸ್ತಾವನೆ ಕೊಟ್ಟಿತು. ಅವರು ಗ್ರೀಕ್ ಹಾಗೂ ಲ್ಯಾಟಿನ್ ಭಾಷೆಗಳ ಉಜ್ವಲ ಹಾಗೂ ಸಮರ್ಥ ವಿದ್ಯಾರ್ಥಿಯಾಗಿದ್ದರು. ಮ್ಯಾಂಚೆಸ್ಟರನಲ್ಲಿದ್ದಾಗ ಅವರು ತಮ್ಮ ಬಾಲ್ಯಕಾಲದಿಂದಲೇ ಫ್ರೆಂಚ್ ಭಾಷೆ ಕಲಿತುಕೊಂಡರು ಮತ್ತು ತಾವೇ ಸ್ವತಃ ಜರ್ಮನ್ ಹಾಗೂ ಇಟಾಲಿಯನ್ ಭಾಷೆಗಳನ್ನು ಅಭ್ಯಾಸ ಮಾಡಿದರು. ಅದು ಗಯಟೆ ಹಾಗೂ ಡಾಂಟೆಯವರ ಕೃತಿಗಳನ್ನು ಮೂಲದಲ್ಲಿದ್ದಂತೆ ಓದಲು ಸಾಧ್ಯವಾಗುವಂತೆ ಮಾಡಿತು. ಅವರು ಕ್ಯಾಂಬ್ರಿಜ್‌ನ ಟ್ರಾಪೋಸ್ (Tripos) ಪರೀಕ್ಷೆಯಲ್ಲಿ ಮೊದಲ ವರ್ಗದಲ್ಲಿ ಪಾಸಾದರು, ಭಾರತೀಯ ನಾಗರಿಕತೆಯ ಗತಕಾಲದ ಹಾಗೂ ಸದ್ಯದ ಮನೋಭಾವವನ್ನು ಜೀರ್ಣಿಸಿಕೊಂಡರು.

**(CWSA, 36/6)** **– ಶ್ರೀ ಅರವಿಂದರು**

*



ಯಾರ ತಟದ ಮೇಲೆ ಆನಂದ ಧಾಮದ ಹೂಗಳು
ಹಾರಾಡುತಿಹವೋ ಯಾರು ದಕ್ಷಿಣದ ಸಾಗರದತ್ತ
ಹರಿಯುತ್ತ ಸಾಗಿಹಳೋ ಆ ಗಂಗೆಯತ್ತ
ಸದಾಕಾಲ ಹಿಮಿರುವ ಪ್ರಾಂತಗಳತ್ತ
ತನ್ನ ಕಮಲ–ಸ್ವರ್ಗದಿಂದ ಸರಸ್ವತಿ ನನಗೆ ಕರೆ ಕೊಟ್ಟಿಹಳು

## ಮುಂಚಿನ ಕವನಗಳು

**ನ್ಯಾಯದಿಂದ ನಡೆದುಕೊಳ್ಳುವ ಮನುಷ್ಯ**

ಭರವಸೆ ಇಲ್ಲವೆ ಭಯ ಇವುಗಳಿಂದ ಚಲಿಸದ ಮನುಷ್ಯ ಯಾರಿದ್ದಾರೆ!
ಅವನನ್ನು ವಿವೇಕಿಗಳಾದ ದೇವರುಗಳು ಮೆಚ್ಚುವರು.
ಉದ್ದೇಶದಲಿ, ಸಂಕಲ್ಪದಲಿ ಅಚಂಚಲವಾಗಿರುವ ಅನಿಷ್ಟಕ್ಕೆ ಮಣಿಯದವ
ಅವನ ರೀತಿ ಸರಳ, ಸಾಮರ್ಥ್ಯಕ್ಕಾಗಿ ಸುವರ್ಣಕ್ಕಾಗಿ ಮಾರ್ಗ
ಬದಲಾಯಿಸುವವನಲ್ಲ

**ಹಿಡಿದುಕೊಳ್ಳಲು ಉಚ್ಚ ನೇರವಾದ ಮಾರ್ಗ:–**

ಅವನನ್ನು ಮಾತ್ರ ವಿವೇಕಿಗಳು, ವಿವೇಕಿಗಳಾದ ದೇವರುಗಳು ಕಾಮವಿಲ್ಲದೆ
ಪರಿಶುದ್ಧನಾದವನು ಎಂದು ನಂಬುವರು.

*

**ರಾಧಾಳ ಮನವಿ**

ಓ ಪ್ರೇಮವೆ, ಮರ್ತ್ಯ ಶಬ್ದಗಳು ದುರ್ಬಲವಾಗಿರುವುದರಿಂದ
ನಾನು ರಾಧಾ ಹೆಚ್ಚಿನದೇನನ್ನು ಕುರಿತು ಮಾತನಾಡಲಿ!
ಜೀವನದಲಿ, ಮೃತ್ಯುವಿನಲಿ,
ಸತ್ತೆಯಲಿ ಉಸಿರಾಟದಲಿ
ಬೇರೆ ಯಾವ ಪ್ರಭುವನ್ನೂ ಅಲ್ಲ ನಿನ್ನನ್ನು ಮಾತ್ರ ರಾಧಾ ಅರಸುವಳು.
ನಿನ್ನ ಪಾದಗಳ ಸುತ್ತ ಅಧಿಕಬಲದ ಜಾಲ ಸುತ್ತಿಕೊಂಡಿಹುದು
ಅಲ್ಲಿ ಅವರು ನನ್ನನ್ನು ಬಂಧನಕ್ಕೊಳಪಡಿಸಿಹರು
ನನ್ನನ್ನು ನಾನು ಒಪ್ಪಿಸಿಕೊಂಡಿಹೆನು,
ಗುಲಾಮಗಿರಿಗೆ ನನ್ನ ಮನಸ್ಸು ಒಪ್ಪಿಕೊಂಡಿಹುದು
ನಿನ್ನದಕ್ಕಿಂತ ಹೆಚ್ಚು ಮಾಧುರ್ಯವಿರುವ ಹೃದಯದ ಮಾಧುರ್ಯವನು
ನಾನು ಕಂಡುಕೊಂಡಿಲ್ಲ.
ನಾನು ರಾಧಾ ಯೋಚಿಸದೆ ನನ್ನ ಜೀವನದ
ಮಧುರ ಮಧುರ ಪ್ರಭುವಿಲ್ಲದೆ

– ಈಗ ನೀನು ಈ ಅತ್ಯಂತ ಅಧಿಕಬಲದ ಎಳೆಗೆ ಜೋರಾಗಿ ಹೊಡೆ–
ಒಂದು ತಾಸಿನವರೆಗಾದರೂ ಜೀವಿಸಲು ನನ್ನಲ್ಲಿ ಸಾಮರ್ಥ್ಯವಿರಲಿಲ್ಲ
ಅವನ ಅನುಪಸ್ಥಿತಿ ನನ್ನಾತ್ಮವನು ಖಡ್ಗದಿಂದ ಕೊಂದುಹಾಕಿಹುದು.
ಒಂದು ಚಿಕ್ಕಕ್ಷಣ ನಿನ್ನನ್ನು ನನ್ನ ಕಣ್ಣುಗಳಿಂದ ಕದ್ದುದಾದರೆ
ನನ್ನೊಳಗಿನ ಹೃದಯ ಮರಣ ಹೊಂದುವುದು
ಬಾಲಿಕೆಯರು ಆಳವಾದುದರ ಸಂಪತ್ತನ್ನು ಕಾಪಾಡಿಕೊಂಡು ಬರುವ ಹಾಗೆ
ನಾನು ನಿನ್ನನ್ನೂ ನನ್ನ ಕುತ್ತಿಗೆಯ ಸುತ್ತ ಹಾಗೂ ಬಹುಮಾನಿತ ಎದೆಯ
ಮೇಲೆ ಕಟ್ಟಿ ಹಾಕುವೆ

*

## ವೈಭವಯುತ ಸೂರ್ಯ ಅಸ್ತನಾದ ಕಾರಣ ರೋದಿಸುವುದು

ಮರುದಿನದ ಮುಂಜಾವು ಮರಳಿ ಪೂರ್ವದಿಶೆಯಲಿ ಹೊಂಬಣ್ಣವನು
ಬೆಳಗಿಸುವುದಾದರೂ ವೈಭವಯುತ ಸೂರ್ಯ ಅಸ್ತನಾದುದಕೆ ಅಳುವುದು,
ವಿಧಿಗೆ ವಶವಾಗುವ ಶಕ್ತಿಯಿಂದಲೇ ಪ್ರಬಲ ಸಾಮರ್ಥ್ಯಗಳು
ದ್ವಿಗುಣ ಬಲವ ಪಡೆವವಾದರೂ ಅದಕಾಗಿ ಶೋಕಿಸುವುದು,
ಯಾವ ವೇದನೆಯ ಸ್ನೇಹಪರ ಹೋರಾಟವಿಲ್ಲದೆಯೆ ಸಂತೋಷ
ಅಸ್ತಿತ್ವದಲ್ಲಿರದೋ ಅಂತಹದರಿಂದ ಮುದುಡಿಕೊಳ್ಳುವುದು,
ದೂರದ ಜೀವನಕೆ ಮಂದಸ್ಮಿತದಿ ಸನ್ನೆ ಮಾಡಿ ಕರೆವ
ಸತತ ಉಸಿರಾಡಿಸುವುದಕೆ ಸೇತುವೆಯಾಗಿರುವ ಮೃತ್ಯುವನು
ಅತಿಶಯ ಭಯದ ವಿಷಯವನ್ನಾಗಿ ಮಾಡುವುದು;
ಉಪಶಮನ ನೀಡಲೆಂದೇ ಇರುವ ಒಣಗಿದ ಕಣ್ಣುಗಳ
ನಿರಾಶೆ, ದುಃಖ, ದುರಂತದ ಕೊರಗು ಇಲ್ಲವೆ
ಹೃದಯವನು ಕಿತ್ತು ಹಾಕುವ ದುರದೃಷ್ಟದ ಕಣ್ಣೀರು,
ಮಾನವನ ಎಲ್ಲ ಪ್ರೇತಕಳೆಯ ಭಯಗಳ ಗುಂಪು
ಇವೆಲ್ಲ ಜನ್ಮತಾಳಿಹವು ಅಮರ ಮಾನವನ ಮಿತಿ ಅವನ
ಜೀವನದ ಕಾಲವೆಂದು ನಂಬುವ ಮೂರ್ಖತನದಿಂದ.

*

### ಈ ಮಾತಿನ ಅರ್ಥವೇನು

ಹನನ ಮಾಡಿದವನ ಹಾಗೂ ಹತನಾದವನ ಈ ಮಾತಿನ ಅರ್ಥವೇನು?
ಹನನ ಮಾಡಲು ಖಡ್ಗಗಳು ಹರಿತವಾಗಿರುವುದಿಲ್ಲ ಇಲ್ಲವೆ ಪ್ರವಾಹಗಳು
ಜ್ವಲಿಸುವ ಆತ್ಮವನು ಶಮನಗೊಳಿಸಲಾಗುವುದಿಲ್ಲ.
ಮರ್ತ್ಯತೆ ಹಾಗೂ ನೋವು ಹೆಚ್ಚು ಬಲವಿರುವ ಹಂತದ
ಕೇವಲ ಉಚ್ಚತರ ಸಂಪ್ರದಾಯಗಳು.
ವೀರೋಚಿತ ನಾಯಕನೊಬ್ಬ ತನ್ನ ದುರದೃಷ್ಟದಿಂದ ಬೆಂಬತ್ತಿದವನಾಗಿ
ಮೇಲ್ಗಡೆ ಕಿತ್ತುಹೋದ ಭವ್ಯ ಜಗತ್ತಿನ ಕಂಬದಂತೆ ಬೀಳುತ್ತಿರುವಾಗ
ಜನರ ಹೃದಯ ನಡುಗುವಂತೆ ಮಾಡುವನು ಭಯಭಕ್ತಿಯನು
ವ್ಯಾಪನಗೊಳಿಸುವನು

ಕೇಳಿಸಿಕೊಳ್ಳುವ ಜನರ ಗುಂಪು ನಿಶ್ಚಲ ನೀರವತೆಯಲ್ಲಿ ಕುಳಿತುಕೊಳ್ಳುವುದು
ಇಲ್ಲವೆ ಹಾತಾಶೆಗೊಳಗಾಗಿ ರೋದಿಸುವುದು,
ಈ ಮಧ್ಯೆ ರಂಗಸ್ಥಳದ ಹಿಂದೆ ನಟ ನಿಟ್ಟುಸಿರುಬಿಡುವ
ಅದು ಆಳವಾದ ಶ್ವಾಸಕೋಶವಿರುವವನ ವಿಶ್ರಾಂತಿ,
ತಾನೇನಾಗಿದ್ದನೆಂಬುದನು ದೂರವಿರಿಸುವನು,
ಕಾದುಕೊಂಡಿದ್ದ ಇಲ್ಲವೆ ಹಾರಾಟಗಳಲ್ಲಿ ತೊಡಗಿದ್ದ ಮಿತ್ರರ ಜೊತೆ
ಮಾತನಾಡುವನು
ಅಚಂಚಲವಾದ ಮುಕ್ತಾಯಗೊಳ್ಳುತ್ತಿರುವ ದೃಶ್ಯವನು ಗಮನಿಸುವನು,
ಹಾಗಿದ್ದಾಗಲೂ ಹತರಾಗುವವರ ಗಾಯಗೊಳ್ಳದ ಆತ್ಮಗಳು
ನಮ್ಮ ದೃಷ್ಟಿಯಾಚೆಗೆ ಸಾಗುತ್ತ ಮತ್ತೆ ಜೀವಿಸುವವು.

**(CWSA, 2/43, 32–33, 182)** **– ಶ್ರೀ ಅರವಿಂದರು**

*

## ಮುಂಚಿನ ಗದ್ಯ ಬರಹಗಳು

### ವಿಕ್ರಮಾದಿತ್ಯನ ಕಾಲದ ಭಾರತ

ವಿಕ್ರಮಾದಿತ್ಯನ ಕಾಲದ ಭಾರತದತ್ತ ನೋಡಿರಿ. ಅದರ ಸೌಂದರ್ಯ ಎಷ್ಟೊಂದು ಅತ್ಯಲಂಕಾರದ್ದಾಗಿತ್ತು! ಅದರ ಕವಿಗಳ ಧ್ವನಿಗಳು ಎಷ್ಟು

ಮೇಲಂತಸ್ತಿನವಾಗಿದ್ದವು! ಬಣ್ಣ ಚಿತ್ರಕಾರರು ಚಿತ್ರ ರಚಿಸುವ ಲೆಕ್ಕಣಿಕೆ ಎಷ್ಟು ಇಂದ್ರಿಯಗಳಿಗೆ ಆನಂದವನ್ನುಂಟು ಮಾಡುವಂತಹದಾಗಿತ್ತು, ಅದರ ಶಿಲ್ಪಿಗಳ ಬಾಹ್ಯ ರೇಖೆಗಳು ಎಷ್ಟು ಆಲಸಿಕೆಯಿಂದ ಹಿತಕರವಾಗಿದ್ದವು! ಆ ಕಾಲದಲ್ಲಿ ಪ್ರತಿಯೊಬ್ಬ ಮನುಷ್ಯ ತನಗೇ ಅದ್ಭುತವಾಗಿದ್ದ ಹಾಗೂ ಅವನೊಂದಿಗಿದ್ದ ಬಹಳಷ್ಟು ಜನರು ಅದ್ಭುತರಾಗಿದ್ದರು. ಆದರೆ ಅತ್ಯಂತ ಅಧಿಕ ಬಲವಿದ್ದ ಅದ್ಭುತಗಳೆಂದರೆ ತತ್ವಜ್ಞಾನಿಗಳಾಗಿದ್ದರು, ಅದೆಂತಹ ತತ್ವಜ್ಞಾನವಾಗಿತ್ತು! ಏಕೆಂದರೆ ಧ್ಯಾನದ ರೆಕ್ಕೆಗಳುಳ್ಳ ಪಾದುಕೆಗಳ ಮೇಲೆ ಅದು ಅತ್ಯುನ್ನತ ಸ್ವರ್ಗದತ್ತ ಏರಿ ಹೋಯಿತು, ಸೂರ್ಯನ ವಿಸ್ತಾರವಾದ ಜ್ವಾಲೆಗಳ ಮೇಲೆ, ಸುತ್ತು ಹೊಡೆಯುತ್ತಿರುವ ತಾರೆಗಳ ಮೇಲೆ ಎತ್ತರದಲ್ಲಿ ಹಾರಾಡಿತು; ಅಲ್ಲಿ ಜ್ವಲಿಸುತ್ತಿದ್ದ ವಿಶ್ವದ ಗೋಡೆಗಳು ಗಾಳಿ ಇಲ್ಲವೆ ಮೋಡ ಇವುಗಳನ್ನು ಹೊಂದಿರದೆ ನಿರಪರಾಧಿಗಳಾಗಿದ್ದವು ಮತ್ತು ಅಲ್ಲಿ ಅಸ್ತಿತ್ವದ ಪ್ರಜ್ವಲಿಸುತ್ತಿರುವ ತಿರುಳಿನಲ್ಲಿ ಅತ್ಯಂತ ಉಚ್ಚ ದೇವನ ಮುಖವನ್ನು ನೋಡಲಾಗಿತ್ತು.

ಅದು ದೇವನನ್ನು ನೋಡಿತು, ನಾಶವಾಗಲಿಲ್ಲ, ಅದಕ್ಕೂ ಹೆಚ್ಚಾಗಿ ಪೃಥ್ವಿಯ ಮೇಲೆ ಹಿಂದೆ ಬಿದ್ದುಬಿಟ್ಟಿತು, ಅದು ಅತಿಯಾದ ಪ್ರಕಾಶದಿಂದ ನಾಶಮಾಡಲಿಲ್ಲ, ಅದು ಗುಣುಗುಣುಸುವಿಕೆಯ ತುಟಿಗಳ ರಹಸ್ಯ ಭಾರ ಹೊತ್ತುಕೊಂಡಿತ್ತು, ಮಾನವರ ಮಾತನ್ನು ಉಚ್ಚರಿಸಲು ಅತಿ ಭವ್ಯವಾಗಿದ್ದವು ಇಲ್ಲವೆ ಮನುಷ್ಯನ ಮಿದುಳು ತಿಳಿದುಕೊಳ್ಳಲು ಆಗ ಅದು ಹಾಗಿದ್ದಿತು. ಆದಾಗ್ಯೂ ಉರುಳಿ ಹೋಗುತ್ತಿದ್ದ ಐದು ಶತಮಾನಗಳು ಮುಕ್ತಾಯಗೊಂಡಿರಲಿಲ್ಲ, ಆಗ ನಿದ್ರೆರಹಿತ, ಎಲ್ಲವನ್ನೂ ನೋಡುವ ಸೂರ್ಯ ಮಹೊಮೆಟ್ (Mahomet)ನ ಪುತ್ರರು, ಅದರ ಗೌರವಪೂರ್ಣ ಹಸಿರು ಕ್ಷೇತ್ರಗಳ ಮೇಲೆ ಮಿಡತೆಗಳ ಹಾಗೆ ಧಾರೆಯೆರೆಯೆರೆಯುವುದನ್ನು ಹಾಗೂ, ಭಗ್ನಗೊಂಡ ಅಧಿಕಬಲದ ಆಧಾರ ರಚನೆ ನದಿಯ ರಭಸದ ಇಳಿತದಲ್ಲಿ ಅಶುದ್ಧ ಭಾಷೆ ಉಪಯೋಗಿಸುತ್ತ ರಾತ್ರಿಯ ತೀರಗಳಲ್ಲಿ ಸುತ್ತಿ ಕೆಳಗೆ ಬೀಳುತ್ತಿರುವುದನ್ನು ನೋಡಿದ.

**(CWSA, 1/21)** **– ಶ್ರೀ ಅರವಿಂದರು**

*

## ವಿಶ್ವದಲ್ಲಿ ಲಯಬದ್ಧ ಸಾಮರಸ್ಯ

ಮೆರೆಡಿಥ್ (Meredith) ಕರೆದ ಹಾಗೆ ಸ್ವರ್ಗದ ಮಿದುಳಿನಂತಿರುವ ತಾರೆಗಳನ್ನು ನೋಡಿರಿ. ಸೌಂದರ್ಯದ ಧೂಪದೊಂದಿಗೆ ರಾತ್ರಿಯನ್ನು ಸುವಾಸನೆಯಿಂದ ತುಂಬಲು ತಮ್ಮ ಸುವರ್ಣ ನಿರೋಧಕಗಳೊಂದಿಗೆ ಅವು ಹೇಗೆ ಮುಂದೆ ಸಾಗುತ್ತಿವೆ! ಅವು ಸ್ವರ್ಗದ ನೀಲಿ ಬಣ್ಣದ ಪಪೈರಸ ಕಾಗದದ ಮೇಲೆ ತೆವಳುತ್ತಿರುವ ಹುಳುಗಳ ಅತಿಥ್ಯ ಮಾಡುವುದಗಳು ಗುಂಪುಗುಂಪಾಗಿ ಮುಸುಕು ಹಾಕುತ್ತಿರುವ ಗುಂಗಾಡುಗಳು, ಉರಿಯುತ್ತಿರುವ ಧೂಳಿನ ಮೋಡ, ಪ್ರಕೃತಿಯ ತತ್ಕ್ಷಣದ ಪೆನ್ಸಿಲ್‌ನಿಂದ ಹಿಡಿದುಕೊಂಡ ಹಾಗೂ ಶಾಶ್ವತಗೊಳಿಸಿದ, ಪ್ರಕಾಶಿಸುತ್ತಿರುವ ಅಣುಗಳ ಅದ್ಭುತ ಪರಿಣಾಮ. ಆದಾಗ್ಯೂ ಅವು ಇವುಗಳಲ್ಲಿ ಯಾವೂ ಅಲ್ಲ, ಆದರೆ ಜಗತ್ತುಗಳ ವಿಶಾಲವಾದ ಪರಸ್ಪರ ಸಂಬಂಧ ಹೊಂದಿರುವ ಸಂಪನ್ಮೂಲಗಳು. ಆ ಉರಿಯುತ್ತಿರುವ ಗೋಲಗಳು ಅನಂತ ಬರಿದಾದುದರಲ್ಲಿ ನಿಶ್ಚಲನೀರವತೆಯಿಂದ ಹೊರಳುತ್ತ ಸ್ಥಳಾವಕಾಶದ ಶಾಶ್ವತತೆಯಲ್ಲಿ ಪ್ರತ್ಯೇಕಗೊಂಡಿವೆ. ಅವು ಪ್ರತ್ಯೇಕ ಗುಣಲಕ್ಷಣ ಹೊಂದಿವೆ ಹಾಗೂ ಏಕಾಕಿಯಾಗಿವೆ. ಆದರೆ ಒಂದರಿಂದ ಇನ್ನೊಂದಕ್ಕೆ ಕಂಡುಹಿಡಿಯಲಾಗದ ಹಾಗೂ ಅಪ್ರಜ್ಞೆಯ ಅದ್ಭುತ ಚುಂಬಕ ಶಕ್ತಿಗಳು, ಆಶ್ಚರ್ಯಕಾರಕ ಹತ್ತಿರ ಸೇರಿಸದಿರುವಿಕೆಗಳು ಇರುವ ಪ್ರಭಾವದಿಂದ ರೋಮಾಂಚನಗೊಳಿಸುತ್ತದೆ, ಅವು ವಿರೋಧಿಸುವ ಚಂಡಮಾರುತಗಳ ಹಾಗೆ ತಡೆಒಡ್ಡುತ್ತವೆ ಇಲ್ಲವೆ ದಟ್ಟ ಅರಿವೆ(canvas)ಯನ್ನು ಉಬ್ಬಿಸುವ ರೀತಿಯಲ್ಲಿ ಮುನ್ನೂಕುತ್ತವೆ ಮತ್ತು ಒಂದೊಂದೇ ಇರುವ ಈ ಭವ್ಯತೆಗಳನ್ನು ಜಗತ್ತುಗಳ ಒಂದು ಪರಮೋಚ್ಚ ಸಾಮರಸ್ಯದಲ್ಲಿ ಕಟ್ಟಿಹಾಕುತ್ತವೆ; ಸೂರ್ಯ ಮಂಡಲದ ಸಾಮರಸ್ಯದ ಬಗ್ಗೆ ನಮಗೆ ತಿಳಿದಿದೆ, ಅದೆಷ್ಟು ಖ್ಯಾತಿವೆತ್ತ ರೀತಿಯಲ್ಲಿ ಪರಿಪೂರ್ಣವಾಗಿದೆ, ಬೇರ್ಪಟ್ಟ ಸ್ಥಿತಿಯಲ್ಲಿ ಅದೆಷ್ಟು ಏಕವಾಗಿದೆ, ಏಕತೆಯಲ್ಲಿ ಅದು ಪ್ರತ್ಯೇಕ ಗುಣಲಕ್ಷಣವನ್ನು ಹೇಗೆ ಹೊಂದಿದೆ! ತಾರೆ ತಾರೆಗೆ ಹೇಗೆ ಉತ್ತರ ನೀಡುತ್ತದೆ, ಮತ್ತು ಏಳು ಅದೃಷ್ಟದ ಅಲೆದಾಡುತ್ತಿರುವ ದೊರೆಗಳು, ಅವು ಲಕ್ಷಾನುಗಟ್ಟಲೆ ಮೈಲುಗಳ ದೂರದಲ್ಲಿ ಉರುಳುತ್ತಿದ್ದ ಹಾಗೆ ತಮ್ಮೊಡನೆ ಗೋಚರಿಸದ ಗುರುತ್ವಾಕರ್ಷಣದ ಎಳೆಯೊಂದನ್ನು ಎಳೆದುಕೊಂಡು ಹೋಗುತ್ತವೆ, ಅದು ಅವುಗಳನ್ನು ಎಂದೆಂದಿಗೂ ಸೂರ್ಯನಿಗೆ ಕಟ್ಟಿಹಾಕುತ್ತದೆ. ಸ್ಥಿರಗೊಂಡಿವೆ ಎಂದು

ನಾವು ಕರೆಯುವ ಪ್ರಕಾಶಗಳಲ್ಲಿ ಪ್ರತಿಯೊಂದು ಒಂದು ಸೂರ್ಯನಂತಿರುತ್ತದೆ ಎಂದು ನಾವು ನಂಬುತ್ತೇವೆ. ಗ್ರಹಗಳು ಅಳಿಕೆ ಮಾಡಲಾಗದ ಪರಿಭ್ರಮಣೆಗಳನ್ನು ಒಂದು ಚಲಿಸಲಾಗದ ಅಮರ ತಾರೆಯ ಸುತ್ತ ಕುಣಿಯುತ್ತ ಮಾಡುತ್ತವೆ. ಹೆಚ್ಚಿನದೆನೆಂದರೆ ನಮಗೆ ಸ್ಥಿರವಾದದ್ದು ಎಂದೆನಿಸುವುದು ದೇವನ ಒಂದು ಗ್ರಹ ಎಂದು ಊಹಿಸುವುದು ಮಿತಿಮೀರಿದ್ದಾಗಿರುತ್ತದೆಯೆ? ಬಹುಶಃ ಚಂದ್ರನ ಮೇಲೆ ವಾಸಿಸುತ್ತಿರುವವರಿಗೆ ಈ ಎಡವುತ್ತ ಉರುಳುವ ಪೃಥ್ವಿ, ಸ್ಥಿರಗೊಂಡದ್ದು ಹಾಗೂ ಪ್ರಕಾಶಿಸುವಂತಹದು ಎಂದು ತೋರಿಬರಬಹುದು. ಬಹುಶಃ ಪ್ರಕಾಶದ ಪ್ರಭು ಎಂದು ನಾವು ಪೂಜಿಸುತ್ತಿರುವ ಮಹಿಮಾನ್ವಿತ ಜ್ವಾಲೆಯ ಚೆಂಡು ಹೆಚ್ಚು ಭವ್ಯವಾಗಿರುವ ಹಾಗೂ ಹೆಚ್ಚು ಪ್ರಕಾಶಮಾನವಾದ ಯಾವುದೋ ರಾಜತ್ವದ ಮಾಂಡಲಿಕ ಪ್ರಭುವಾಗಿರಬಹುದು. ಹೀಗೆ ನಾವು ವಿಶ್ವವನ್ನು ಗೌಣಸಾಮರಸ್ಯ–ಗಳಿರುವ ಸರಣಿ ಎಂದು, ಅವುಗಳಲ್ಲಿ ಪ್ರತಿಯೊಂದು ಸಾಮರಸ್ಯ ತನ್ನಲ್ಲಿ ಪರಿಪೂರ್ಣ ಎಂದು ಹಾಗೂ ಏಕೈಕ, ವಿಶ್ವಂಭರ ಸಾಮರಸ್ಯಕ್ಕೆ ಪರಾಕಾಷ್ಠೆ ತರಲು ಸಹಾಯ ಮಾಡುತ್ತದೆ ಎಂದು ಕಲ್ಪನೆ ಮಾಡಿಕೊಳ್ಳಬಹುದು.

**(CWSA, 1/28–29)** **– ಶ್ರೀ ಅರವಿಂದರು**

*

## ಎಲ್ಲೆಡೆಯಲ್ಲಿಯೂ ಇರುವ ದೇವನ ವೈಶಾಲ್ಯ

ದೇವ ತಾರೆಯಲ್ಲಿ ಉರಿಯುತ್ತಾನೆ, ಗುಲಾಬಿ ಹೂವಿನಲ್ಲಿ ಅರಳುತ್ತಾನೆ. ಅವನ ರಥದಿಂದ ರಭಸದಿಂದ ಬರುವ ಧೂಳು ಮೋಡ. ಅವನ ಮನೋವೃತ್ತಿಗಳನ್ನು ನೊರೆಯಾಗಿ ಹೊರಚೆಲ್ಲುವ ಕನ್ನಡಿ ಸಮುದ್ರವಾಗಿರುತ್ತದೆ. ಅವನ ಉಸಿರಾಟ ಗಾಳಿಯಲ್ಲಿ ಸೀಟಿ ಊದುತ್ತದೆ, ಅವನ ಭಾವೋದ್ರೇಕ ಸೂರ್ಯಾಸ್ತದಲ್ಲಿ ಕೆಂಪು ಬಣ್ಣದ್ದಾಗಿರುತ್ತದೆ, ಅವನ ತಳಮಳ ಮಳೆಯಲ್ಲಿ ಕೆಳಗೆ ಬೀಳುತ್ತದೆ. ಅಂಧಕಾರ ನೇರಳೆ ಬಣ್ಣದ ಅವನ ಕಣ್ಣುಗಳ ಭವ್ಯತೆಯಲ್ಲಿ ಕಣ್ಣುರೆಪ್ಪೆಗಳು ಮೃದುವಾಗಿ ಬೀಳುವುದಾಗಿದೆ. ಉಲ್ಲಾಸದ ಅರುಣೋದಯ ಅವನ ಉದ್ದೀಪನಗೊಳಿಸಿದ ಹಾಗೂ ಸಂತೋಷದ ಮುಖ ನಿದ್ರೆಗಾಗಿದ್ದ ಹೂವಿನ ತಲೆದಿಂಬನ್ನು ಬಿಟ್ಟುಕೊಡುವಾಗಿನದಾಗಿದೆ. ಚಂದ್ರನ ಬೆಳಕು ಥಟ್ಟನೆ ಹೊಳೆದು ಮರೆಯಾಗುವ ನಿದ್ರಾಜನಕ ಮಿನುಗು, ಆಗ ಅವುಗಳ ಮೂಲಕ

ಎದೆಗಳು ಶಾಶ್ವತೆಯ ಭಾರವನ್ನು ಹೊತ್ತುಕೊಂಡು ಬೆಳಗುತ್ತವೆ. ಅವನಿಗೆ ಮಾನವ ಅಭೀಪ್ಸೆಯ ಕ್ಷುದ್ರ ಕಲ್ಪನೆಗಳು ನಮ್ಮ ಸಣ್ಣತನದ ಸಿಡುಕುಗಳು, ನಮ್ಮ ಕರುಣಾಜನಕ ರೋಷಗಳು, ಭಾವಾತಿರೇಕದ ಭಾವೋದ್ರೇಕಗಳು ಏನಾಗಿರುತ್ತವೆ! ಅವನು ನಮ್ಮ ಬಗ್ಗೆ ಯೋಚಿಸುವ ಕೃಪೆದೋರಿದರೆ ನಮ್ಮ ಸಾಮರ್ಥ್ಯದ ಒಲವನ್ನು ಇಡಿಯಾಗಿ ತಪ್ಪಾಗಿ ತಿಳಿದ ಅಸಮರ್ಥ ನಟರು ಎಂದು ಯೋಚಿಸುತ್ತಾನೆ. ಹಾಸ್ಯಗಾರ ವಾಗಾಡಂಬರವುಳ್ಳ ರಕ್ತಧಮನಿಗಳಲ್ಲಿ ನಾಟಕೀಯವಾಗಿ ಉಚ್ಚರಿಸುತ್ತಾನೆ. ದುಃಖವನ್ನು ಪ್ರದರ್ಶಿಸುವ ಕಲಾಕಾರ ಮೂಕಾಭಿನಯದ ಸುಮ್ಮನಿರುವ ಅಂತರಗಳಲ್ಲಿ ವಿದೂಷಕನಾಗಿ ಪಾತ್ರವಹಿಸುತ್ತಾನೆ, ರೋಮಿಯೋನ ಭಾವೋದ್ರೇಕವನ್ನು ಬಣ್ಣದಲ್ಲಿ ರಚಿಸಬಹುದು. ಕ್ಲೋಟೆನ್ (Clten)ನ ಒಡ್ಡೊಡ್ಡಾಗಿರುವ ಹೊಂದದಿರುವಿಕೆಯ ಎರಕ ಮಾಡಬಹುದು. ದೇವ ತನ್ನ ಸಂತೋಷಕರ ಕುರುಳನ್ನು ಶುಭ್ರವಾದ ದೈವೀ ಸೌಂದರ್ಯದ ಎದೆಯಿಂದ ಎತ್ತುತ್ತ ತನ್ನ ಇಣುಕು ನೋಟದ ಮಿಂಚನ್ನು ನಮ್ಮ ವಿಚಿತ್ರ ವರ್ತನೆಗಳ ಮೇಲೆ ಹಾರಿಸುತ್ತಾನೆ, ನಾವು ಗುಡುಗಿನಲ್ಲಿ ಅವನ ಅಣಕ ಅಪಹಾಸ್ಯದ ತಿರಸ್ಕಾರದಿಂದ ಕೂಡಿದ ಕೂಗನ್ನು ನಾವು ಕೇಳುತ್ತೇವೆ, ಅವನು ಗಂಭೀರ ಯೋಚನೆಯನ್ನು ಅಷ್ಟೊಮದು ಅಸಂಬದ್ಧ, ತರ್ಕಬದ್ಧವಲ್ಲದ ನಗೆನಾಟಕದ ಮೇಲೆ ದುಂದು ಮಾಡಬೇಕು!

**(CWSA, 1/31–32)** **– ಶ್ರೀ ಅರವಿಂದರು**

*

**ಪಶು ಹಾಗೂ ಮನುಷ್ಯ ಇವರಲ್ಲಿರುವ ಸೌಂದರ್ಯ ಹಾಗೂ ಪ್ರೇಮ**

ನೀನು ನಿಮ್ನ ಮಟ್ಟದ ಪಶು ಸ್ವಭಾವ ಮತ್ತು ಉಚ್ಚತರ ಆಧ್ಯಾತ್ಮಿಕ ಸ್ವಭಾವ ಕುರಿತು ಮಾತನಾಡಿದೆ, ಹಾಗೆ ಮಾತನಾಡುವಾಗ ಮಾನವ ಸತ್ತೆಗೆ ವಿಶಿಷ್ಟವಾದ ಗುಣಲಕ್ಷಣಗಳು ಅವನು ಪಾಲುಗೊಳ್ಳುವ ಕೆಲವು ಹಾಗೂ ಎಲ್ಲ ಪಶುಗಳಲ್ಲಿರುವ ಗುಣಲಕ್ಷಣಗಳಿಗಿಂತ ಉಚ್ಚತರವಾಗಿರುತ್ತವೆ ಎಂಬುದನ್ನು ಸ್ವೀಕರಿಸಿದ್ದೆ. ಮಿಥ್ಯೆಯ ಹಿಂದೆ ಅಡಗಿಕೊಳ್ಳುವುದು ಪ್ರೇಮಕ್ಕಿಂತ ಉಚ್ಚತರವಾಗಿರುತ್ತದೆಯೆ! ಆ ವಿಚಾರವನ್ನು ಅಸಡ್ಡೆಯಿಂದ ತಿರಸ್ಕರಿಸುವಿ, ಆದಾಗ್ಯೂ ಮಿಥ್ಯೆಯ ಹಿಂದೆ ಅಡಗಿಕೊಳ್ಳುವುದು ಮಾನವ ಸತ್ತೆಗೆ ವಿಶಿಷ್ಟವಾದದ್ದಾಗಿರುತ್ತದೆ, ಆದರೆ ಅತ್ಯಂತ

ಆಧ್ಯಾತ್ಮಿಕ ರೀತಿಯ ಪ್ರೇಮವನ್ನು ಕಾಡು ಪಾರಿವಾಳದೊಂದಿಗೆ ಮತ್ತು ಭಾರತದ ಜವಳು ಪ್ರದೇಶದಲ್ಲಿರುವ ಬಾತುಕೋಳಿಯೊಂದಿಗೆ ಪಾಲುಗೊಳ್ಳುತ್ತಾನೆ. ಅದು ಜೀವಂತವಿರುವ ರಾತ್ರಿಯಲ್ಲಿ ನಿದ್ರೆಮಾಡಲಾಗುವುದಿಲ್ಲ, ಏಕೆಂದರೆ ಪ್ರಕೃತಿ ಅವನ ಜೊತೆಗಾರನೊಂದಿಗೆ ದೂರವಿರಿಸಿದೆ, ಆದರೆ ತಣ್ಣಗಿರುವ, ದಡದತ್ತ ಸಾಗುತ್ತಿರುವ ನೀರಿಗೆ ಅಡ್ಡಲಾಗಿ ಎಂದೆಂದಿಗೂ ಗೋಳಿಡುತ್ತಾನೆ, ಅದರಿಂದಾಗಿ ಅವಳು ಅವನ ತಳಮಳಕ್ಕೆ ಒಂದು ಶಬ್ದದಿಂದ ಮಾತ್ರ ಸಮಾಧಾನ ತಂದುಕೊಂಡುತ್ತಾಳೆ, ಅಡವಿಯಲ್ಲಿ ಅಲೆದಾಡುತ್ತಿರುವ ಪ್ರಯಾಣಿಕರು "ಪ್ರೇಮವೇ ನನ್ನೊಡನೆ ಮಾತನಾಡು" ಎಂಬ ಅವನ ಹತಾಶ ಕೂಗನ್ನು ಕೇಳುತ್ತಾರೆ.

ಇಲ್ಲ, ಒಬ್ಬ ಸುಂದರವಾಗಿರುತ್ತಾನೆ– ಇನ್ನೊಬ್ಬ ಕಡಿಮೆ ಸುಂದರವಾಗಿರುತ್ತಾನೆ ಇಲ್ಲವೆ ಅವನಲ್ಲಿ ಸೌಂದರ್ಯವಿರುವುದೇ ಇಲ್ಲ. ಸೌಂದರ್ಯ ಪಶುವಾಗಿರುವುದರಲ್ಲಿ ಇಲ್ಲವೆ ಪಶುವಿಗಿಂತ ಹೆಚ್ಚಿನದಾದ ಸತ್ತೆಯಲ್ಲಿ ವಾಸಿಸುವುದಿಲ್ಲ, ಆದರೆ ಬಹಳ ಭಿನ್ನವಾದ ಏನೋ ಒಂದರಲ್ಲಿರುತ್ತದೆ.

**(CWSA, 1/63)** **– ಶ್ರೀ ಅರವಿಂದರು**

*

**ಉತ್ಕ್ರಾಂತಿ ನಿರ್ಮೂಲ ಮಾಡುವುದಿಲ್ಲ, ಆದರೆ ಪರಿಪೂರ್ಣಗೊಳಿಸುತ್ತದೆ**

ಉತ್ಕ್ರಾಂತಿ ನಿರ್ಮೂಲ ಮಾಡುವುದಿಲ್ಲ, ಆದರೆ ಪರಿಪೂರ್ಣಗೊಳಿಸುತ್ತದೆ. ಹುಲಿಯಿಂದ ಅರಳಿ ಬಂದ ಕ್ರೌರ್ಯ ಅದರ ಬೀಜಗಳನ್ನು ಮನುಷ್ಯನ ಸ್ವಭಾವದ ಕೆಳಸ್ತರದಲ್ಲಿ ಹೊಂದಿರುತ್ತದೆ, ಅದನ್ನು ಒಂದು ತಲೆಮಾರಿನಲ್ಲಿ ಕನಿಷ್ಠಮಟ್ಟಕ್ಕಿಳಿಸಿದರೆ ಇನ್ನೊಂದರಲ್ಲಿ ಅದು ವಿಸ್ತರಿಸಿಕೊಳ್ಳುತ್ತದೆ. ಮನುಷ್ಯ ಅದೇಕಾಲಕ್ಕೆ ತನ್ನದೇ ಸತ್ತೆಯ ರಕ್ತಸುರಿಸುತ್ತಿರುವ ಬೇರುಗಳಿಂದ ಎಳೆದು ಮೇಲಕ್ಕೆ ತರದೆ ಮನುಷ್ಯ ಕ್ರೌರ್ಯವನ್ನು ಬೇರುಸಹಿತ ಕಿತ್ತುಹಾಕಲಾಗುವುದಿಲ್ಲ. ಆದಾಗ್ಯೂ ಹುಲಿಯಲ್ಲಿರುವ ಉಗ್ರ ಸ್ವಭಾವ ಆಕರ್ಷಕವಾಗಿರುತ್ತದೆ, ನ್ಯಾಯಯುತವಾಗಿರುತ್ತದೆ, ಕಲಾತ್ಮಕವಾಗಿರುತ್ತದೆ, ಅದೇ ಉಗ್ರಸ್ವಭಾವ ಮನುಷ್ಯನಲ್ಲಿ ಅನಾಗರಿಕ ಒರಟು ಮತ್ತು ಹೊಂದಿಕೊಳ್ಳಹದಂತಾಗಿರುತ್ತದೆ, ಅದನ್ನು ಸುಸಂಸ್ಕೃತಗೊಳಿಸಬೇಕು, ಪರಿಶುದ್ಧಗೊಳಿಸಬೇಕು, ಆ ಕಾರ್ಯವನ್ನು ಅದೊಂದು ಸದ್ಗುಣವಾಗುವವರೆಗೆ, ಮಹಿಮಾನ್ವಿತವಾಗುವವರೆಗೆ ಹಾಗೂ

ಹಾನಿಯನ್ನುಂಟು ಮಾಡದಂತೆ ಪರಿಪೂರ್ಣ ಚಾರಿತ್ರ್ಯವಾಗುವವರೆಗೆ ಕೈಕೊಳ್ಳಬೇಕು. ಅದು ಅದರ ಅವಳಿ ಸಹೋದರ, ಭೌತಿಕ ಧೈರ್ಯ ಹಾಗೂ ಭೌತಿಕ ಪ್ರೇಮ ಹಾಗೂ ದೂರದ ಸಂಬಂಧಿಯಂತಾಗಬೇಕು.

**(CWSA, 1/64–65)** **– ಶ್ರೀ ಅರವಿಂದರು**

*

ಅಂಶಗಳಲ್ಲಿ ಪರಿಪೂರ್ಣ ಸಾಮರಸ್ಯವಿರಬೇಕು, ಮೂರೆಲೆ ಗಿಡದಲ್ಲಿದ್ದ ಹಾಗೆ ಅತಿಯಾಗಿ ವಶಪಡಿಸಿಕೊಂಡದ್ದಾಗಿರಬಾರದು, ಸೂರ್ಯಕಾಂತಿ ಹೂವಿನಲ್ಲಿದ್ದ ಹಾಗೆ ಅತಿಯಾಗಿ ಕಣ್ಣುಕುಕ್ಕಿಸುವಂತಿರಬಾರದು, ಸುವಾಸನೆ ಗಮನಕ್ಕೆ ತಂದುಕೊಳ್ಳಲು ಕಡೆಗಣಿಸದಂತೆ ಉಜ್ವಲ ಹೂಬಿಡುವ ಉದ್ಯಾನದ ಯಾವುದೇ ಗಿಡದಿದ್ದ ಹಾಗೆ ಇರಬೇಕು, ಮಧುರ ಹುಲ್ಲುಗಾವಲಿನಲ್ಲಿದ್ದ ಹಾಗೆ ತಾಳಿಕೊಳ್ಳಲು ಬಹಳ ಗಾಢವಾಗಿರಬಾರದು ಮತ್ತು ಆಕಾರ ಕಾಲುವೆಯಲ್ಲಿದ್ದ ಹಾಗೆ ಏಕತಾನದ್ದಾಗಿರಬಾರದು ಇಲ್ಲವೆ ಎಲೆಗಳಿಲ್ಲದ ಗಿಡದ ಹಾಗೆ ಅತಿಯಾಗಿ ಕ್ರಮವಲ್ಲದ ರೀತಿಯದ್ದಾಗಿರಬಾರದು, ಆದರೆ ತಮ್ಮಲ್ಲಿಯೇ ಪರಿಪೂರ್ಣವಾಗಿ ಸಾಮರಸ್ಯದಿಂದಿರಬೇಕು ಮತ್ತು ಒಂದು ಇನ್ನೊಂದಕ್ಕೆ ಹೊಂದಿಕೆಯಾಗುವ ಪ್ರಮಾಣದಲ್ಲಿರಬೇಕು ಎಂದು ನೀನು ಒಪ್ಪಿಕೊಳ್ಳುವಿ ಎಂದು ಭಾವಿಸಿದ್ದೇನೆ. ಪರಿಪೂರ್ಣ ಎಂಬ ವಿಶೇಷಣವನ್ನು ಒಳಗೆ ಚೆಲ್ಲಿಕೊಡುವುದರ ಮೂಲಕ ನಮ್ಮ ವ್ಯಕ್ತಿತ್ವಕ್ಕೆ ಸ್ವಭಾವಸಿದ್ಧ ಅಂತರ್ಜಾತ ಗುಣಲಕ್ಷಣಗಳ ಉತ್ಕ್ರಾಂತಿ ಎಂದು ಸದ್ಗುಣದ ವರ್ಣನೆಯನ್ನು ವಿಸ್ತಾರಗೊಳಿಸಿದ್ದೇವೆ ಮತ್ತು ಆ ವಿಶೇಷಣದ ಪೂರ್ತಿ ಪರಿಮಳವನ್ನು ಶಬ್ದಗಳಲ್ಲಿ ವಿವರಿಸಿದ್ದೇವೆ. ಪರಿಣಾಮ ಏನಾಗುವುದೆಂದರೆ ತಮ್ಮ ಉತ್ಕ್ರಾಂತಿ ಹೊಂದಿದ ಪರಿಪೂರ್ಣತೆಯಲ್ಲಿ ಗುಣಲಕ್ಷಣಗಳು ಒಂದು ಇನ್ನೊಂದರೊಂದಿಗೆ ಸಾಮರಸ್ಯದಿಂದಿರುವವು ಮತ್ತು ಸುಂದರ ರೂಪವನ್ನು ಇಲ್ಲವೆ ಅಭಿವ್ಯಕ್ತಿಯನ್ನು ಮತ್ತು ಸುಂದರ ವರ್ಣವನ್ನು ಇಲ್ಲವೆ ಆತ್ಮದ ಜ್ಞಾನೋದಯವನ್ನು ಹೊಂದಿರುವವು ಮತ್ತು ಸುಂದರವಾದ ಪರಿಮಳ ಇಲ್ಲವೆ ನ್ಯಾಯಯುತವಾಗಿ ಹದಗೊಳಿಸಿದ ರೀತಿ ಮತ್ತು ಎಲ್ಲ ಈ ಮೂರೂ ವಿಷಯಗಳನ್ನು ನ್ಯಾಯಯುತವಾದ ಯೋಗ್ಯವಾದ, ರೀತಿಯಲ್ಲಿ ಸಾಮರಸ್ಯದಲ್ಲಿರುವಂತೆ ವಶಪಡಿಸಿಕೊಂಡಿರಬೇಕು. ನಮ್ಮ ಆತ್ಮಗಳಲ್ಲಿ ಈ

ಮನವರಿಕೆಯೊಂದಿಗೆ ಪ್ರಯಾಣ ಮಾಡುತ್ತೇವೆ, ಹೆಸರುವಾಸಿಯಾದವನ ಪರಾಮರ್ಶೆಯನ್ನು ಅಪಾಯ ಗೋಚಕ ಧ್ವನಿಯನ್ನು ತಿರಸ್ಕಾರದಿಂದ ನೋಡುತ್ತ ಮತ್ತು ನಮ್ಮ ಅಂತರ್ಜಾತ ಗುಣಲಕ್ಷಣಗಳನ್ನು ಹಾಗೂ ಸಾಮರ್ಥ್ಯಗಳನ್ನು ಸುಂದರ ಹಾಗೂ ಸಾಮರಸ್ಯದೊಂದಿಗೆ ಪರಿಪೂರ್ಣವಾಗುವಂತೆ ಉತ್ಕ್ರಾಂತಿ–ಗೊಳಪಡಿಸುತ್ತೇವೆ, ಅದನ್ನು ನಾವು ತೇಜಸ್ಸನ್ನು ಹೊರಸೂಸುವ ಗಾಳಿಯ ಮೂಲಕ ಜೀವಂತ ಕವನಗಳು ಹೋಗುವ ಹಾಗೆ ನಡೆಯಲಾಗುವವರೆಗೆ ಸೂಕ್ಷ್ಮರೀತಿಯಿಂದ ಕೈಕೊಳ್ಳುತ್ತೇವೆ ಮತ್ತು ಯಾವುದೇ ಟೊಂಗೆಯನ್ನು ಇಲ್ಲವೆ ಅರಳುವಿಕೆಯನ್ನು ಕುಂಠಿತಗೊಳಿಸುವುದಿಲ್ಲ, ಆದರೆ ನಾಶವಾಗಬಲ್ಲ ಈ ಜಗತ್ತಿನ ವಿಜಯಮಾಲೆಗಳಿಗೆ, ಮಹಿಮಾನ್ವಿತ ಜೀವಂತ ಕಿರೀಟಕ್ಕೆ ಆದ್ಯತೆ ನೀಡುತ್ತೇವೆ. ಕ್ರಿಸ್ತನ ಪ್ರಶ್ನೆ ಎಂದರೆ "ಇಡೀ ಜಗತ್ತನ್ನು ವಶಪಡಿಸಿಕೊಂಡು ಆತ್ಮವನ್ನು ಕಳೆದುಕೊಂಡರೆ ಯಾವ ಲಾಭವಾಗುತ್ತದೆ?" ನಮ್ಮ ಮುಂದೆ ಯುಗಯುಗಾಂತರ–ಗಳಿಂದ ಸಂಪೂರ್ಣ ಅವ್ಯವಸ್ಥೆಯಲ್ಲಿರುವ ಶಾಸ್ತ್ರೋಕ್ತವಾಗಿ ಗುಣಗುಣಿಸುವುದರ ಮೂಲಕ ಕೇಳುತ್ತೇವೆ ಮತ್ತು ತತ್ವಜ್ಞಾನದ ಕಿವಿಗಿಂತಾದ ಬೋಧನೆಗನುಗುಣವಾಗಿ ಉತ್ತರ ನೀಡುತ್ತೇವೆ ಮತ್ತು ಪರಿಪೂರ್ಣವಾಗಿ ಸುಂದರವಾಗಿರುವ, ಎಲ್ಲ ತಿಳಿವಳಿಕೆಯಾಚೆಗಿರುವ ದೇವನ ಶಾಂತಿಯ ಜೀವನವನ್ನು ದೊರಕಿಸುತ್ತೇವೆ.

**(CWSA, 1/74–77)** **– ಶ್ರೀ ಅರವಿಂದರು**

*

ಓ, ಅಜ್ಞಾನಿ ಮುಗ್ಧಶ್ರದ್ಧೆಯಿಂದ ಪ್ರೀತಿಸುವವನೆ ತಗ್ಗಿಸಲಾಗದ
ಮರಣವನ್ನು ಕಣ್ಣೀರುಗಳಿಂದ ನೀನು ಮನವೊಲಿಸಲಾರೆ.
ನಿನ್ನ ಎಲ್ಲ ನೋವಿನ ಬಾಧೆಗಳಿಗೆ ಕರುಣೆ ತೋರಿಸುವುದಿಲ್ಲ
ಇಲ್ಲವೆ ಸಂಗೀತದೊಂದಿಗಿರುವ ಅವನ ಕಣ್ಣುಗಳು ದಯೆ ಬೆಳೆಸುವುದನ್ನು
ತಿಳಿದುಕೊಳ್ಳುವುದಿಲ್ಲ.
ಇಲ್ಲವೆ ಸುಂದರವಾದ ಶಬ್ದಗಳನ್ನು ಒಪ್ಪಿಕೊಳ್ಳುವುದಿಲ್ಲ ಮತ್ತು ನೀನು
ನಿರ್ದಯ ನೆರಳಿನೊಂದಿಗೆ ಹೇಗೆ ಗುದ್ದಾಡುವೆ?
ಅರಳುವ ಒಂದು ಹೂವನ್ನು ಒಣಗಿಸದಿರದಂತೆ ಇರುವ ಅವನ
ಎಲ್ಲ ಜನರಿಂದ ದೇವರುಗಳು ಒತ್ತಾಯದಿಂದ ಬೇಡುವ ವಿಷಯ

ತ್ಯಾಗವಾಗಿದೆ, ಇದಿಲ್ಲದೆ ಯಾವ ಕಿರೀಟವನ್ನೂ ದುರಾಶೆಯಿಂದ
ವಶಪಡಿಸಿಕೊಳ್ಳಲಾಗುವುದಿಲ್ಲ.

**(CWSA, 2/120) (ಪ್ರೇಮ ಮತ್ತು ಮರಣ ಇದರಿಂದ ಆಯ್ದುಕೊಂಡದ್ದು)**
**– ಶ್ರೀ ಅರವಿಂದರು**

*

## ಭಾರತೀಯ ಪುರಾಣ ಮತ್ತು ಆಖ್ಯಾನ ಕುರಿತು

### ಭಾರತೀಯ ಮತ್ತು ಗ್ರೀಕ ಪರಂಪರೆ

ಹೆಲೆನ್ ಸಂಬಂಧಿತ ಸಂಪ್ರದಾಯದ ಇಬ್ಬನಿ ಮತ್ತು ಜೇನಿನ ಮೇಲೆ ಬೆಳೆದ ರುಚಿಗೆ ಹಿಂದೂ ಪುರಾಣವು ನಿನ್ನ ಮೇಲೆ ಬೀರಿದ ಪರಿಣಾಮವು ಅನಿವಾರ್ಯವಾದ ಅಂಶವಾಗಿದೆ. ಏಕೆಂದರೆ, ಗ್ರೀಕರ ಗಾಢವಾದ ಸಮಪಾರ್ಶ್ವತೆ ಮತ್ತು ಪರಿಮಿತ ಸೌಂದರ್ಯಪ್ರಜ್ಞೆ ಮತ್ತು ಮಾನವನ ಬುದ್ಧಿಮತ್ತೆಯು ತಾನಾಗಿ ವಿಶ್ವವನ್ನು ಆವರಿಸುವ ವಿಶಾಲ ಪ್ರಯತ್ನವಾದ ಮತ್ತು ತನ್ನನ್ನು ಅನಂತ ಮತ್ತು ನಿರಾಕಾರದೊಡನೆ ಅಪಾರವಾಗಿ ಅಳತೆಗೊಳಪಡಿಸಿಕೊಳ್ಳುವ ಹಿಂದೂ ಧರ್ಮದ ಜೀವಾಳದೊಡನೆ ಸಂಘರ್ಷಕ್ಕೊಳಗಾಗಿದೆ. ಹೆಲೆನ್‌ವಾದವು ಹಿಂದೂ ಕಲ್ಪನೆಗಳು ಮತ್ತು ಚಿಂತನೆಗಳ ಭವ್ಯಭಾಗವಾಗಿ, ಆದರ್ಶ ಮತ್ತು ವಾಸ್ತವದಿಂದ ಬೇರ್ಪಟ್ಟ ಅಪಾರವಾದ, ನಯವಾದ ಭ್ರಾಂತಿಗಳನ್ನು ಅಗತ್ಯವಾಗಿ ನೋಡಬೇಕು. ಆದರೆ, ಎಲ್ಲ ಹಿಂದೂ ಪುರಾಣಗಳನ್ನೂ ಅದು ಅಭೇದವಗಿ ಖಂಡಿಸುವಾಗ, ನನ್ನ ನಂಬಿಕೆಯಂತೆ ಅದು ತನ್ನ ಮೂಲ ಪ್ರೇರಣಾದೋಷ ಅವಶ್ಯವಾದ ತನ್ನ ಉತ್ತಮಗುಣದ ದೋಷದೊಡನೆ ಕೆಲಸ ನಿರ್ವಹಿಸುತ್ತದೆ. ಏಕೆಂದರೆ ಪರಿಶುದ್ಧ, ಸೂಕ್ಷ್ಮ ಮತ್ತು ತೀವ್ರವಾದ ರುಚಿಯ ಮಟ್ಟ ಮತ್ತು ವಿಮರ್ಶಾ ತೀರ್ಮಾನವನ್ನು ಸಂರಕ್ಷಿಸಲು, ಅದು ಅಸಿಹಿಸಷ್ಣುವಾಗುವ ಒತ್ತಡಕ್ಕೆ ಒಳಪಟ್ಟಿರುತ್ತದೆ. ಅಂದರೆ ತನ್ನ ಮಿತಿಗಳನ್ನು ಘೋಷಿಸುತ್ತ ಅದನ್ನು ಮೀರಲು ಎಲ್ಲವನ್ನೂ ವಿಕೃತ ಮತ್ತು ವಿಕಾರವದುದೆಂದು ನಿರ್ಣಯಿಸುತ್ತದೆ. ಅದು ಮನೋಧರ್ಮದ ಕುತೂಹಲದ ಆಧಾರದ ಮೇಲೆ ಹೊಂದಿಕೊಳ್ಳುವ ಸಹಾನುಭೂತಿಯನ್ನು ತಿರಸ್ಕರಿಸುತ್ತದೆ, ಅವುಗಳನ್ನು ಭೇಟಿಮಾಡಿದಾಗ ಭಿನ್ನ ಮಾದರಿಯಲ್ಲಿ ತನ್ನನ್ನು ಪ್ರಕ್ಷೇಪಿಸಲು ಪ್ರಯತ್ನಿಸುತ್ತದೆ, ಹಾಗಾಗಿ ಎಂದೆಂದಿಗೂ ವಿಸ್ತಾರವಾಗುತ್ತಿರುವ ಕಲಾತ್ಮಕ

ಅನುಭವಗಳ ಮೂಲಕ ಅದರ ಅದೃಷ್ಟದ ರಕ್ಷಣೆಯತ್ತ ಸಾಗಿ ಹೋಗುತ್ತದೆ. ಅದು ತನ್ನನ್ನು ನಿರಾಕರಿಸಲು ಕಾರಣವೇನೆಂದರೆ, ಯಾವ ಆಕೃತಿಯೊಳಗೆ ತನ್ನ ಸ್ವಭಾವವನ್ನು ಎರಕಹೊಯ್ಯಲಾಗಿದೆಯೋ ಅದನ್ನು ಆ ವೈಶ್ವಿಕತೆಯು ಒಡೆಯುತ್ತದೆ. ಇದು ಸರಿಯಾಗಿದೆ; ಆದರೂ ಕಲೆ ಮತ್ತು ವಿಮರ್ಶೆಯಲ್ಲಿ ಆ ಬೇರೆಯದಕ್ಕೆ, ಕಡಿಮೆ ಉತ್ಕೃಷ್ಟವಾದುದಕ್ಕೆ ಅವಕಾಶವಿದೆ, ಆದರೆ ಹೆಚ್ಚು ಬಹುಮುಖವಾಗಿ ಹೊಸ ಅಂಶಗಳಿಗೆ ಹಾಗೂ ಬಲವಾದ ಕವಲುದಾರಿಗೆ ಸಾಧ್ಯತೆ ಕಲ್ಪಿಸಿದೆ.

**ಧಾರ್ಮಿಕ–ಆಧ್ಯಾತ್ಮಿಕ ಸಾಂಕೇತಿಕತೆ**

ಧಾರ್ಮಿಕ–ಆಧ್ಯಾತ್ಮಿಕ ಸಾಂಕೇತಿಕತೆ ಮತ್ತು ನಿಜವಾದ ಜಾತ್ಯತೀತ ದಂತಕಥೆ – ಇವೆರಡು ವಿಧದ ಪುರಾಣಗಳನ್ನು ನಾನು ಎಚ್ಚರಿಕೆಯಿಂದ ಗುರುತಿಸಬಲ್ಲೆ. ಮೊದಲನೆಯದು ಲಾಭದಾಯಕ ವಾದದ ಎಲ್ಲೆಯಿಂದ ದೂರವಾಗಿದೆ. ಮಧ್ಯಯುಗದ ಹಿಂದೂ ಧರ್ಮದ ಸಾಂಕೇತಿಕ ಮತ್ತು ಪ್ರತಿಮೀಕರಿಸುವ ಆತ್ಮದಿಂದ ರಚನೆಯಾಗಿರುವ ಧಾರ್ಮಿಕ ಪುರಾಣಗಳು ಒಂದು ವಿಲಕ್ಷಣವಾದ ಮಾನಸಿಕ ರಚನೆ ಕುರಿತಾದ ಒಂದು ರೀತಿಯ ಕವನಗಳಾಗಿವೆ ಮತ್ತು ಪೌರಾಣಿಕ ಸಾಹಿತ್ಯದೊಂದಿಗೆ ಸಂಪರ್ಕಕ್ಕೆ ಬಂದಾಕ್ಷಣ ಪಾಶ್ಚಿಮಾತ್ಯ ಕಲ್ಪನೆಯನ್ನು ವಿಚಿತ್ರದ ಆಕಸ್ಮಿಕ ಆಘಾತ ಹಿಮ್ಮೆಟ್ಟಿಸುವ, ಶಾಶ್ವತವಾಗಿ ಪಶ್ಚಿಮದಿಂದ ಪೂರ್ವವನ್ನು ವಿಭಜಿಸುವ ಮೇರೆಯನ್ನು ನಮಗೆ ತೋರಿಸುತ್ತವೆ. ಇವುಗಳ ವ್ಯತ್ಯಾಸವು ಮೂಲ ಮನೋಧರ್ಮದಲ್ಲಿದೆ, ಆದ್ದರಿಂದ ಜೋಡಿಸಲಸಾಧ್ಯವಾಗಿದೆ. ಕಾಲ್ಪನಿಕ ಧರ್ಮದ ಕಡೆಗೆ ಯಾವುದೇ ಅಂಶಗಳನ್ನು ಹೊಂದಿರದ ಮಾನಸಿಕ ರಚನೆಯಿದೆ ಮತ್ತು ಅದು ಧರ್ಮವನ್ನು ಸ್ವೀಕರಿಸಿದರೆ, ಅದು ಸರಳ, ನಿಖರ ಮತ್ತು ಶಾಸ್ತ್ರಾಧಾರಿತವಾದದ್ದಿರಬೇಕು – ಇವುಗಳಿಗೆ ಈ ಸಾಂಕೇತಿಕತೆಗಳು ಕಲೆಯಲ್ಲಿ ಸುಳ್ಳಾಗಿಯೂ ಮತ್ತು ಮಹತ್ವದಲ್ಲಿ ಬರಡಾಗಿಯೂ ತೋರುತ್ತವೆ. ಉಸಿರಾಡಲಾಗದ ಪರ್ವತ ಶಿಖರಗಳ ಮೇಲೆ ನೆಲಸುವ ಧರ್ಮದ ಸುತ್ತಲಿನ ವಾತಾವರಣ ಸಂಕೇತವನ್ನು ಕೋರುವ ಕಾಲ್ಪನಿಕ ಪ್ರವೃತ್ತಿಯೊಂದಿಗೆ ಜೋಡಿಸುತ್ತದೆ ಮತ್ತು ಸಿದ್ಧಾಂತದ ಜೀವಾಳದ ವಿರುದ್ಧ ರಕ್ಷಣೆಗಾಗಿ ಮಾನಸಿಕ ರಚನೆಯಲ್ಲಿ ಧಾರ್ಮಿಕತೆಯ ಬಗ್ಗೆ ಬಲವಾದ ಆಧ್ಯಾತ್ಮಿಕ ಒಲವಿದೆ. ಇವುಗಳು ಹಿಂದೂ ಆಲೋಚನೆಗಳಲ್ಲಿ ಶಾಶ್ವತ ಸಂತೋಷ ಮತ್ತು ಉಲ್ಲಾಸವನ್ನು ಕಂಡುಕೊಳ್ಳುತ್ತವೆ. ಅವರು ಅದನ್ನು

ಶಕ್ತಿಶಾಲಿ ಮತ್ತು ಸೂಕ್ಷ್ಮಗ್ರಾಹಿ ಎಂದು ನಂಬುತ್ತಾರೆ. ಕೆಲವೊಮ್ಮೆ ಮಹಾಕಾವ್ಯ ಸ್ವರೂಪದ ಸಾಹಸೀ ಕಲ್ಪನೆ ಮತ್ತು ಸೂಕ್ತವಾಗಿ ಹುಡುಕುವ ಸ್ಫೂರ್ತಿ ಅನೇಕವೇಳೆ ಒಂದು ವಿಚಿತ್ರ ಮತ್ತು ಕುತೂಹಲ ಸೌಂದರ್ಯವಾಗಿ ಮಾರ್ಪಡುತ್ತವೆ.

ಆಖ್ಯಾನಗಳಲ್ಲಿ ಹರಡಿಕೊಳ್ಳುವ ವಿಲಕ್ಷಣತೆ ಅವುಗಳಲ್ಲಿ ಒಂದು ಪ್ರಮುಖ ಭಾಗವಾಗಿದೆ ಮತ್ತು ಅವುಗಳಲ್ಲಿರುವ ವಿಲಕ್ಷಣತೆ ತೆಗೆದುಹಾಕುವುದು (ಯಾವುದು ಯುರೋಪಿಯನ್ ಕಲ್ಪನೆಗೆ ವಿಲಕ್ಷಣವಾಗಿದೆಯೋ ಮತ್ತು ನಮಗೆ ಅವು ಗಮನಾರ್ಹ ಮತ್ತು ಸ್ವಾಭಾವಿಕ ಎಂದೆನಿಸುತ್ತವೆಯೋ) ಅವುಗಳ ಬಹುತೇಕ ಸಾಮರ್ಥ್ಯದ ವಿಶಿಷ್ಟ ಭಾಗವನ್ನು ನಿಶ್ಶಕ್ತಗೊಳಿಸುವುದಾಗಿದೆ.

**ಜಾತ್ಯತೀತ ದಂತಕಥೆಗಳು**

ಜಾತ್ಯತೀತ ದಂತಕಥೆಗಳು ಉಳಿದುಕೊಂಡಿವೆ ಮತ್ತು ಅವುಗಳಲ್ಲಿನ ಹೆಚ್ಚಿನವು ಕ್ಷುಲ್ಲಕ ಮತ್ತು ವಿಕಟ ಎಂಬುವುದು ನಿಜ. ಕ್ಷುಲ್ಲಕತೆಯು ಅವುಗಳ ಆವಶ್ಯಕ ಭಾಗವಲ್ಲ ಆದರೆ ಅವುಗಳ ಪ್ರಸ್ತುತಿಯಲ್ಲಿದೆ ಎಂಬುದು ನನ್ನ ವಿಚಾರ. ಅದು ಅತ್ಯುತ್ತಮ ಮತ್ತು ಅತ್ಯಂತ ಸ್ವ–ಅರಿವಿನ ಯುಗಗಳಲ್ಲಿನ ಹಿಂದೂ ಸತ್ವದ ಪ್ರಸ್ತುತಿಯಾಗಿಲ್ಲ. ಅವುಗಳನ್ನು ಅವನತಿಯ ಕಾಲದಲ್ಲಿ ಬರೆಯಲ್ಪಟ್ಟಿತು ಮತ್ತು ಅವುಗಳ ಪ್ರಸ್ತುತ ರೂಪವು ಸಾಹಿತ್ಯಿಕ ದುರ್ಘಟನೆ. ವ್ಯಾಸ ಮಹಾಭಾರತ ಮೂಲತಃ 24,000 ಶ್ಲೋಕಗಳ ಒಂದು ಮಹಾಕಾವ್ಯವಾಗಿದ್ದು, ನಂತರ ಅದನ್ನು ಪರಿಷ್ಕರಣಕಾರ ಕವಿಯಿಂದ ಮರುರೂಪಿಸುವ ಮೂಲಕ ವಿಸ್ತರಿಸಲಾಯಿತು, ಅನೇಕ ಬಾರಿ ನೀರಸ ಕಾಲ ಮತ್ತು ಅನುಭವವಿಲ್ಲದ ಕೈಗಳ ಕೆಲಸದಿಂದಾಗಿ ಮತ್ತು ಅಂತಿಮವಾಗಿ ಕೆಳಮಟ್ಟದ ಸಂಚಯಗಳ ವ್ಯಾಪಕ ದ್ರವ್ಯರಾಶಿಯಲ್ಲಿ ಮುಳುಗಿಹೋಯಿತು. ಇಂತಹ ಮೇಲ್ಮೈ ದ್ರವ್ಯರಾಶಿಯ ಮೇಲೆ ಹೆಚ್ಚಿನ ಹಿಂದೂ ದಂತಕಥೆಗಳು ನಮ್ಮ ಶತಮಾನದವರೆಗೆ ತೇಲುತ್ತ ಬಂದಿವೆ. ಹೀಗೆ ಸಂರಕ್ಷಿಸಲಾದ, ನಮ್ಮ ಬಳಿಗೆ ಬರಬೇಕಾಗಿದ್ದ ಪುರಾತನ ಕಥೆಗಳ ಹಳೆಯ ಸರಳ ಸೌಂದರ್ಯ ಹಾಳಾಗಿ ಮತ್ತು ವಿಕಾರಗೊಂಡು, ಅಲ್ಲದೆ ನಂತರದ ಆವಿಷ್ಕಾರಗಳ ಒಡನಾಟದಿಂದ ಕೆಟ್ಟು, ಸಿಹಿಯಾದ ಯಾವುದೇ ತಿರುಳನ್ನು ಹೊಂದಿಲ್ಲದಿರುವುದು ಆಶ್ಚರ್ಯವೇನಿಲ್ಲ . ಆದಾಗ್ಯೂ ವಿಶಿಷ್ಟ ಹಿಂದೂ ವಿಧದಲ್ಲಿ, ಸರಳ ಮತ್ತು ಸುಂದರವಾದ ಅಪರಿಮಿತ ಸಾಧ್ಯತೆಗಳ ಈ ಹಳೆಯ ಪುರಾಣಗಳು ಅಪಾರ ಮಾಧುರ್ಯ ಮತ್ತು ಭಾವನೆಗಳನ್ನೊಳಗೊಂಡು,

ಮಹಾನ್ ಕಲಾವಿದರ ಅಧೀನದಲ್ಲಿ ಅತ್ಯಂತ ಸೂಕ್ಷ್ಮ ಮೃದುತ್ವ ಅಥವಾ ಅತ್ಯಂತ ಉದಾತ್ತ ಪ್ರಜ್ಞೆಯುಳ್ಳ ನಾಟಕ ಮತ್ತು ಮಹಾಕಾವ್ಯಗಳಾಗಿ ವಿಕಸನಗೊಂಡಿವೆ. ಯಾರು ಮಹಾಭಾರತದಲ್ಲಿರುವ ನಿರ್ಜೀವ ಮತ್ತು ಸೂಕ್ಷ್ಮತೆಯಿಲ್ಲದ ಶಾಕುಂತಲ ಕಥೆಯನ್ನು ಓದಿ, ನಂತರ ಕಾಲಿದಾಸನ ಮೇರುಕೃತಿ ಅಭಿಜ್ಞಾನ ಶಾಕುಂತಲ ಪಠಿಸುತ್ತ ಸೂಕ್ಷ್ಮ ಮನಮುಟ್ಟುವ ಕಲೆ ಮತ್ತು ಭಾವನೆಯ ಸೌಜನ್ಯಶೀಲ ಕೋಮಲತೆಯ ಪರಾಕಾಷ್ಠೆಯನ್ನು ತಲುಪುತ್ತಾರೋ, ಅವರು ಪುರಾಣಗಳನ್ನು ಸ್ಪರ್ಶಿಸುವ ಕೈಗಳು ಬದಲಾದಲ್ಲಿ ಕೃತಿಗಳ ರಚನೆ ಹೇಗೆ ಮಾರ್ಪಡುತ್ತವೆ ಎಂಬುದನ್ನು ಗ್ರಹಿಸುತ್ತಾರೆ.

**ಹಿಂದೂ ಮನಸ್ಸು**

ಹಿಂದೂ ಪುರಾಣಕ್ಕೆ ಗ್ರೀಕನ ಹೃತ್ಪೂರ್ವಕವಾದ ಭಾವೋದ್ದೀಪ್ತ ಜೀವವಿಲ್ಲ. ಹಿಂದೂ ಮನಸ್ಸು ಅಪರಾಧ, ಪಾಪ ಮತ್ತು ಪರವಶಗೊಳಿಸುವ ತೀವ್ರಾಸಕ್ತಿ ಇರುವ ಶ್ರೀಮಂತ ಕವಿತೆಯ ವರ್ಣಕ್ಕೆ ಸಾಕಷ್ಟು ಸೂಕ್ಷ್ಮವಾಗಿರದೇ, ತುಂಬಾ ಕಟ್ಟುನಿಟ್ಟಿನದು ಮತ್ತು ಆದರ್ಶನಿಷ್ಠವಾಗಿತ್ತು; ಓಡಿಪಸ್ ಅಥವಾ ಅಗಾಮೆಮ್ನಾನ್ ಅದರ(ಹಿಂದೂ ಮನಸ್ಸಿನ) ಸೃಜನಶೀಲ ಸಾಮರ್ಥ್ಯದ ಮೇರೆಯ ಹೊರಗಿವೆ. ಆದರೂ ನೀವು ಬಹುಶಃ ಯಾವುದೇ ಪರಿಹಾರವನ್ನು ಬಯಸದ ಅದರ ಪ್ರತೀಕಾರದ ಶಕ್ತಿ, ಯಾವುದು ಕೆಲವು ನಿಶ್ಚಿತ ಮನಸ್ಸಿನ ವರ್ಗದವರಿಗೆ, ಅವರಲ್ಲಿ ನಾನೂ ಒಬ್ಬನೆಂದು ಒಪ್ಪಿಕೊಳ್ಳುತ್ತೇನೆ, ಪರಮ ಸತ್ಯ ಮತ್ತು ಸ್ಪಷ್ಟ ಮೌಲ್ಯ ತೋರುತ್ತದೆ. ಸೌಹಾರ್ದತೆ, ಬಣ್ಣ, ಜೀವನೋದ್ವೇಗ ಮತ್ತು ಭೂಮಿಯ ಸುವಾಸನೆ – ಇವು ಗ್ರೀಕರಿಗಿಂತ ಕೆಳದರ್ಜೆಯದಾಗಿದ್ದು, ಶ್ರೇಷ್ಠ ಆಧ್ಯಾತ್ಮಿಕ ಪ್ರೀತಿ ಮತ್ತು ಔನ್ನತ್ಯ ಹೊಂದಿದ್ದವು; ಕೇವಲ ಭೂಮಿಯ ಮೇಲ್ಮೈಯ ಅಮಲೇರಿದ ಸೌಂದರ್ಯದ ಕವಚವಾಗಿರದೇ, ಅವು(ಹಿಂದೂ ಪುರಾಣಗಳು) ಬಿಳಿಯ–ಬಿಸಿ ಅಂಶಗಳಲ್ಲಿ, ಯೋಚನೆಯ ವಕ್ರತೆಯ ಆವರ್ತದ ಕಕ್ಷೆಯಲ್ಲಿ, ಅಧೋಮುಖದ ಅಸ್ತಿತ್ವದ ಅತ್ಯಂತ ಗುಪ್ತ ಕಾರಂಜಿಗಳ ಸುತ್ತಲೂ ಮತ್ತು ಮೇಲಿನ ಅತ್ಯುನ್ನತವಾದುದರ ಮೇಲೆ, ಬಹುತೇಕ ಆದರ್ಶ ಸಾಧ್ಯತೆಗಳ ಅದೃಶ್ಯ ಕಮಾನುಗಳನ್ನು ಆಳವಾಗಿ ಹುಡುಕುತ್ತವೆ. ವಿಷಯವನ್ನು ಸ್ವಲ್ಪ ಹೆಚ್ಚು ನಿಖರವಾಗಿ ನಾನು ಹೇಳಬಯಸುವೆ. ಗ್ರೀಕ್ ಮತ್ತು ಹಿಂದೂ ಮನೋಧರ್ಮಗಳ ವ್ಯತ್ಯಾಸವೆಂದರೆ ಒಂದು (ಗ್ರೀಕ) ಅತ್ಯಗತ್ಯವಾದದ್ದು,

ಇನ್ನೊಂದು(ಹಿಂದೂ) ಅತ್ಯುನ್ನತವಾದದ್ದು; ಒಂದು ದೈಹಿಕ, ಇನ್ನೊಂದು ಆಧ್ಯಾತ್ಮಿಕ; ಒಂದು ಚೇತನಾತ್ಮಕ ಸೂರ್ಯನ ಬೆಳಕನ್ನು ಸಹಜ ವಾತಾವಾರಣವಾಗಿಸಿ ಮತ್ತು ಅದರ ಆಹ್ಲಾದಕರ ಚಟುವಟಿಕೆಗೆಗೆ ಸೀಮಿತವಾಗಿಸಿತು, ಇನ್ನೊಂದು ಹಂಬಲಿಸುವ ಸುಂದರ ಮತ್ತು ಅದ್ಭುತ ವಿಷಯಗಳನ್ನು ಮರೆಮಾಡಿದ ಬಂಗಾರದ ಮುಸುಕು. ಗ್ರೀಕರು ಪರಿಮಿತಿಗೊಳಪಟ್ಟ ಅಸ್ತಿತ್ವವನ್ನು ಸ್ಪಷ್ಟವಾಗಿ ಭಾವಿಸಿ, ಮಿತಿ ಇರುವ ಮತ್ತು ಸೀಮಿತವಾದ ಪರಿಪೂರ್ಣತೆಯ ಗುರಿಯನ್ನು ಹೊಂದಿದ್ದರು. ಹಿಂದೂ ಮನಸ್ಸು, ಅಗಾಧವಾಗಿ ಚಲಿಸಿತು, ಭವ್ಯದಲ್ಲಿ ಅಭ್ಯಾಸದಂತೆ ಸಂಚರಿಸಿತು ಮತ್ತು ಅನಂತದವರೆಗೆ ವ್ಯಾಪಿಸಿತು. ಇದು ಪದ್ಯರೂಪದಲ್ಲಿ ಅಪಾಯಕಾರಿ ಪ್ರವೃತ್ತಿ; ಕೆಳಮಟ್ಟದ ಕವಿಗಳಿಂದ ಸೃಷ್ಟಿಯಾದಾಗಲೂ ಕೂಡ ಗ್ರೀಕ್ ದಂತಕಥೆಗಳಲ್ಲಿ ಸೀಮಿತ ಸೌಂದರ್ಯ, ಸಮರೂಪತೆ, ಯಾವತ್ತೂ ಸುಂದರಮಯವಾದ ರೂಪಗಳು, ಬೆಳಕು, ವಿಕಸನಗೊಳ್ಳುವಿಕೆ ಮತ್ತು ಮನುಷ್ಯನ ಅನುಗ್ರಹ ಅಥವಾ ದುರಂತ ಮಾನವ ಶಕ್ತಿ ಹೀಗೆ ಯಾವದನ್ನಾದರೂ ಇಟ್ಟುಕೊಳ್ಳಬೇಕು. ಆದರೆ ಎಲ್ಲ ಕವಿಗಳಿಂದ ಅನಂತದಲ್ಲಿ ಹಸ್ತಕ್ಷೇಪ ಮಾಡಲಾಗದು; ಅದು ಪ್ರಬಲ ಒತ್ತಾಯಕ್ಕೆ ಶರಣಾಗತವಾಗುತ್ತದೆ ಮತ್ತು ಕೆಳಮಟ್ಟದ ಮನಸ್ಸಿನ ಸ್ಪರ್ಶದಿಂದ ಭವ್ಯದ ಗಡಿ ದಾಟಿ ವಿಕಾರದೊಳಗೆ ಹಿನ್ನೆಗೆಯುತ್ತದೆ. ಆದ್ದರಿಂದ ವಿವಿಧ ದಂತಕಥೆಗಳ ಅಥವಾ ಅದೇ ದಂತಕಥೆಯು ವಿವಿಧ ಕವಿಗಳಿಂದ ಸೃಷ್ಟಿಯಾದಾಗ ಆಗುವ ಅಗಾಧ ವ್ಯತ್ಯಾಸ – ಅತ್ಯುತ್ತಮ ಕೃತಿಯ ಉತ್ಕೃಷ್ಟತೆ ಅಥವಾ ಮೃದುತ್ವ, ಕೆಟ್ಟದ್ದರ ನಿಷೇಧ, ಕಳಪೆಯಾಗಿರುವುದನ್ನು ಕಡಿಮೆಮಾಡುವುದು ಮತ್ತು ನಡುವಿನ ವ್ಯತ್ಯಾಸಗಳನ್ನು ಮರೆಮಾಡುವುದು. ಹಳೆಯ ಪುರಾಣಗಳನ್ನು ಭಕ್ತಿಯಿಂದ ತೆಗೆದುಕೊಂಡು, ಅವುಗಳಲ್ಲಿರುವ ಮಲಿನ ಸೇರಿಕೆಗಳನ್ನು ಸ್ವಚ್ಛಗೊಳಿಸಿ, ಅವುಗಳ ಪುರಾತನ ಶಕ್ತಿ, ಸರಳತೆ ಮತ್ತು ಸುಂದರ ಅರ್ಥದ ಆಳದಿಂದ ಹೊಳೆಯುವಂತೆ ಮಾಡುವ ಮಹತ್ವಾಕಾಂಕ್ಷೆಯನ್ನು ಇವತ್ತಿನ ಹಿಂದೂ ಕವಿಗಳು ಅರ್ಹ ರೀತಿಯಲ್ಲಿ ಹೊಂದಿರುತ್ತಾರೆ. ಇದನ್ನೇ ಒಂದು ವಿದೇಶಿ ಭಾಷೆಯಲ್ಲಿ ಸಾಧಿಸುವ ಕಾರ್ಯವು ನಿಜವಾಗಿಯೂ ಅಪಾಯಕಾರಿ ಪ್ರಯತ್ನವಾಗಿದೆ.

**ರುರುವುನ ಕಥೆ**

ರುರುವಿನ ಕಥೆಯನ್ನು ಅಲಂಕಾರವಿಲ್ಲದ ಮತ್ತು ಬಾಲಿಶವಾದ ಕಥನಕ್ರಮದಲ್ಲಿ ಶಕ್ತಿ, ಸೌಂದರ್ಯ ಮತ್ತು ಒಳನೋಟಗಳಿಲ್ಲದೆ ಮಹಾಭಾರತದ ಇತ್ತೀಚಿನ ಪದರಿನಿಲ್ಲಿ ಹೇಳಲಾಗಿದೆ. ಆದರೂ ಇದು ವಿಚಾರ ದೃಷ್ಟಿಯಿಂದ ನಮ್ಮ

ಆಖ್ಯಾಯಿಕೆಗಳಲ್ಲೇ ಅತ್ಯಂತ ಮಹತ್ವದ್ದು ಮತ್ತು ಶಕ್ತಿಶಾಲಿಯಾದದ್ದು. ಏಕೆಂದರೆ ಅದನ್ನು ಕಥೆಯೆನ್ನುವುದಕ್ಕಿಂತ ವಿಚಾರವೆನ್ನುವುದು ಸೂಕ್ತ. ರುರುವುನ ಅಜ್ಜನಾದ ಭೃಗುವಿನದು ವೈದಿಕ ಸಾಹಿತ್ಯದಲ್ಲಿ ಅತ್ಯಂತ ಶ್ರೇಷ್ಠ ಹಾಗೂ ಗೌರವಾನ್ವಿತ ಹೆಸರಾಗಿದೆ. ಆರ್ಯನ್ ಇತಿಹಾಸದ ಹೊಸ್ತಿಲಲ್ಲಿ ರೂಪ ತಾಳಿದ, ಅವನು ಗಣನಾತೀತ ಪ್ರಾಚೀನತೆಯ ಮಂಜಿನಲ್ಲಿ ದೊಡ್ಡದಾಗಿ ಮುಸುಕಾಗಿರುವನು. ಅವನ ಸುತ್ತಲೂ ಜನ್ಮ ತಾಳದ ಜನರ ದೊಡ್ಡ ನೆರಳುಗಳು, ಬೃಹತ್ ಅರ್ಧ–ಗ್ರಹಿಸುವ ಚಲನೆಯ ಸಂಪ್ರದಾಯ ಮತ್ತು ಅಸ್ಪಷ್ಟ ಆದರೆ ದೈತ್ಯಾಕಾರದ ಪರಿಭ್ರಮಣ ಚಲಿಸುವವು. ಮುಂದಿನ ಕಥೆಯಲ್ಲಿ ಅವನ ಮಕ್ಕಳು ಅತ್ಯಂತ ಪವಿತ್ರವಾದ ಋಷಿಗಳ ವಂಶದ ಭಾಗವಾಗಿ ನೋಡುತ್ತೇವೆ. ರಾಜಕುಮಾರರ ಸಂಹಾರಕನಾದ ಪರಶುರಾಮನು ಅವನ ಪುತ್ರನೇ ಆಗಿದ್ದ. ಈ ದೈತ್ಯ ಋಷಿ ಬ್ರಹ್ಮನ ಮಾನಸ ಪುತ್ರರಲ್ಲಿ ಓರ್ವನಾದ ಮತ್ತು ವಂಶದ ಹಿರಿಯನೂ ಆದ ಭೃಗುವಿನ ಪ್ರಚಂಡಳಾದ ಹೆಂಡತಿ ಪುಲೋಮಾಳಿಗೆ ಹುಟ್ಟಿದವನು ಚ್ಯವನನು. ಆತನು ತನ್ನ ತಾಯಿಯ ಗರ್ಭದಿಂದಲೇ ತನ್ನ ತಂದೆಯ ವ್ಯಕ್ತಿತ್ವ, ಶ್ರೇಷ್ಠತೆ ಮತ್ತು ಸ್ವಯಂ ನಿಯಂತ್ರಣ ಶಕ್ತಿಯನ್ನು ಪಡೆದಿದ್ದನು. ಚ್ಯವನನು ಒಬ್ಬ ಉಪಾಧ್ಯಾಯನಾಗಿದ್ದನು ಹಾಗೂ ಐತಿಹಾಸಿಕ ಮನಸ್ಸುಗಳ ಸ್ಥಾಪಕನೂ ಮತ್ತು ನಾಗರೀಕತೆಯ ಮೂಲಪುರುಷನೂ ಆಗಿದ್ದನು. ಅವನ ವಿದ್ಯಾರ್ಥಿಗಳಲ್ಲಿ ಆಯುಸ್‌ನೂ ಇದ್ದನು. ಪುರೂರವ ಮತ್ತು ಊರ್ವಶಿಯ ಪುತ್ರನಾದ ಈತನು ಸ್ಥಾಪಿಸಿದ ಚಂದ್ರವಂಶದ ರಾಜಕುಮಾರರು ಮಹಾಭಾರತದ ಮಹಾ ಶೀತಲ ಸಮರಗಳ ಬಳಿಕ ಭಾರತದ ರಾಜರುಗಳಾದರು. ಚ್ಯವನನ ಮಗ ಪ್ರಮತಿ ಮತ್ತು ಓರ್ವ ಅಪ್ಸರೆ ಅಥವಾ ಸ್ವರ್ಗದ ಅಪ್ಸರೆಗೆ ಜನಿಸಿದವನೇ ರುರು, ಆತನ ಬಗ್ಗೆಯೇ ಈ ಕಥೆಯನ್ನು ಹೇಳಲಾಗಿದೆ. ಈ ರುರುವು ನಂತರದಲ್ಲಿ ತನ್ನ ತಂದೆಯಂತೆಯೇ ಶ್ರೇಷ್ಠ ಋಷಿಯಾಗಿ, ಆದರೆ ತನ್ನ ಯೌವನಾವಸ್ಥೆಯಲ್ಲಿ ಓರ್ವ ಸುಂದರ ಕನ್ಯೆಯೊಡನೆ ಪ್ರೇಮದಲ್ಲಿ ಮುಳುಗಿದ್ದನು. ಗಂಧರ್ವ ರಾಜನಾದ, ಚಿತ್ರೋರತ ಮತ್ತು ಆಕಾಶದ ಅಪ್ಸರೆಯರಿಗೆ ಜನಿಸಿದವಳಾಗಿ ಶಾಕುಂತಲೆಯ ಸಹೋದರಿಯಾಗಿದ್ದವಳು ಈತನ ಹೆಂಡತಿಯಾದಳು. ಅವರ ಸಂಯೋಗದ ಆನಂದ ಹಳೆಯದಾಗುವ ಮುನ್ನವೇ ಪ್ರಿಯಂವದೆಯು, ಯೂರಿಡೈಸ್‌ನಂತೆ, ಹಾವಿನಿಂದ ಕಚ್ಚಲ್ಪಟ್ಟು ಸತ್ತಳು. ಆಕೆಯನ್ನು ಕಳೆದುಕೊಂಡ ರುರುವು ಸಾಂತ್ವನಗೊಳ್ಳದಿದ್ದಾಗ ದುಃಖತಪ್ತನಾಗಿ ಯಾವ ಅರಣ್ಯಗಳು ತನ್ನ ಹಾಗೂ ತನ್ನ ಹೆಂಡತಿಯ ಪ್ರೀತಿಗೆ ಸಾಕ್ಷಿಯಾಗಿದ್ದವೋ ಅಲ್ಲಿ ಅಲೆದಾಡಿದನು.

ಪರಮದುಃಖದಿಂದ ಇದ್ದಾಗ, ದೇವತೆಗಳು ಅವನೆಡೆಗೆ ಕರುಣೆಯನ್ನು ತೋರಿ, ತಾನು ತನ್ನ ಜೀವಿತಾವಧಿಯಲ್ಲಿ ಅರ್ಧ ಭಾಗವನ್ನು ತನ್ನ ಹೆಂಡತಿಗೆ ತ್ಯಾಗಮಾಡಲು ಸಿದ್ಧನಾದರೆ, ತನ್ನ ಹೆಂಡತಿಯನ್ನು ಹಿಂದಿರುಗಿಸಲು ಅವನಿಗೆ ವಾಗ್ದಾನ ಮಾಡಿದರು. ಇದಕ್ಕೆ ಸಂತಸದಿಂದ ರುರುವು ಒಪ್ಪಿದನು ಮತ್ತು ಅದಕ್ಕೆ ಬೆಲೆ ತೆತ್ತು ಅವರ ಪುನರ್‌ಸಂಯೋಗವಾಯಿತು.

ಈ ಕಥೆಯ ಮುಂದುವರಿದ ಭಾಗವು ಬಾಲಿಶವಾದ ಬೆಳವಣಿಗೆಗಳಿಂದ ಕೂಡಿ ಮಹಾಭಾರತಕ್ಕೆ ಕೊಂಡಿಯಾದದ್ದಾಗಿದೆ. ಈ ಕಥೆಯನ್ನು ಸಾಮ್ಯತೆಯುಳ್ಳ ಯೂರಿಡಿಸ್‌ನ ಕಥೆಯೊಡನೆ ಹೋಲಿಸಿದಾಗ ನನಗೆ ದೊರೆತ ವ್ಯತ್ಯಾಸವು, ಹಿಂದೂ ಹಾಗೂ ಗ್ರೀಕ್ ಪುರಾಣಕಾವ್ಯವಿಭಾಗದಲ್ಲಿ ತನ್ನನ್ನು ತಾನೇ ಅತೀ ಶಕ್ತಿ ಹಾಗೂ ಸ್ಪಷ್ಟತೆಯೊಡನೆ ಸಮರ್ಥಿಸಿಕೊಳ್ಳುತ್ತದೆ. ಪಾತಾಳಕ್ಕಿಳಿದ ಆರ್‌ಫಿಯಸ್, ಸಾವು ಮತ್ತು ನರಕವನ್ನು ತನ್ನ ಸಂಗೀತದ ಮೂಲಕ ಅವನು ಗೆದ್ದದ್ದು ಮತ್ತು ಆಕೆಯ ದುರಂತ ನಷ್ಟವು ಯಶಸ್ಸಿನ ಘಳಿಗೆಯಲ್ಲಿ ನೈಸರ್ಗಿಕ ಮತ್ತು ಸುಂದರ ಮಾನವ ದೌರ್ಬಲ್ಯ – ಇವುಗಳಿಗೆ ಅನಂತವಾದ ಭ್ರಾಂತಿ, ದುಃಖ ಮತ್ತು ನಡುಗುವ ಭಾವನೆಯಿದೆ. ಈ ಹಿಂದೂ ಕಥೆಯಲ್ಲಿ ಈ ಸೂಕ್ಷ್ಮತೆಯ ಅಭಾವ ಮತ್ತು ವೈವಿಧ್ಯತೆಯಲ್ಲಿ ಘಟನಾಭಾವ ಮತ್ತು ದುರಂತದ ಇಲ್ಲದಿರುವಿಕೆಯಿದೆ. ಅದು ಒಂದು ವಿಚಾರ ಮಾತ್ರವಾದ ಕಥೆ. ಆದರೂ ಎಂಥಹ ವಿಚಾರವನ್ನು ಇದು ಪೂರೈಸುವುದು! ತನ್ನ ಸುತ್ತ ವ್ಯಕ್ತಿಯನ್ನು ಬದುಕಿಸಲು ನಿಷ್ಠುರವಾದ ಬೆಲೆತೆರುವ, ಜೀವಿಯ ಅರ್ಧ ಜೀವನವನ್ನು ಬೇಡಿಕೆಯಲ್ಲಿರುವ ವಿಚಾರ ಎಂಥಹ ಆಳವಾದ ಮತ್ತು ಶೋಧನೆಯುಳ್ಳದ್ದಾಗಿದೆ! ಮಾನವ ವಿಧಿಯ ಬಾಗಿಲನ್ನು ಬಡಿಯಲು, ನಮಗೆ ಬೇರೆ ಪ್ರಪಂಚಗಳಿಂದ ಅಭಿರುಚಿಗಳನ್ನು ಕೊಟ್ಟು ಅನಂತವಾದ ಮತ್ತು ನಿಗೂಢವಾದ ಚಿಂತನೆಗಳನ್ನು ನಮ್ಮ ಸಾಮರ್ಥ್ಯಗಳನ್ನು ಮತ್ತು ಮಿತಿಗಳನ್ನು ಸೂಚಿಸಲು ಭಾಸವಾಗುವುದು ಹೇಗೆ?

**ಹಿಂದೂ ಮಹಾಕಾವ್ಯದ ನಿಜವಾದ ವಿಷಯ**

ಹಿಂದೂ ಮಹಾಕಾವ್ಯದ ನೈಜ ವಸ್ತುವು ಯಾವಾಗಲೂ ಎರಡು ಆದರ್ಶ ವೈಶ್ವಿಕ ಹಾಗೂ ವೈರುಧ್ಯ ಶಕ್ತಿಗಳ ನಡುವಿನ ಸಂಘರ್ಷವಾಗಿದ್ದು, ಅತ್ಯುನ್ನತ ತ್ರಿಮೂರ್ತಿಗಳನ್ನು ಹೊರತುಪಡಿಸಿ – ಮಾನವ ಮತ್ತು ದೈವಿಕ ನಟರು ದಾಳಗಳಾಗಿ

ಹಿಂದಕ್ಕೂ ಮತ್ತು ಮುಂದಕ್ಕೂ ಚಲಿಸಿ ಪ್ರಜ್ಞಾಪೂರ್ವಕವಾಗಿ ಮಾರ್ಗದರ್ಶನ ಮಾಡಲಾಗದ ಅಗಾಧವಾದ ಪ್ರಪಂಚ ಪ್ರೇರಣೆಗಳಿಂದ ಅಭಿವ್ಯಕ್ತಿಸುವಂಥವು. ಜೀವನದಲ್ಲಿ ಭವ್ಯವಾದ ಆದರ್ಶವು ಪ್ರಚಂಡ ಆದರ್ಶದೊಡನೆ ಹೋರಾಡುತ್ತಿದ್ದು, ನಂತರ ನಮಗೆ ರಾಮಾಯಣವೊಂದಿದೆ. ಅಥವಾ ಸರಕಾರದಲ್ಲಿ ಮತ್ತು ಸಮಾಜದಲ್ಲಿ ವಸಾಹತುಶಾಹಿ ಆದರ್ಶವು ವ್ಯವಸ್ಥೆ, ಸ್ವಾಧೀನ, ಸ್ವಯಂನಾಶ, ನ್ಯಾಯ, ಸಮಾನತೆ, ಶ್ರೀಮಂತಿಕೆಯ ಆದರ್ಶದ ವಿರುದ್ಧ, ಸ್ವ–ಇಚ್ಛೆಯೊಡನೆ, ಹಿಂಸೆ ಸ್ವಾತಂತ್ರ್ಯ, ಸ್ವ–ನಿಶ್ಚಯ, ಜೀತಪದ್ಧತಿಯ ವಿಧೇಯತೆ, ಖಡ್ಗವನ್ನು ಆಡಿಸುವುದು ಮತ್ತು ಶಕ್ತಿಶಾಲಿಗಳ ಹಕ್ಕು–ಅದರ ಹಿಂದಿರುತ್ತದೆ; ಇದೇ ಮಹಾಭಾರತದ ಕೀಲಿಕೈ ಅಥವಾ ಪುನಃ ಸಾವಿತ್ರಿಯ ಕಥೆಯಂತೆ ಆತ್ಮ ವರ್ಜಕವಾದ ಸಾವಿನ ವಿರುದ್ಧ, ಭಯಂಕರವಾದ ಮೌನದಲ್ಲಿ ಮತ್ತು ಶಕ್ತಿಯಲ್ಲಿ ಒಂಟಿ ಮಹಿಳೆಯ ಉದ್ವೇಗವು ಇದ್ದಂತೆ ಇದೆ, ನಳನ ಪ್ರಯಣದ ಪರಿಶುದ್ಧ ಸ್ಥಳೀಯವಾದ ಕಥೆಯಂತೆ, ಅವನತಿಯ ಶಕ್ತಿ, ಕಬ್ಬಿಣ ಯುಗದ ಅಸಾಧಾರಣ ಪ್ರತಿಭೆಯನ್ನು ದೃಢನಿಷ್ಠೆಯ ವೈವಾಹಿಕ ಪ್ರೀತಿಯು ಜಯಿಸುವಿಕೆಯೇ ಕೇಂದ್ರ ವಿಚಾರವಾಗಿದೆ. ಅದರಂತೆ ಪುರು ಮತ್ತು ಪ್ರಿಯಂವದಳ ಕಥೆಯಲ್ಲಿ ಕಾಮ ಮತ್ತು ಯುವದ ಮೇಲೆ ಪ್ರಭುತ್ವ ನಡೆಸಿದ ಶ್ರೇಷ್ಠ ಶಕ್ತಿಗಳು ನಿಜವಾದ ನಟರು ಮತ್ತು ಪದ್ಯ ಕಾವ್ಯಕ್ಕೆ ಪ್ರೀತಿ ಮತ್ತು ಸಾವು ಅದರ ಹೆಸರನ್ನೇ ನೀಡುವುದು.

**ಹಿಂದೂ ಪುರಾಣಗಳ ಪಾತ್ರಗಳು**

ನಮ್ಮ ಮಹಾಕಾವ್ಯಗಳ ಅತ್ಯುನ್ನತ ಪಾತ್ರಗಳು ಆದರ್ಶಗಳಾಗಿದ್ದು, ಅವು ದುಷ್ಟ ಮತ್ತು ಪುಣ್ಯದ ಆದರ್ಶಗಳು ಮತ್ತು ನಿರ್ದಿಷ್ಟವಾಗಿ ವಿಷಮವಲ್ಲದ ಅಥವಾ ಪುಣ್ಯವಲ್ಲದ ಮಿಶ್ರಿತ ಪಾತ್ರಗಳು. ಅಂದರೆ, ಅವುಗಳು ಪಾತ್ರವಿಧಗಳ ಆದರ್ಶ ಪ್ರಸ್ತುತಿಯಾಗಿದೆ. ಇದಕ್ಕೆ ನಟರ ಹಿನ್ನಲೆಯಲ್ಲಿನ ಸ್ವಭಾವಗಳು ಸ್ಫೂರ್ತಿಗಳು ಮತ್ತು ಆದರ್ಶಗಳೆಡೆಗೆ ನೋಡುವ ಹಿಂದೂ ಸೃಜನಶೀಲ ಮನಸ್ಸಿನ ಸ್ವಭಾವದ ಹಿನ್ನಲೆಯಿದೆ. ಆದಾಗ್ಯೂ, ಶ್ರೇಷ್ಠ ಪಾತ್ರಗಳಾದ ರಾಮ, ಸೀತೆ, ಸಾವಿತ್ರಿ ನೈತಿಕ ಶ್ರೇಷ್ಠತೆಯ ವಿನ್ಯಾಸಗಳು ಮಾತ್ರವೇ? ಅವರ ಕಥೆಯನ್ನು ವಾಲ್ಮೀಕಿ ಮತ್ತು ವ್ಯಾಸರ ತೀವ್ರವಾದ ಮತ್ತು ಶಕ್ತಿಶಾಲಿಯಾದ ಭಾಷೆಯಲ್ಲಿ ಓದಿರುವ ನಾನು, ಅವರ ಸಂತಸಗಳು ಮತ್ತು ದುಃಖಗಳ ಬಗ್ಗೆ ಭಾವಪರವಶನಾಗಿದ್ದೂ, ನನಗೆ ಅದು ಹಾಗೆಂದು

ಮನಗಾಣಿಸಲಾಗದು. ಸಾವಿತ್ರಿ ಎಂಬ ಶಕ್ತಿಶಾಲಿ ಮೌನ ಹೃದಯಿ, ಪ್ರಬಲ ಮತ್ತು ಸೂಕ್ಷ್ಮ ವ್ಯಕ್ತಿತ್ವಕ್ಕೆ ಜೀವ ಮತ್ತು ಚೆಲುವಿದೆ; ರಾಮನು ತಾನು ಗೈಯುವ ಎಲ್ಲಾ ಕಾರ್ಯಕ್ಕೂ ದೈವಾಗ್ನಿಯನ್ನು ಹಾಕಿ ಮೃತ ವಸ್ತುವಾಗುತ್ತಾನೆ. ಸೀತೆಯು ಅತೀ ಮಧುರ ಮತ್ತು ಸೌಜನ್ಯಶೀಲಳು, ಅದರೊಡನೆ ಮಾನವ ಪ್ರೀಯತೆ ಮತ್ತು ಪ್ರೀತಿಗೆ ಪಾತ್ರಳಾಗುವ ವ್ಯಕ್ತಿತ್ವ ಹೊಂದಿದವಳೂ, ಮಹಿಳಾ ದೌರ್ಬಲ್ಯವುಳ್ಳವಳೂ ಮತ್ತು ಶಕ್ತಿವಂತೆಯೂ ಆಗಿದ್ಧಾಳೆ. ರುರು ಮತ್ತು ಪ್ರಿಯಂವದರೂ ಮಾದರಿ ಮತ್ತು ಆದರ್ಶಗಳು. ವಿಚಾರದಂತೆ ಅವರಲ್ಲಿನ ಪ್ರೀತಿಯೂ ಸಹ ಶಿಖರಪ್ರಾಯವಾದ ಮನಸ್ಸಿನ ಉತ್ಕರ್ಷವನ್ನು ಅಭಿವ್ಯಕ್ತಿಸುತ್ತದೆ. ಆದರೆ, ಆ ಸಂಪೂರ್ಣ ಪರಿಕಲ್ಪನೆಯು ಪ್ರತಿ ಅಸ್ತಿತ್ವದಲ್ಲಿರುವ ಪ್ರೀತಿಯ ಪಾರ್ಶ್ವ ಅಭಿವ್ಯಕ್ತಿಯೇ ಹೊರತು ಸಂಪೂರ್ಣವಾದ ಯಶಸ್ವೀ ಅಭಿವ್ಯಕ್ತಿಯಲ್ಲಿ ಆದರ್ಶ ಪ್ರೀತಿಯು ತ್ರಿವಳಿ ಶಕ್ತಿಯಾಗಿದ್ದು, ಅದು ಕೇವಲ ಇಂದ್ರಿಯಪ್ರೇರಣೆಯೋ ಅಥವಾ ಕೇವಲ ಭಾವನಾತ್ಮಕವಾದದ್ದೋ ಅಥವಾ ಕೇವಲ ಆಧ್ಯಾತ್ಮಿಕವಾದದ್ದೋ ಅಲ್ಲ. ಇವುಗಳಿದ್ದರೂ, ಅವನ್ನು ಪ್ರೀತಿಯೆನ್ನಲಾಗದು. ಕೇವಲ ಐಂದ್ರಿಯ ಪ್ರೇರಣೆಯು ಅಗತ್ಯವಾದುದು. ಗಾಳಿಯು ಹೇಗೆ ವೃಕ್ಷಕ್ಕೆ ಜೀವದಾಯಕವೋ ಹಾಗೆಯೇ ಭಾವವು ಅಗತ್ಯವಾದುದು. ಹೇಗೆ ಸ್ವರ್ಗದಿಂದ ಬರುವ ಬೆಳಕು ಮತ್ತು ಗಾಳಿಯು ಹೇಗೆ ವೃಕ್ಷವನ್ನು ಕಳೆಗುಂದದಂತೆ ತಡೆಗಟ್ಟುವುದೋ, ಹಾಗೆಯೇ ಆಧ್ಯಾತ್ಮಿಕ ಆಕಾಂಕ್ಷೆ ಅಗತ್ಯವಾಗಿದೆ. ನನ್ನ ಪರಿಕಲ್ಪನೆಯಲ್ಲಿ ಪ್ರೀತಿ ಮತ್ತು ಸಾವಿನ ನಡುವಿನ ಆದರ್ಶ ಘರ್ಷಣೆಗೆ ಕಾವ್ಯದ ರೂಪ ನೀಡಲು ಎರಡು ಅಂಶಗಳು ಅಗತ್ಯವಾಗಿವೆ; ಪ್ರೀತಿಯ ತಕ್ಕ ಚಿತ್ರಣ ಮತ್ತು ಸಾವಿನ ಅಗತ್ಯ ಪ್ರತಿಮೆ ಚಿತ್ರಿತವಾದ ಪ್ರೀತಿಯು ಆದರ್ಶದ ನೆಲೆಯಲ್ಲಿದ್ದು ಮತ್ತು ಆದ್ದರಿಂದ ಅದು ಅದರ ಸಾಮರ್ಥ್ಯದ ಅತ್ಯಂತ ದೂರದ ಮಿತಿಯನ್ನು ತನ್ನ ಪ್ರತೀ ಮೂರು ಮಾರ್ಗಗಳಲ್ಲಿ ಸ್ಪರ್ಶಿಸಬೇಕು. ಐಂದ್ರಿಕವಾದುದ್ದನ್ನು ಧೃಢವಾದ ಬೇರು ಮತ್ತು ಬುನಾದಿಯನ್ನು ನೀಡಲು ಮಹತ್ವ ನೀಡಬೇಕು, ಭಾವನೆಯನ್ನು ಅದಕ್ಕೆ ಜೀವ ನೀಡಲು ಮಹತ್ವ ಕೊಡಬೇಕು, ಆಧ್ಯಾತ್ಮಿಕವಾದುದನ್ನು ಅದರ ಅನಂತ ಶಾಶ್ವತತೆಯೆಡೆಗೆ ಬೆಳೆಸಲು ಮಹತ್ವ ನೀಡಬೇಕು. ಮತ್ತು ತಮ್ಮ ಮಿತಿಗಳ ವಿಸ್ತರಣೆಯಲ್ಲಿ ಆ ಮೂರು ಅಂಶಗಳು ಕೂಡಿ ಸಾಮರಸ್ಯತೆ ಪಡೆದರೆ, ಅವು ತ್ರಿವಳಿಯಾಗದೆ, ತ್ರಿಶಕ್ತಿಗಳ ಸಮೀಕರಣಗೊಂಡು, ಆ ಪ್ರೀತಿಯು ಪರಿಪೂರ್ಣ ಪ್ರೀತಿಯೆಂದು ಮತ್ತು ಆ ಚಿತ್ರವನ್ನು ಪರಿಪೂರ್ಣ ಚಿತ್ರವೆಂದು ಹೇಳಬಹುದು.

## ಪ್ರಾಚೀನ ಋಷಿಗಳು

ಋಷಿಗಳು ತಮ್ಮ ಜ್ಞಾನವನ್ನು ಧ್ಯಾನದ ಮೂಲಕ, ಸ್ಫೂರ್ತಿ ಹಾಗೂ ಅಂತರ್ದೃಷ್ಟಿಯಿಂದ ಪಡೆದರು. ಅಂತರ್ಬೋಧೆಯ ಅರಿವಿನಿಂದ, ಒಂದು ಸ್ಫೂರ್ತಿಯುತ ಒಳನೋಟದ ಪ್ರಯತ್ನದಿಂದ ಇನ್ನೊಂದರ ಮೇಲೆ ನಿಕಟವಾಗಿ ಹೊರಹೊಮ್ಮುತ್ತ, ಅಖಂಡ ತಾರ್ಕಿಕ ಸರಪಳಿ ರಚನೆಯಾಗುವವರೆಗೆ; ಅದು ಅನಾದರದ ಅಥವಾ ವಾದದ ತರ್ಕವಾಗಿರದೆ, ಆದರೆ ನಿರಂತರ ಮತ್ತು ಹೊಂದಿಕೆಯಿರುವ ಸ್ಫೂರ್ತಿಯ ತರ್ಕವಾಗಿದ್ದು, ದರ್ಶನಕ್ಕಿಂತ ಎತ್ತರದಲ್ಲಿರುವ, ಇಂದ್ರಿಯಳ ಕಟ್ಟುನಿಟ್ಟಿನ ಏಕಾಗ್ರತೆಯು ಹಟಮಾರಿ ತರ್ಕವನ್ನು ಶಾಂತಗೊಳಿಸಿ ಮತ್ತು ಆಂತರ್ಯದ, ತರ್ಕದಾಚೆಗಿರುವ ತಪ್ಪುಮಾಡದ ದರ್ಶನವನ್ನು ಅದರ ಕೆಲಸಕ್ಕಾಗಿ ಬಿಟ್ಟುಬಿಡುತ್ತದೆ. ನಂತರದ ದಿನಕ್ಕೆ ಸೇರಿದವರಾದವರು ಶಾಶ್ವತತೆಯನ್ನು ದೈಹಿಕ ಶಿಸ್ತುಗಳ ಮೂಲಕ ಅನ್ವೇಷಿಸಿದರು. ಉದಾಹರಣೆಗೆ – ಪಂಚಾಗ್ನಿ ಮಧ್ಯೆ ಜೀವಿಸುವುದು (ಪ್ರತಿ ಬದಿಯಲ್ಲಿ ಒಂದು ಅಗ್ನಿ ಮತ್ತು ನೆತ್ತಿಯ ಮೇಲೆ ಮಧ್ಯಾಹ್ನದ ಸೂರ್ಯ) ಅಥವಾ ಅನೇಕ ದಿನಗಳು ಕತ್ತಿಯ ಮೊನೆಗಳ ಹಾಸಿಗೆಯ ಮೇಲೆ ಮಲಗುವುದು ಅಥವಾ ಉನ್ನತವಾದ ಭೌತಿಕ ವಿಜ್ಞಾನಾಧಾರಿತ ಯೋಗ ಪ್ರಕ್ರಿಯೆಗಳು ಕಡಿತಗೊಂಡ ಕಾರಣದ ಅಥವಾ ಯಾವುದೇ ದೈಹಿಕ ಪ್ರಕ್ರಿಯೆಯಾದ ಇಂದ್ರಿಯ ನಿಗ್ರಹದ ಮೂಲಕ ಕಾರ್ಯನಿರತರಲ್ಲದ ಸ್ಫೂರ್ತಿಗೊಂಡ ಚಿಂತಕರೇ ಋಷಿಗಳು. ಅವರ ವ್ಯಕ್ತಿತ್ವಗಳ ಸಾಮರ್ಥ್ಯ ಭಾರಿ ದೊಡ್ಡದು; ದೈವದೊಂದಿಗೆ ತೀವ್ರವಾದ ಧ್ಯಾನದಲ್ಲಿ ಗುದ್ದಾಡಿ ಅವರು ಎಣಿಕೆಗೆ ಸಿಗದ ಆಧ್ಯಾತ್ಮಿಕ ಶಕ್ತಿಗಳ ಒಡೆಯರಾಗಿದ್ದರೆಂದರೇ, ಅವರ ಕ್ರೋಧಕ್ಕೆ ಜನರನ್ನು ನಾಶಪಡಿಸುವ ಸಾಮರ್ಥ್ಯವಿತ್ತು ಮತ್ತು ಶಪಿಸಲು ಅವರು ಬಾಯ್ದೆರೆದಾಗ ಇಡೀ ಜಗತ್ತೇ ಅವಘಡದಲ್ಲಿರುತ್ತಿತ್ತು. ಈ ಶಕ್ತಿಯು ಅವರ ಮಗುವಿಗೆ ಆನುವಂಶಿಕ ತತ್ವದೊಡನೆ ಕನಿಷ್ಠವಾದ ಗುಪ್ತವಾದ ಮತ್ತು ಶೈಕ್ಷಣಿಕವಾದ ಶಕ್ತಿಯ ಮೂಲಕ ಪ್ರಸರಣವಾಗಿತ್ತು. ನಂತರ, ಆ ಜನಾಂಗದ ಶಕ್ತಿ ಬರಿದಾಗಿದ್ದರಿಂದ, ಆಂತರಿಕ ಅಗ್ನಿಯು ಕುಗ್ಗಿತು ಮತ್ತು ದುರ್ಬಲಗೊಂಡಿತು. ಆದರೆ ಮೊದಲು ಜನಿಸಿದ ಮಗುವೂ ದೈವಿಕವಾದದ್ದಾಗಿತ್ತು. ಭೃಗುವಿನ ಜೊತೆ ಮದುವೆಗೆ ಮೊದಲು, ಚ್ಯವನನ ತಾಯಿ ಪುಲೋಮಾಳ ನಿಶ್ಚಯ ಒಬ್ಬ ರಾಕ್ಷಸನ ಜೊತೆಗೆ ಆಗಿದ್ದಿತು. ಚ್ಯವನ ಗರ್ಭದಲ್ಲಿದ್ದಾಗ, ಆ ರಾಕ್ಷಸನು ಭೃಗುವುನ ಅನುಪಸ್ಥಿತಿಯಲ್ಲಿ ಪುಲೋಮಾಳನ್ನು ಅಪಹರಿಸಲು ಪ್ರಯತ್ನಿಸಿದ್ದನು. ಗರ್ಭದಲ್ಲಿದ್ದ

ಮಗುವು ಉದ್ದೇಶಪೂರ್ವಕವಾಗಿ ಅಪಮಾನವನ್ನು ಭಾವಿಸಿ, ಮತ್ತು ತನ್ನ ತಾಯಿಯಿಂದ ಪಡೆದ ಆನುವಂಶಿಕ ದೈವತ್ವದಿಂದ ಸುಡಲ್ಪಡುತ್ತಿದ್ದಾಗ, ಆ ಪ್ರಚಂಡ ಮೋಹಿಯು ಆ ಶಿಶುವಿನ ಕೋಪಕ್ಕೆ ಗುರಿಯಾದನು. ಋಷಿಗಳು ಭಾವನಾರಾಹಿತ್ಯರಾಗಿರಲಿಲ್ಲ. ಅವರು ಕ್ರೋಧಕ್ಕೆ ವಶವಾಗಿದ್ದರು ಮತ್ತು ಪ್ರೀತಿಗೆ ಗುರಿಯಾಗಿದ್ದರು. ಇವರಿಂದ ಜನಿಸಿದವರು ಪ್ರಾಚೀನ ಮತ್ತು ಪೂರ್ವ ಇತಿಹಾಸ ಪ್ರಾಚೀನ ಪವಿತ್ರ ವಂಶಗಳಾದ ಭರ್ಗೋವಸರು, ಬಾರ್ಹಸ್ಪತರು, ಗೌತಮರು, ಕಾಶ್ಯಪರು – ಎಂದು ಆರ್ಯರ ವಂಶಜರಾಗಿ ಇಂದಿನವರೆಗೂ ವಿಭಾಗಿಸಲಾಗಿದೆ. ಆದ್ದರಿಂದ, ಆ ಮಹಾಪುರುಷರನ್ನು ನಾಗರೀಕತೆ ತನಗೆ ನೀಡಿದವರೆಂದು ಭಾರತವು ದೈವೀಕರಿಸಿದೆ.

ಭೂಮಿಯ ಮೇಲೆ ಋಷಿಗಳು, ಸ್ವರ್ಗದಲ್ಲಿ ದೇವತೆಗಳು ...

ನೀನು ವರ್ಣಿಸಿದ ಹಾಗೆ ತರುಣನಾಗಿದ್ದಾಗ ನಾನೇ ಸ್ವತಃ ಸಾತ್ವಿಕ ಮಾದರಿಯವನಾಗಿದ್ದೆ. ಆದರೆ ಮೇಲ್ಗಡೆಯಿಂದ ಶಾಂತಿ ಕೆಳಗಿಳಿದು ಬಂದಾಗ ನಾನು ಬಹಳ ಭಿನ್ನನಾದೆ. ಸತ್ವಗುಣ ನಿರ್ಗುಣದಲ್ಲಿ ಮಾಯವಾಯಿತು ಮತ್ತು ನಕಾರಾತ್ಮಕ ನಿರ್ಗುಣ ಧನಾತ್ಮಕ ತ್ರೈಗುಣದಲ್ಲಿ ಮಾಯವಾಯಿತು, ಯಾತ್ಯೈತ.

**(CWSA, 35/45)** **– ಶ್ರೀ ಅರವಿಂದರು**

*

## ಶ್ರೀ ಅರವಿಂದರ ಕೆಲವು ಮುಖಭಾವಗಳು

### ಕೌಟುಂಬಿಕ ಸದ್ಗುಣಗಳು ಹಾಗೂ ಪ್ರೇಮ

ಕೌಟುಂಬಿಕ ಸದ್ಗುಣಗಳ ರೀತಿಯಲ್ಲಿರುವುದಕ್ಕೆ ನಾನು ಎಂದೆಂದಿಗೂ ಒಳ್ಳೆಯವನಾಗುವುದಿಲ್ಲ ಎಂದು ನನಗನಿಸುತ್ತದೆ. ನಾನು ಪ್ರಯತ್ನ ಮಾಡಿದೆ, ಬಹಳ ಪರಿಣಾಮಕಾರಿಯಾಗದ, ಮಗನೆಂದು, ಸಹೋದರನೆಂದು ಪತಿಯೆಂದು ನನ್ನ ಕರ್ತವ್ಯದ ಕೆಲಭಾಗವನ್ನು ಕೈಕೊಂಡೆ ನನ್ನಲ್ಲಿ ಬಹಳ ಬಲಿಷ್ಠವಾದ ಏನೋ ಒಂದಿದೆ, ಅದು ಬೇರೆ ಪ್ರತಿಯೊಂದನ್ನು ಅದಕ್ಕೆ ಗೌಣವಾಗಿರಿಸಲು ಒತ್ತಾಯಪಡಿಸುತ್ತದೆ. ಪತ್ರಗಳನ್ನು ಬರೆಯದೆ ಇರುವುದಕ್ಕೆ ನನ್ನ ಶಿಕ್ಷಾರ್ಹತೆಗೆ

ಅದು ಒಂದು ನೆಪವಲ್ಲ. ಅದೊಂದು ದೋಷ, ಅದನ್ನು ಸುಧಾರಿಸುವುದಕ್ಕಿಂತ ಹೆಚ್ಚಾಗಿ, ಯಾವಾಗಲೂ, ಹೆಚ್ಚು ತೀವ್ರಗತಿಯಿಂದ ಒಪ್ಪಿಕೊಳ್ಳುತ್ತೇನೆ. ಇತರರಿಗೆ ಅತ್ಯಂತ ಸಾಧಾರಣವಾದ ಮಮತೆಯ ಕೊರತೆಯಿಂದ ಅದು ಜಿಗಿದು ಬರುತ್ತಿರುವಂತೆ ತೋರಿಬರುತ್ತದೆ ಎಂಬುದನ್ನು ನಾನು ಸುಲಭವಾಗಿ ತಿಳಿದುಕೊಳ್ಳಬಲ್ಲೆ. ವಂಶಾನುಗತವಾಗಿ ನನ್ನ ತಂದೆಯಿಂದ ನಾನು ಆ ದೋಷವನ್ನು ಹೊಂದಿರುವೆನೆಂದು ತೋರಿಬರಬಹುದು, ಆದರೆ ಅವರ ಸಂದರ್ಭದಲ್ಲಿ ಅದು ಹಾಗಿರಲಿಲ್ಲ, ನಾನು ಇಂಗ್ಲಂಡಿನಲ್ಲಿ ಕಳೆದ ಹದಿನಾಲ್ಕು ವರ್ಷಗಳ ಕಾಲದಲ್ಲಿ ಅವರಿಂದ ಒಂದು ಡಝುನ್ ಪತ್ರಗಳನ್ನು ಪಡೆದಿದ್ದೆ, ಆದಾಗ್ಯೂ ಅವರಲ್ಲಿ ನನಗಾಗಿದ್ದ ಮಮತೆಯ ಬಗ್ಗೆ ನಾನು ಸಂಶಯ ಪಡಲಾರೆ, ಏಕೆಂದರೆ ನನ್ನ ಮರಣ ಕುರಿತು ಮಿಥ್ಯೆಯ ವರದಿ ಅವರನ್ನು ಸಾಯಿಸುವಂತೆ ಮಾಡಿತು. ನನ್ನ ತಲೆಯ ಮೇಲಿರುವ ಎಲ್ಲ ಅಪರಿಪೂರ್ಣತೆಗಳೊಂದಿಗೆ ನಾನಿರುವ ಹಾಗೆ ನನ್ನನ್ನು ನೀನು ತೆಗೆದುಕೊಳ್ಳಬೇಕಾಗುತ್ತದೆ.

**(CWSA, 36/147)** **– ಶ್ರೀ ಅರವಿಂದರು**

*

**ಜೀವನ, ಘಟನೆಗಳು ಇವುಗಳತ್ತ ಮನೋಭಾವನೆಗಳು**

ಜಗತ್ತಿನಲ್ಲಿ ಸಂತೋಷವನ್ನು ಅರಸುತ್ತಿರುವಾಗ, ಅನಿವಾರ್ಯವಾಗಿ, ಮನುಷ್ಯ ಆ ಸಂತೋಷದ ಮಧ್ಯದಲ್ಲಿ ವೇದನೆಯನ್ನು ಕಂಡುಕೊಳ್ಳುವತ್ತ ಅದು ಕರೆದೊಯ್ಯುತ್ತದೆ, ಏಕೆಂದರೆ ವೇದನೆ ಯಾವಾಗಲೂ ಸಂತೋಷದೊಂದಿಗೆ ಹೆಣೆದುಕೊಂಡಿರುತ್ತದೆ. ಈ ನಿಯಮ ಮಕ್ಕಳನ್ನು ಪಡೆಯುವುದಕ್ಕಿರುವ ಆಸೆಗಷ್ಟೇ ಅನ್ವಯವಾಗುವುದಿಲ್ಲ, ಆದರೆ ಎಲ್ಲ ಬಗೆಯ ಜಗತ್ತಿಗೆ ಸಂಬಂಧಿಸಿದ ಆಸೆಗಳನ್ನು ಅಪ್ಪಿಕೊಳ್ಳುತ್ತದೆ.

**(ಬಂಗಾಲಿ ಬರಹಗಳು, p.349/51)** **– ಶ್ರೀ ಅರವಿಂದರು**

*

**ಕಾರ್ಯದತ್ತ ಮನೋಭಾವ**

ಅದು ಇಷ್ಟಪಡುವುದರ ಪ್ರಶ್ನೆಯಾಗಿರುವುದಿಲ್ಲ, ಆದರೆ ಕ್ಷಮತೆ (capacity) ಯದಾಗಿರುತ್ತದೆ– ಆದಾಗ್ಯೂ ಸಾಮಾನ್ಯವಾಗಿ (ಯಾವಾಗಲೂ ಅಲ್ಲ) ಇಷ್ಟ

ಕ್ಷಮತೆಯೊಂದಿಗೆ ಸಾಗುತ್ತದೆ, ಆದರೆ ಇಷ್ಟವನ್ನು ಅಭಿವೃದ್ಧಿಗೊಳಿಸಬಹುದು ಮತ್ತು ಅದಕ್ಕೂ ಹೆಚ್ಚಾಗಿ (ನೀನು ರಸ ಎಂದು ಹೇಳುವುದನ್ನು) ಅಭಿವೃದ್ಧಿಪಡಿಸಬಹುದು. ಭಗವಂತನಿಗೆ ಅರ್ಪಿಸಲು ಮನುಷ್ಯನಿಗೆ ಯಾವುದೇ ಕಾರ್ಯವನ್ನು ಕೊಟ್ಟಾಗ ಅದನ್ನು ಒಲವಿರುವ ರೀತಿಯಲ್ಲಿ ತೆಗೆದುಕೊಳ್ಳದೆ ಹಾಗಿದ್ದಾಗ, ಈ ಯೋಗದ ಉದ್ದೇಶಗಳಿಗಾಗಿ ಪೂರ್ತಿ ಯೌಗಿಕ ಸ್ಥಿತಿಯಲ್ಲಿ ಇರುತ್ತಾನೆ ಎಂದು ಹೇಳಲಿಕ್ಕಾಗದು.

ಒಂದು ಕಾಲದಲ್ಲಿ ನಾನು ಯಾವುದೇ ಭೌತಿಕ ಕಾರ್ಯಕೈಕೊಳ್ಳಲು ಸಂಪೂರ್ಣವಾಗಿ ಯೋಗ್ಯನಾಗಿರಲಿಲ್ಲ ಮತ್ತು ಕೇವಲ ಮಾನಸಿಕ ವಿಷಯಗಳನ್ನು ಕುರಿತು ಕಾಳಜಿವಹಿಸುತ್ತಿದ್ದೆ, ಆದರೆ ಭೌತಿಕ ಕಾರ್ಯಗಳನ್ನು ಮಾಡುವಂತಾಗುವಂತೆ ನನ್ನನ್ನು ತರಬೇತಿಗೆ ಒಳಪಡಿಸಿದೆ, ಆ ತರಬೇತನ್ನು ಕಾಳಜಿಯಿಂದ ಮತ್ತು ಕಾಳಜಿಯಿಂದ ಪರಿಪೂರ್ಣವಾಗುವಂತೆ ಮಾಡಿಕೊಂಡೆ, ಅದರಿಂದಾಗಿ ನನ್ನ ಸತ್ತೆಯಲ್ಲಿದ್ದ ಎದ್ದುಕಾಣುವ ದೋಷದ ಮೇಲೆ ಜಯ ಸಾಧಿಸುವಂತೆ ಮತ್ತು ದೈಹಿಕ ಉಪಕರಣ ಯೋಗ್ಯವಾಗುವಂತೆ, ಪ್ರಜ್ಞಾಪೂರ್ಣವಾಗುವಂತೆ ಮಾಡಲಾಯಿತು.

*

## ಸ್ಥಿರಗೊಂಡ ಆಧ್ಯಾತ್ಮಿಕ ಬಲ

ನಾನು ನನ್ನ ಅನುಭವದಿಂದ ಮಾತನಾಡುತ್ತಿದ್ದೇನೆ, ನನ್ನಲ್ಲಿ ಘನವಾದ ಬಲವಿದೆ, ಆದರೆ ನನಗೆ ನಿಯಮಬದ್ಧ ಹಕ್ಕುಗಳನ್ನು ಕೊಡದೆ ಇದ್ದವರ ಬಗ್ಗೆ ನನ್ನಲ್ಲಿ ಯಾರ ವಿರುದ್ಧವೂ ಧಗಧಗಿಸುವ ಉರಿ ಇರುವುದಿಲ್ಲ, ಆದಾಗ್ಯೂ ನಾನು ನನ್ನನ್ನು ದುರ್ಬಲ ಇಲ್ಲವೆ ಮೃತ ಮನುಷ್ಯನೆಂದು ಕಂಡುಕೊಳ್ಳುವುದಿಲ್ಲ. ಯಾವುದೇ ರೀತಿಯಲ್ಲಿ ತಳಮಳದಿಂದ ಇರಬಾರದೆಂದು, ತಳಮಳವನ್ನು ಯಾವಾಗಲೂ ಎಸೆದು ಬಿಡಬೇಕೆಂದು ಒಂದು ನಿಯಮವನ್ನು ಮಾಡಿಕೊಂಡಿದ್ದೇನೆ; ಆದಾಗ್ಯೂ ಅವಶ್ಯವಾದ ಸಂದರ್ಭದಲ್ಲಿ ನನ್ನ ಘನವಾದ ಬಲವನ್ನು ಉಪಯೋಗಿಸಲು ಶಕ್ತನಾಗಿದ್ದೇನೆ. ರಾಜಸಿಕ ಹಾಗೂ ಭಾವೋದ್ರೇಕ ಉಳ್ಳವುಗಳು ಮಾತ್ರ ಬಲವುಳ್ಳದ್ದಾಗಿರುತ್ತವೆ, ಉಳಿದದ್ದೆಲ್ಲ ನಿರ್ಜೀವ ಸ್ಥಿತಿ, ದೌರ್ಬಲ್ಯ ಎಂದು ನೀವು ಹೇಳುತ್ತೀರಿ– ಅದು ಹಾಗಿರುವುದಿಲ್ಲ– ಸ್ಥಿರಗೊಂಡ ಆಧ್ಯಾತ್ಮಿಕ ನೂರುಪಟ್ಟು ಬಲವುಳ್ಳದ್ದಾಗಿರುತ್ತದೆ, ಅದು ಉರಿಹೊತ್ತಿ ಮತ್ತೆ

ಮುಳುಗಿ ಹೋಗುವುದಿಲ್ಲ– ಆದರೆ ಅಲುಗಾಡದಂತಹದು, ಅಲುಗಾಡಿಸಲಾಗ–ದಂತಹದು ಮತ್ತು ನಿರಂತರವಾಗಿ ಕ್ರಿಯಾಶೀಲವಾದದ್ದು ಆಗಿರುತ್ತದೆ.

*

**ವೈರಾಗ್ಯ ಹಾಗೂ ಆಸೆಗಳಿಲ್ಲದಿರುವಿಕೆ**

ವೈರಾಗ್ಯದ ಅರ್ಥವೇನು ಎಂಬುದರ ಮೇಲೆ ಅದು ಅವಲಂಬಿಸಿರುತ್ತದೆ. ನನ್ನಲ್ಲಿ ಆಸೆಗಳಿಲ್ಲ, ಆದರೆ ಬಾಹ್ಯದಲ್ಲಿ ವೈರಾಗ್ಯದ ಜೀವನವನ್ನು ನಡೆಸುವುದಿಲ್ಲ, ಕೇವಲ ಸಮಾಜದಿಂದ ದೂರವಾಗಿ ಏಕಾಂಗಿಯಾಗಿರುತ್ತೇನೆ. ಗೀತೆಯ ಪ್ರಕಾರ ತ್ಯಾಗ, ಆಸೆ ಮತ್ತು ಅಂಟಿಕೊಳ್ಳುವಿಕೆ ಇವುಗಳಿಂದ ಆಂತರಿಕ ಸ್ವಾತಂತ್ರ್ಯ ನಿಜವಾದ ವೈರಾಗ್ಯವಾಗಿರುತ್ತದೆ.

*

**ಋಷಿ**

ನಾವು ಆ ಅತ್ಯಂತ ಪರಿಪೂರ್ಣ ಅಗ್ನಿಯ ಕಿಡಿಯೇ ಹೊರತು ಬೇರೆನಲ್ಲ
ಆ ಸಮುದ್ರದ ಕಿಡಿಗಳೇ:
ದೇವನಿಂದ ನಾವು ಬರುವೆವು, ಅವನತ್ತ ಸಾಗುವೆವು, ಶಾಶ್ವತೆಯನು
ಬಯಸುವೆವು
ಅವನ ಸಂಕಲ್ಪವಿರುವಷ್ಟು ಕಾಲ
ನಮ್ಮ ಪ್ರತ್ಯೇಕ ಜನ್ಮವಿಹುದು ಮತ್ತು ಇರುವುದು.
ಓ ಆರ್ಯ, ಜೀವನದಿಂದ ಕುಗ್ಗದಿರು, ಆದರೆ
ನಿನ್ನನ್ನು ಬೀಳ್ಕೊಡುವವರೆಗೆ
ದೇವನ ಪುಣ್ಯ ಪಾಪಗಳನ್ನು
ಹರ್ಷ ಹಾಗೂ ಸಂತೋಷಗಳೊಡನೆ ಸ್ವೀಕರಿಸು,
ಆದರೆ ನೀನು ಜೀವಿಸುತ್ತಿರುವವರೆಗೆ
ನಿನ್ನ ಭಾಗವನ್ನು ನಿನ್ನ ಪಾತ್ರವನ್ನು ಪರಿಪೂರ್ಣವಾಗಿ ನೆರವೇರಿಸು.
ಪೃಥ್ವಿ ರಂಗಮಂಚವೆಂದು, ನೀನೇ ಬಲಿಷ್ಠ ನಟನೆಂದು
ನಾಟಕ ದೇವನದೆಂದು ಕಲ್ಪನೆ ಮಾಡಿಕೊ
ಕರ್ಮಮಾಡು ಅದರ ಫಲಗಳು ಅಸ್ತಿತ್ವದಲ್ಲಿರುವ ಆ ದೇವನಿಗೆ ಸೇರಿಹವು
ಕರ್ಮಮಾಡು ಪ್ರೀತಿಸು ಹಾಗೂ ತಿಳಿದುಕೋ, ಅದರಿಂದಾಗಿ

ನಿನ್ನ ಆತ್ಮ ಅಮರ ಆನಂದವನ್ನು ಜಯಿಸುವಂತಾಗುವುದು.
ಜನರನ್ನು ಪ್ರೀತಿಸು, ದೇವನನ್ನು ಪ್ರೀತಿಸು
ಸಂತೋಷಪಡುವುದಕೆ ಭಯ ಪಟ್ಟುಕೊಳ್ಳುವುದು ಬೇಡ ಓ ರಾಜನ್
ಏಕೆಂದರೆ ಮೃತ್ಯು ದಾಟಿಕೊಂಡು ಹೋಗುವ ಮಾರ್ಗ, ದುಃಖ
ಮೂರ್ಖರಿಗೆ ಕಿರುಕುಳ ಕೊಡುವ ಕಲ್ಪಿಸಿಕೊಂಡ ವಿಷಯ.
ಆತ್ಮದಿಂದ ತಪ್ಪಿಸಿಕೊ ಪ್ರೇಮದಲ್ಲಿ ಮಾತ್ರ
ಉಚ್ಚತರ ಸಂತೋಷ ಕಂಡುಕೊ.
ದೇವನನ್ನು ಪೃಥ್ವಿಯ ಮೇಲೆ ಅರಸು
ಏಕೆಂದರೆ ತನ್ನ ಗುರಿಯನ್ನು ಅರಸುವ ಮನುಷ್ಯನ ಯಶಸ್ಸಿಗಾಗಿ
ಹಲವಾರು ಲೋಕಗಳ ದಟ್ಟನೆಯನು ಇರಿಸಿಹನು
ನಿನ್ನ ಮಾನವ ಅಧಿಕಬಲವನ್ನು ಪರಿಪೂರ್ಣಗೊಳಿಸು
ನಿನ್ನ ಕುಲವನ್ನು ಪರಿಪೂರ್ಣಗೊಳಿಸು
ಏಕೆಂದರೆ ನೀನು ದೇವನೇ ಆಗಿರುವಿ
ಕೇವಲ ನಿಶೆ ನಿನ್ನ ಸಂಕಲ್ಪದ ಮೂಲಕವೆ ಆತ್ಮದ ಮೇಲಿದೆ,
ಅದನ್ನು ತೆಗೆದುಹಾಕು ನೀನು ನಿಜವಾಗಿ ಹೊಂದಿರುವ
ಪ್ರಶಾಂತ, ನಿರ್ಮಲ ಆತ್ಮವನು ಮರಳಿ ದೊರಕಿಸು.
ನಂತರ ದೇವ ಗುರಿ ಎಂದು ಭಾವಿಸಿ ಅವನೆಡೆಗೆ
ಪ್ರೀತಿಸುವ ಮನುಷ್ಯನನ್ನು ಮೇಲೆತ್ತು.

– ಶ್ರೀ ಅರವಿಂದರು

(‘ಋಷಿ’ ಎಂಬ ಕವನದಿಂದ ಆಯ್ದದ್ದು)

*

## ಬರೋಡಾದಲ್ಲಿದ್ದಾಗ ಆದ ಆರಂಭದ ಅನುಭವಗಳು

### ಆಧ್ಯಾತ್ಮವನ್ನು ಅರಸುವುದೆಡೆಗೆ ಮೊದಲ ಹೊರಳುವಿಕೆ

ಆಧ್ಯಾತ್ಮಿಕ ಅರಸುವಿಕೆಯತ್ತ ಶ್ರೀ ಅರವಿಂದರ ಮೊದಲ ಹೊರಳುವಿಕೆ ಇಂಗ್ಲಂಡಿನಲ್ಲಿ ಅವರು ವಾಸಿಸುತ್ತಿದ್ದ ಕೊನೆಯ ವರ್ಷದಲ್ಲಿ ಬಂದಿತ್ತು. ಇಂಗ್ಲಂಡಿನ ಚರ್ಚಿನ ಪದ್ಧತಿಗಳನ್ನು ಒಪ್ಪದ– ಪ್ರೊಟೆಸ್ಟಂಟ ದೀಕ್ಷಿತ ಪಾದ್ರಿಯ ಕುಟುಂಬದಲ್ಲಿ

ಅವರು ಆರಂಭದಲ್ಲಿ ಇದ್ದರು. ಶ್ರೀ ಅರವಿಂದರು ಎಂದೆಂದಿಗೂ ಕ್ರಿಶ್ಚಿಯನ್ ಆಗಿ ಬದಲಾಗಲಿಲ್ಲವಾದರೂ ಬಾಲ್ಯದಲ್ಲಿ ಅವರಿಗೆ ಪರಿಚಿತವಾದ ಏಕೈಕ ಧಾರ್ಮಿಕ ಗ್ರಂಥ ಬೈಬಲ್ ಮಾತ್ರವಾಗಿತ್ತು. ಆದರೆ ಅವರೆದುರಿಗೆ ಆ ಗ್ರಂಥವನ್ನು ಪ್ರಸ್ತುತಪಡಿಸಿದ ರೀತಿಯಿಂದಾಗಿ ಅದರ ಬಗ್ಗೆ ಆಕರ್ಷಿತರಾಗುವುದರ ಬದಲಾಗಿ ಅದರಿಂದ ವಿಮುಖರಾದರು. ಮಧ್ಯಯುಗದ ಕ್ರಿಶ್ಚಿಯನ್ ಧರ್ಮಕ್ಕೆ ಕಳಂಕ ತರುವಂತಿರುವ ಹೇಯ, ಹಿಂಸಾಕೃತ್ಯದ ಕತೆಗಳು, ಅವುಗಳ ಸಂಕುಚಿತ ಮನೋಭಾವ ಮತ್ತು ನಂತರದ ಅವುಗಳ ಬೆಳವಣಿಗೆಯಲ್ಲಿ ಧರ್ಮದ ಬಗ್ಗೆ ಅಸಹಿಷ್ಣುತೆ ಇವೆಲ್ಲ ಕೂಡಿ ಅವರು ಆ ಧರ್ಮದಿಂದಲೇ ದೂರಾಗುವಂತೆ ಮಾಡಿದವು. ಕೆಲಕಾಲ ಅವರು ನಿರೀಶ್ವರವಾದಿಗಳಾಗಿದ್ದರಷ್ಟೇ ಅಲ್ಲದೆ ನಾಸ್ತಿಕ ಮನೋಧರ್ಮವನ್ನು ಬೆಳೆಸಿಕೊಂಡಿದ್ದರು. ಐ.ಸಿ.ಎಸ್ ಪರೀಕ್ಷೆಗಾಗಿ ಅಭ್ಯಾಸ ಮಾಡುವ ಸಮಯದಲ್ಲಿ ಅವರು ಭಾರತೀಯ 'ಆರು ತತ್ವಜ್ಞಾನಗಳು' ಗ್ರಂಥದ ಅತಿ ಸಂಕ್ಷಿಪ್ತ ಹಾಗೂ ಅಪೂರ್ಣ ವಿವರಣೆಯನ್ನು ಓದಿದರು– ಅದ್ವೈತದಲ್ಲಿ ಪ್ರತಿಪಾದಿತವಾದ ಆತ್ಮದ ಪರಿಕಲ್ಪನೆಯನ್ನು ಓದಿ ಪ್ರಭಾವಿತರಾದರು. ಈ ಜಗತ್ತು ಹಾಗೂ ಜೀವನದ ಹಿಂದೆ ಇರಬಹುದಾದ ಸತ್ಯಕ್ಕೆ ಇಲ್ಲಿ, ಈ ಸಿದ್ಧಾಂತದಲ್ಲಿ ಸುಳಿವು ಸಿಗಬಹುದೆಂದು ಅವರ ಮನಸ್ಸಿಗೆ ತೋರಿ ಬಂದಿತು. ಹಾಗಾದರೆ ಈ ಆತ್ಮ ಎಂದರೆ ಏನಿರಬಹುದೆಂದು ತಿಳಿದುಕೊಳ್ಳಲು ಸ್ವಲ್ಪ ಒರಟು ವೈಚಾರಿಕ ಪ್ರಯತ್ನ ಕೈಕೊಂಡರು– ಅಲ್ಲಿರುವ ಅಮೂರ್ತ ಕಲ್ಪನೆಗೆ ತಮ್ಮ ಪ್ರಜ್ಞೆಯಲ್ಲಿಯೇ ಒಂದು ರೀತಿಯ ಜೀವಂತ ಹಾಗೂ ಮೂರ್ತ ಸತ್ಯದ ರೂಪಕೊಡಲು ಪ್ರಯತ್ನ ಮಾಡಿದರು.– ಆದರೆ ಅದು ತಮ್ಮೊಳಗಿರುವ ಹಾಗೂ ವಿಶ್ವಂಭರವಾಗಿರುವ ಅಂತರ್ಯಾಮಿ ತತ್ವವೆಂಬುದನ್ನು ಅರಿತುಕೊಳ್ಳದೇ ಈ ಜಗತ್ತಿನ ಹಿಂಭಾಗದಲ್ಲಿ ಇಲ್ಲವೆ ಅದನ್ನು ಮೀರಿ ಆಚೆಗಿರುವ ತತ್ವ ಎಂದು ಮಾತ್ರ ಗುರುತಿಸಿದರು.

**(CWSA, 36/106)** **– ಶ್ರೀ ಅರವಿಂದರು**

*

**ಈ ಲೌಕಿಕವಾದದ್ದು ಹಾಗೂ ಇತರ ಪಾರಲೌಕಿಕವಾದದ್ದು**

ಭಾರತದ ಆತ್ಮ ಕುರಿತು ನಿನ್ನ ಹೇಳಿಕೆ ಹಾಗೂ "ಪಾರಲೌಕಿಕಕ್ಕಿಂತ ಲೌಕಿಕಕ್ಕೆ ಹೆಚ್ಚಿನ ಮಹತ್ವ ಅಥವಾ ಒತ್ತು" ಎಂದು ಹೇಳಿರುವ 'X' ನ ಅಭಿಪ್ರಾಯ ಕುರಿತು

ನನಗೆ ಅನಿಸಿದ್ದನ್ನು ನಾನು ಹೇಳಲೇಬೇಕೆಂದು ನನಗೆ ತೋರುತ್ತದೆ. ಯಾವ ಸಂದರ್ಭ ಕುರಿತು ಅವನು ಈ ಅಭಿಪ್ರಾಯ ನೀಡಿರುವನೆಂಬುದಾಗಲಿ ಅಥವಾ ಈ ಲೌಕಿಕವೆಂದರೆ ಅವನ ಪ್ರಕಾರ ಏನೆಂಬುದಾಗಲಿ ನನಗೆ ಸರಿಯಾಗಿ ತಿಳಿದಿಲ್ಲ. ಆದರೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ನಿಲುವು ಏನೆಂಬುದನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ನನಗೆ ತೋರುತ್ತದೆ. ನನ್ನ ಜೀವನ ಮತ್ತು ನನ್ನ ಯೋಗಗಳು ಸದಾಕಾಲಕ್ಕೂ, ನಾನು ಭಾರತಕ್ಕೆ ಬಂದಾಗಿನಿಂದ ಹಿಡಿದು ಎರಡನ್ನೂ ಎಂದರೆ ಲೌಕಿಕ ಹಾಗೂ ಪಾರಲೌಕಿಕ ಎರಡನ್ನೂ ಒಳಗೊಂಡಿವೆ, ಯಾವುದನ್ನೂ ಬಿಟ್ಟುಕೊಟ್ಟಿಲ್ಲ. ನನಗನಿಸಿದ ಮಟ್ಟಿಗೆ ಮಾನವನ ಎಲ್ಲ ಹಿತಾಸಕ್ತಿಗಳು ಲೌಕಿಕವಾಗಿಯೇ ಇರುತ್ತವೆ ಮತ್ತು ಅವುಗಳೆಲ್ಲ ಬಹುತೇಕ ನನ್ನ ಮನಃಪಟಲದ ಮೇಲಿವೆ ಮತ್ತು ಕೆಲವೊಂದು, ಉದಾಹರಣೆಗೆ ನನ್ನ ಜೀವನದಲ್ಲಿ ಪ್ರವೇಶಿಸಿವೆ– ಆದರೆ ಅದೇ ಕಾಲಕ್ಕೆ ಮುಂಬಯಿಯಲ್ಲಿ ಅಪೋಲೋ ಬಂದರಿನ ಮೂಲಕ ಭಾರತದ ನೆಲದ ಮೇಲೆ ಕಾಲಿಟ್ಟಾಗಿನಿಂದ ಆರಂಭಿಸಿವೆ, ನಾನು ಆಧ್ಯಾತ್ಮಿಕ ಅನುಭವಗಳನ್ನು ಹೊಂದುತ್ತಲೇ ಬಂದಿದ್ದೇನೆ– ಆದರೆ ಅವಾವೂ ಈ ಲೌಕಿಕದಿಂದ ದೂರವಾಗಿರಲಿಲ್ಲ, ಬದಲಾಗಿ ಆಂತರಿಕವಾಗಿ ಹೆಚ್ಚು ಆಪ್ತತೆಯಿಂದ, ಆತ್ಮೀಯತೆಯಿಂದ ಸಂಬಂಧಪಟ್ಟವುಗಳಾಗಿದ್ದವು– ಉದಾಹರಣೆಗೆ– ಅನಂತನಾದ ಪರಮಾತ್ಮನು ಈ ಭೌತಿಕದಲ್ಲೆಲ್ಲ ವ್ಯಾಪಿಸಿಕೊಂಡಿರುವುದು, ಈ ಭೌತಿಕ ವಸ್ತು ಮತ್ತು ಶರೀರಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವುದು ಕಂಡು ಬಂದಿತು. ಅದೇ ಕಾಲಕ್ಕೆ ನಾನೂ ಕೂಡ ಅತಿ ಭೌತಿಕ ಲೋಕಗಳನ್ನು, ಸ್ತರಗಳನ್ನು ಪ್ರವೇಶಿಸಿದೆ, ಅಲ್ಲಿರುವ ಪ್ರಭಾವ ಹಾಗೂ ಪರಿಣಾಮಗಳು ಭೌತಿಕ ಸ್ತರದ ಮೇಲೆ ಆಗುತ್ತಿರುವುದನ್ನೂ ಕಂಡುಕೊಂಡ ನಂತರ ನಾನು ಸೃಷ್ಟಿಯ ಎರಡು ಅಂಚುಗಳೆಂದು ಯಾವುದನ್ನು ಕುರಿತು ಹೇಳಿದ್ದೆನೋ ಅವುಗಳ ಮಧ್ಯದಲ್ಲಿರುವ ಸ್ತರಗಳಲ್ಲಿ ಯಾವ ಭೇದವನ್ನಾಗಲಿ ಇಲ್ಲವೆ ಸರಿಪಡಿಸಲಾಗದ ವಿರೋಧವನ್ನಾಗಲಿ ಕಾಣಲಿಲ್ಲ. ನನ್ನ ಮಟ್ಟಿಗೆ "ಸರ್ವಂ ಖಲ್ವಿದಂ ಬ್ರಹ್ಮ', ನಾನು ಎಲ್ಲೆಲ್ಲಿಯೂ ಪರಮಾತ್ಮನನ್ನೇ ಕಾಣುತ್ತೇನೆ. ಈ ಲೌಕಿಕತೆಯನ್ನು ದೂರೀಕರಿಸುವ ಹಕ್ಕು ಪ್ರತಿಯೊಬ್ಬನಿಗೂ ಇದೆ, ಪಾರಲೌಕಿಕವಾದುದನ್ನು ಆಯ್ದುಕೊಳ್ಳುವ ಹಕ್ಕೂ ಇದೆ. ಅಂತಹ ಆಯ್ಕೆಯಿಂದ ಅವನು ಶಾಂತಿ ಪಡೆಯುವುದಾದರೆ ಅದು ಒಳ್ಳೆಯದೇ, ಅವನು ಪುಣ್ಯವಂತನೇ. ಆದರೆ ವೈಯಕ್ತಿಕವಾಗಿ ಶಾಂತಿಯನ್ನು

ಪಡೆಯಲು ನನಗದರ ಆವಶ್ಯಕತೆ ಇದೆ ಎಂದು ಎನಿಸಿಲ್ಲ. ನನ್ನ ಯೋಗದಲ್ಲೂ ಕೂಡ ಆಧ್ಯಾತ್ಮ ಹಾಗೂ ಭೌತಿಕ ಇವೆರಡನ್ನೂ ನನ್ನ ದೃಷ್ಟಿಯಿಂದ ಒಟ್ಟಿಗೆ ಸೇರಿಸಲೇಬೇಕೆಂಬುದು ನನಗೆ ತೋರಿಬಂದಿತು. ದೈವೀಪ್ರಜ್ಞೆ ಹಾಗೂ ದೈವೀಶಕ್ತಿಯನ್ನು ಮಾನವರ ಹೃದಯಗಳಲ್ಲಿ ಮತ್ತು ಜಗತ್ತಿನ ಜೀವನದಲ್ಲಿ ಪ್ರತಿಷ್ಠಾಪಿಸುವ ಪ್ರಯತ್ನ ಮಾಡಿದ್ದೇನೆ. ವೈಯಕ್ತಿಕ ಮೋಕ್ಷಕ್ಕಾಗಿ ಅಲ್ಲ, ಬದಲಾಗಿ ಇಲ್ಲಿ ದಿವ್ಯಜೀವನವನ್ನು ಅನುಷ್ಠಾತನದಲ್ಲಿ ತರಲು ಪ್ರಯತ್ನಿಸಿದ್ದೇನೆ. ಇದೇ ನಿಜವಾದ ಆಧ್ಯಾತ್ಮಿಕ ಗುರಿ ಎಂದು ನನಗನಿಸಿದೆ ಹಾಗೂ ಈ ಜೀವನದಲ್ಲಿ ಭೌತಿಕ ಸಿದ್ಧಿಗಳಿಗಾಗಿ, ಭೌತಿಕವಸ್ತುಗಳಿಗಾಗಿ ಪ್ರಯತ್ನ ಮಾಡುವುದರಿಂದ ಆಧ್ಯಾತ್ಮಿಕತೆಯಲ್ಲಿ ಏನೂ ಕಡಿಮೆಯಾಗುವುದಿಲ್ಲ ಅಥವಾ ಭಾರತದ ಧರ್ಮ ಬದಲಾಗುವುದಿಲ್ಲ ಎಂದು ನನಗನಿಸಿದೆ. ಇದಷ್ಟು ಮಾತ್ರ ನನ್ನ ದೃಷ್ಟಿಕೋನ, ಸತ್ಯದ ಅನುಭವ, ಜಗತ್ತಿನ ಸ್ವಭಾವದ ಹಾಗೂ ಪರಮಾತ್ಮನ ಬಗೆಗಿನ ಅನುಭವವಾಗಿದೆ. ಇದು ಸಮಗ್ರ ಅಥವಾ ಸಂಪೂರ್ಣ ಸತ್ಯಕ್ಕೆ ಸಾಧ್ಯವಾದ ಮಟ್ಟಿಗೆ ಸಮೀಪ, ಹತ್ತಿರ ಎಂದು ನನಗೆ ತೋರಿಬಂದಿದೆ. ಹಾಗಾಗಿ ಈ ಬಗೆಯ ಹುಡುಕಾಟವನ್ನೇ ನಾನು ಸಮಗ್ರ ಯೋಗ ಎಂದು ಕರೆದಿದ್ದೇನೆ– ಇದನ್ನು ಒಪ್ಪದಿರುವ, ಇದರಲ್ಲಿ ಅಪನಂಬಿಕೆ ವ್ಯಕ್ತಪಡಿಸುವ ಅಧಿಕಾರ ಸ್ವಾತಂತ್ರ್ಯ ಪ್ರತಿಯೊಬ್ಬನಿಗೂ ಇದೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ಇಲ್ಲವೆ ಯಾವುದೇ ರೀತಿಯ ಲೌಕಿಕದ ತಿಲಾಂಶವೂ ಇಲ್ಲದೆ ಕೇವಲ ಪಾರಲೌಕಿಕದ ಆಧ್ಯಾತ್ಮಿಕ ಆವಶ್ಯಕತೆ ಇದು ಎಂದು ನಂಬುವುದಾದರೆ ಅದೂ ಕೂಡ ಸರಿಯಾದದ್ದೇ. ಅವರು ಸ್ವತಂತ್ರರು. ಆದರೆ ಹಾಗೆ ಮಾಡುವುದರಿಂದ ನನ್ನ ಯೋಗದ ಸಾಧನೆ ಮಾಡುವುದು ಮಾತ್ರ ಸಾಧ್ಯವಾಗುವುದಿಲ್ಲ. ನನ್ನ ಯೋಗವು ಬೇರೆ ಬೇರೆ ಪರಲೋಕಗಳ, ಪುರುಷೋತ್ತಮನ ಸ್ತರದ ಹಾಗೂ ಇವುಗಳ ನಡುವೆ ಇರುವ ಎಲ್ಲ ಸ್ತರಗಳ ಸಂಪೂರ್ಣ ಅನುಭವವನ್ನು ಮತ್ತು ಅವುಗಳಿಂದ ನಮ್ಮ ಜೀವನ ಹಾಗೂ ಭೌತಿಕ ವಿಶ್ವದ ಮೇಲೆ ಆಗುವ ಪರಿಣಾಮಗಳನ್ನು ಒಳಗೊಳ್ಳುತ್ತದೆ. ಆದರೂ ಕೇವಲ ಪುರುಷೋತ್ತಮನ ಇಲ್ಲವೆ ಈಶ್ವರನ ಯಾವುದಾದರೊಂದು ರೂಪ, ಶಿವ, ಕೃಷ್ಣ ಈ ಜಗತ್ತಿನ ಪ್ರಭು ನಮ್ಮ ಹಾಗೂ ನಮ್ಮೆಲ್ಲ ಕಾರ್ಯಗಳ ಒಡೆಯ ಅಥವಾ ವಿಶ್ವಂಭರನಾದ ಸಚ್ಚಿದಾನಂದನ ಸಾಕ್ಷಾತ್ಕಾರದ ಮೇಲೆಯೇ ಒತ್ತು ನೀಡಿ, ಈ ಯೋಗದ ಮುಖ್ಯ ಸಿದ್ಧಿಗಳನ್ನು ಸಾಧಿಸಿಕೊಂಡು ನಂತರ ದಿವ್ಯ

ಜೀವನದ ಆದರ್ಶವನ್ನು ಮತ್ತು ಈ ಭೌತಿಕ ಜಗತ್ತಿನ ಮೇಲೆ ಆತ್ಮದ ವಿಜಯದ ಪರಿಕಲ್ಪನೆಯನ್ನು ಒಪ್ಪುವುದಾದರೆ ಅಲ್ಲಿಂದ ಸಮಗ್ರ ಪರಿವರ್ತನೆಯತ್ತ ಹೋಗಲೂಬಹುದು.

**(CWSA, 35/234–35)** **– ಶ್ರೀ ಅರವಿಂದರು**

*

**ಪ್ರಾಣಾಯಾಮದ ಅಭ್ಯಾಸ**

ಬರೋಡಾದಲ್ಲಿ ನಾನು ಪ್ರಾಣಾಯಾಮದ ಅಭ್ಯಾಸ ಮಾಡುತ್ತಿದ್ದಾಗ ಪ್ರತಿದಿನ ಅದನ್ನು ಐದು ತಾಸುಗಳ ಕಾಲ ಕೈಕೊಳ್ಳುತ್ತಿದ್ದೆ– ಮುಂಜಾನೆ ಮೂರು ತಾಸು, ಸಾಯಂಕಾಲ ಎರಡು ತಾಸು ಮಾಡುತ್ತಿದ್ದೆ. ಆಗ ಮನಸ್ಸು ತುಂಬಾ ಪ್ರಖರತೆಯಿಂದ ಹಾಗೂ ಶಕ್ತಿಯಿಂದ ಕಾರ್ಯ ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿತು. ನಾನು ಆ ದಿನಗಳಲ್ಲಿ ಕಾವ್ಯ ರಚನೆ ಮಾಡುತ್ತಿದ್ದೆ. ಪ್ರಾಣಾಯಾಮದ ಅಭ್ಯಾಸವನ್ನು ಮಾಡುವ ಪೂರ್ವದಲ್ಲಿ ನಾನು ಒಂದು ದಿನದಲ್ಲಿ ಸುಮಾರು ಐದರಿಂದ ಎಂಟು ಸಾಲುಗಳಷ್ಟನ್ನು ಮಾತ್ರ ಬರೆಯುತ್ತಿದ್ದೆ, ಎಂದರೆ ಒಂದು ತಿಂಗಳಲ್ಲಿ ಎರಡು ನೂರು ಸಾಲುಗಳಷ್ಟಾಗುತ್ತಿದ್ದವು.– ಅಭ್ಯಾಸ ಮಾಡಲು ತೊಡಗಿಕೊಂಡ ನಂತರ ಕೇವಲ ಅರ್ಧ ಗಂಟೆಯಲ್ಲಿ ಎರಡು ನೂರು ಸಾಲುಗಳನ್ನು ಬರೆಯಲಾರಂಭಿಸಿದೆ. ಕೇವಲ ಇಷ್ಟೇ ಅಲ್ಲ, ಈ ಅಭ್ಯಾಸ ಮಾಡಲಾರಂಭಿಸಿದ ಮೇಲೆ, ನನಗೆ ಅಂತಸ್ಫೂರ್ತಿ ಬಂದಾಗ, ಸ್ಫುರಿಸಿದ ಎಲ್ಲ ಸಾಲುಗಳನ್ನು ಕ್ರಮಬದ್ಧ ರೀತಿಯಲ್ಲಿ ನೆನಪಿನಲ್ಲಿಟ್ಟುಕೊಂಡು ನಂತರ ಯಾವಾಗ ಬೇಕಾದರೂ ಬರೆಯಲು ಸಾಧ್ಯವಾಯಿತು. ಇಂತಹ ಅಭಿವೃದ್ಧಿ ಹೊಂದಿದ ಕಾರ್ಯಗಳ ಜೊತೆಗೆ ನನ್ನ ಮಿದುಳಿನ ಸುತ್ತ ವಿದ್ಯುತ್ ಪ್ರವಾಹದಂತಹ ಚಲನೆಯ ಅನುಭವವಾಗುತ್ತಿತ್ತು; ಮತ್ತು ಅದು ತುಂಬ ಸೂಕ್ಷ್ಮ ರೂಪದಲ್ಲಿರುವುದರ ಅರಿವಾಗುತ್ತಿತ್ತು. ಎಲ್ಲವೂ ಎಲ್ಲೆಲ್ಲಿಯೂ ಈ ಸೂಕ್ಷ್ಮ ವಸ್ತುವೇ ಕಾರ್ಯ ಮಾಡುತ್ತಿರುವಂತೆ ನನಗೆ ತೋರಿಬರುತ್ತಿತ್ತು.

**(ಸಾಯಂಕಾಲದ ಮಾತುಕತೆಗಳು: 204)** **– ಶ್ರೀ ಅರವಿಂದರು**

*

**ಯೋಗಿ ವಿಷ್ಣು ಭಾಸ್ಕರ ಲೀಲೆ ಅವರನ್ನು ಭೇಟಿ ಮಾಡುವ ಮೊದಲಾಗಿದ್ದ ಅನುಭವಗಳು**

ಲೇಲೆ ಶ್ರೀ ಅರವಿಂದರನ್ನು ಕೇಳಿದ್ದೇನೆಂದರೆ ಅವರೊಳಗಿರುವ ಅಂತರಂಗದ ಮಾರ್ಗದರ್ಶಿಗೆ ಸಂಪೂರ್ಣವಾಗಿ ಶರಣಾಗಲು ಹಾಗೂ ಅವನು ಮಾಡಿಸಿದಂತೆ ಮಾಡಲು ಅವರಿಗೆ ಸಾಧ್ಯವಿದೆಯೇ ಎಂದು. ಒಂದು ವೇಳೆ ಹಾಗೆ ಮಾಡಲು ಸಾಧ್ಯವಾದರೆ ಅವರಿಗೆ ಲೇಲೆಯವರಿಂದಾಗಲಿ ಇಲ್ಲವೆ ಇನ್ನಾವುದೇ ವ್ಯಕ್ತಿಯಿಂದಾಗಲಿ ಸಲಹೆ ಪಡೆಯುವ ಅಗತ್ಯವಿರುವುದಿಲ್ಲ. ಶ್ರೀ ಅರವಿಂದರು ಇದನ್ನು ಒಪ್ಪಿಕೊಂಡರು ಮತ್ತು ಅದನ್ನೇ ತಮ್ಮ ಯೋಗಕ್ಕೆ ಸಾಧನೆಯನ್ನಾಗಿ ಹಾಗೂ ಬದುಕಿನ ನಿಯಮವೆಂದಾಗಿ ಮಾಡಿಕೊಂಡರು– ಆದರೆ ಲೇಲೆಯವರನ್ನು ಭೇಟಿ ಮಾಡುವ ಮೊದಲು ಶ್ರೀ ಅರವಿಂದರಿಗೆ ಕೆಲವು ಆಧ್ಯಾತ್ಮಿಕ ಅನುಭವಗಳಾಗಿದ್ದವು. ಆದರೆ ಅದೆಲ್ಲ ಯೋಗದ ಬಗ್ಗೆ ಏನನ್ನೋ ತಿಳಿದುಕೊಳ್ಳುವ ಮೊದಲು ಇಲ್ಲವೆ ಯೋಗ ಎಂದರೆ ಏನು ಎಂಬುದನ್ನು ಕೂಡ ತಿಳಿದುಕೊಳ್ಳುವ ಮೊದಲು– ಉದಾಹರಣೆಗೆ ಪರದೇಶದಲ್ಲಿ ದೀರ್ಘಾವಧಿಯನ್ನು ಕಳೆದ ನಂತರ ಮೊದಲ ಬಾರಿಗೆ ಭಾರತದ ನೆಲದ ಮೇಲೆ ಕಾಲಿಟ್ಟಾಗ ಅವರ ಮೇಲೆ ಬೃಹತ್ ಶಾಂತಿ ಇಳಿದು ಬಂದಿತು. ವಾಸ್ತವದಲ್ಲಿ ಮುಂಬಯಿಯ ಅಪೋಲೋ ಬಂದರಿನಲ್ಲಿ ಮೊದಲ ಹೆಜ್ಜೆ ಇರಿಸಿದಾಗ ಆದದ್ದು (ಈ ಶಾಂತಿ ಅವರನ್ನು ಸಂಪೂರ್ಣವಾಗಿ ಆವರಿಸಿಕೊಂಡು ಬಿಟ್ಟಿತು. ನಂತರ ಅನೇಕ ತಿಂಗಳುಗಳ ಕಾಲ ಹಾಗೆಯೇ ಉಳಿದುಕೊಂಡಿತ್ತು) ಅನುಭವವಾಯಿತು. ಬರೋಡಾ ವಾಸ್ತವ್ಯದ ಮೊದಲ ವರ್ಷದಲ್ಲಿ ಅವರು ಪಯಣಿಸುತ್ತಿದ್ದ ಕುದುರೆ ಗಾಡಿ ಅಪಘಾತಕ್ಕೀಡಾಗುವ ಸನ್ನಿವೇಶದಲ್ಲಿ ಅವರೊಳಗಿಂದಲೇ ದೇವತೆಯೊಬ್ಬ ಮೇಲೆದ್ದು ಬಂದು ರಕ್ಷಿಸಿದ್ದು ಇತ್ಯಾದಿ. ಅವು ಅನಿರೀಕ್ಷಿತವಾಗಿ ಒಮ್ಮೆಗೆ ಸಂಭವಿಸಿದ್ದವೇ ಹೊರತು ಸಾಧನೆಯ ಭಾಗವಾಗಿ ಅಲ್ಲ. (ಗಂಗಾನಾಥ ಊರಿನ) ಬ್ರಹ್ಮಾನಂದರ ಶಿಷ್ಯರೊಬ್ಬರಿಂದ ನಿಯಮಗಳನ್ನು ತಿಳಿದುಕೊಂಡು, ಯಾವ ಗುರುವಿನ ಸಹಾಯವಿಲ್ಲದೇ ತಾವೇ ಸ್ವತಃ ಯೋಗಾಭ್ಯಾಸವನ್ನು ಆರಂಭ ಮಾಡಿದರು. ಮೊದಲು ಆ ಅಭ್ಯಾಸವು ಬಹಳ ತಾಳ್ಮೆಯಿಂದ ಕೂಡಿರಬೇಕಾಗಿತ್ತು (ಕೆಲ ದಿನಗಳಲ್ಲಿ ಪ್ರತಿದಿನ ಆರು ಗಂಟೆಗಳ ಕಾಲಕ್ಕಿಂತಲೂ ಹೆಚ್ಚಾಗಿರುತ್ತಿತ್ತು.)– ಯೋಗ ಹಾಗೂ ರಾಜಕೀಯ ಇವುಗಳ ನಡುವೆ ಓಡಾಡುವಾಗ ಯಾವ ವಿರೋಧವೂ ಕಂಡುಬರಲಿಲ್ಲ. ಅವರು ಯೋಗವನ್ನು ಆರಂಭಮಾಡಿದಾಗ

ಎರಡನ್ನೂ ಸಮನಾಗಿ ತೆಗೆದುಕೊಂಡು ಹೋದರು, ಎರಡರ ನಡುವೆ ಯಾವ ವಿರೋಧವೂ ಕಂಡುಬರಲಿಲ್ಲ.– ಆದಾಗ್ಯೂ ತಮಗೊಬ್ಬ ಗುರು ಬೇಕೆಂದು ಅವರಿಗನಿಸಿತು. ಅವರ ಈ ಹುಡುಕಾಟದ ನಡುವೆ ನಾಗಾ ಸನ್ಯಾಸಿಯೊಬ್ಬನನ್ನು ಭೇಟಿ ಮಾಡಿದರು. ಬರಿನಗೆ ತೀವ್ರತರವಾದ ಪರ್ವತ ಜ್ವರ ಬಂದು ಬಹಳ ದಿನಗಳವರೆಗೆ ನರಳುತ್ತಿದ್ದಾಗ ಈ ನಾಗಾಸಂನ್ಯಾಸಿಯು ಯಾವುದೋ ಮಂತ್ರವನ್ನು ಗುಣುಗುಣಿಸುತ್ತ ಚಾಕುವೊಂದನ್ನು ಒಂದು ಲೋಟ ನೀರಿನ ಸುತ್ತ ಪ್ರದಕ್ಷಿಣಾಕಾರದಲ್ಲಿ ತಿರುಗಿಸಿ ಗುಣಪಡಿಸಿದ್ದನ್ನು ನಂಬಿಕೆಯಿಂದ ಹೇಳಿದ್ದಾರೆ. ಆ ನೀರು ಕುಡಿದು ಬರಿನ್ ರೋಗಮುಕ್ತರಾದರು. ಆದರೂ ಶ್ರೀ ಅರವಿಂದರು ಆ ಸನ್ಯಾಸಿಯನ್ನು ಗುರುವೆಂದು ಸ್ವೀಕರಿಸಲಿಲ್ಲ. ಅವರು ಬ್ರಹ್ಮಾನಂದರನ್ನು ಭೇಟಿ ಮಾಡಿದರು. ಅವರಿಂದ ತುಂಬಾ ಆಕರ್ಷಿತರಾಗಿದ್ದರು. ಆದರೂ ಅವರು ಲೇಲೆಯವರನ್ನು ಭೇಟಿ ಮಾಡುವವರೆಗೆ, ಅದೂ ಅಲ್ಪ ಕಾಲಾವಧಿಗೆ ಮಾತ್ರ, ಅವರಿಗೆ ಯಾವ ಗುರುವಿನ ಸಹಾಯವೂ ಇರಲಿಲ್ಲ, ಮಾರ್ಗದರ್ಶನವೂ ಇರಲಿಲ್ಲ.

**(CWSA, 26/110)** **– ಶ್ರೀ ಅರವಿಂದರು**

*

**ಯೋಗಿ ವಿಷ್ಣು ಭಾಸ್ಕರ ಲೇಲೆ ಅವರೊಂದಿಗೆ ಭೇಟಿ**

ಸುರತ್‌ನಲ್ಲಾದ ಕಾಂಗ್ರೆಸ್ ಅಧಿವೇಶನದಿಂದ ನಾನು ಬರೋಡಾಕ್ಕೆ ಹಿಂತಿರುಗಿದಾಗ ಬರಿನ್ ನನಗೊಂದು ಪತ್ರ ಕಳೆಸಿದ್ದ. ತನಗೊಬ್ಬ ಯೋಗಿಯ ಪರಿಚಯವಿದೆ ಹಾಗೂ ಅವರನ್ನು ನನಗೆ ಬರೋಡಾದಲ್ಲಿ ಪರಿಚಯ ಮಾಡಿಕೊಡುವೆನೆಂದು ತಿಳಿಸಿದ್ದ. ಬರಿನ್ ಲೇಲೆಯವರಿಗೆ ತಂತಿ ಸಂದೇಶ ಕಳಿಸಿದ, ಅವರು ಬರೋಡಾಕ್ಕೆ ಬಂದರು. ಆಗ ನಾನು ಕಾಶಿರಾವ್ ಜಾಧವ ಅವರ ಮನೆಯಲ್ಲಿರುತ್ತಿದ್ದೆ. ನಾವು ಅಲ್ಲಿಂದ ಸರದಾರ ಮುಜುಮದಾರ ಅವರ ಮನೆಗೆ ಹೋದೆವು. ಮೇಲ್ಮಹಡಿಯ ಕೋಣೆಯೊಂದರಲ್ಲಿ ಹೋಗಿ ಬಾಗಿಲು ಮುಚ್ಚಿ ಕುಳಿತುಕೊಂಡೆವು– ಅವರು ನನಗೆ ಏನೂ ಮಾಡಲು ಹೇಳಲಿಲ್ಲ, ಬದಲಾಗಿ ನನ್ನ ಮನಸ್ಸಿನಲ್ಲಿ ಬರುವ ಎಲ್ಲ ವಿಚಾರಗಳನ್ನು ಹೊರಚೆಲ್ಲಲು ಆದೇಶಿಸಿದರು. ಮೂರು ದಿನಗಳಲ್ಲಿ ನಾನು ಅದನ್ನು ಮಾಡಿಬಿಟ್ಟೆ. ನಾವು ಧ್ಯಾನ ಮಾಡುವುದಕ್ಕೆ ಕುಳಿತುಕೊಂಡೆವು. ನನಗೆ ನಿಶ್ಯಬ್ದ ಬ್ರಹ್ಮ ಪ್ರಜ್ಞೆಯ ಸಾಕ್ಷಾತ್ಕಾರವಾಯಿತು. ನಾನು

ಮಿದುಳಿನ ಆಚೆಯಿಂದ ವಿಚಾರ ಮಾಡಲಾರಂಭಿಸಿದೆ ಮತ್ತು ಅವತ್ತಿನಿಂದ ಯಾವಾಗಲೂ ನಾನು ಹಾಗೆಯೇ ಮಾಡುತ್ತ ಬಂದಿದ್ದೇನೆ. ಕೆಲವೊಮ್ಮೆ ರಾತ್ರಿ ಕಾಲದಲ್ಲಿ ಆ ಶಕ್ತಿ ಬರುವುಂಟು. ನಾನದನ್ನು ಸ್ವೀಕರಿಸುತ್ತೇನೆ ಹಾಗೂ ಅದು ಮುಂಜಾನೆಯ ಹೊತ್ತಿನಲ್ಲಿ ಸ್ಫುರಿಸಿದ ವಿಚಾರಗಳನ್ನು ಶಬ್ದಗಳ ರೂಪದಲ್ಲಿ ಹಾಳೆಯ ಮೇಲೆ ಬರೆದಿಡುತ್ತೇನೆ.

ಆ ಸ್ಥಿತಿಯಲ್ಲಿ, ಎಂದರೆ, ನಿಶ್ಯಬ್ದ, ವಿಚಾರರಹಿತ ಸ್ಥಿತಿಯಲ್ಲಿ ನಾವು ಮುಂಬಯಿಗೆ ಹೋದೆವು. ಅಲ್ಲಿದ್ದ ರಾಷ್ಟ್ರೀಯ ಸಂಘದಲ್ಲಿ ನಾನೊಂದು ಉಪನ್ಯಾಸ ನೀಡಬೇಕಾಗಿದ್ದಿತು. ನಾನೇನು ಮಾಡಬೇಕೆಂದು ಅವರನ್ನು ಕೇಳಿದೆ. ಅವರು ಪ್ರಾರ್ಥನೆ ಮಾಡಲು ಹೇಳಿದರು. ಆದರೆ ನಾನು ನಿಶ್ಯಬ್ದ ಬ್ರಹ್ಮನಲ್ಲಿ ಕರಗಿ ಹೋಗಿದ್ದರಿಂದ ನನಗೆ ಪ್ರಾರ್ಥನೆ ಮಾಡುವ ಮನಸ್ಥಿತಿ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಆಗ ಕೆಲವರು ಸೇರಿ ತಾವು ಪ್ರಾರ್ಥನೆ ಮಾಡುವೆವು ಎಂದು ಹೇಳಿದರು. ನಾನು ಮಾತ್ರ ಸಭೆಗೆ ಹೋಗಿ, ಸಹಜವಾಗಿ, ನಮಸ್ಕಾರ ಮಾಡಬೇಕಾಗಿದ್ದಿತು. ಸಭಿಕರು ಸ್ವತಃ ಸರ್ವವ್ಯಾಪಿಯಾದ ನಾರಾಯಣ ಸ್ವರೂಪದವರೆಂದು ಭಾವಿಸಿ ಅವರಿಗೆ ನಮಸ್ಕಾರ ಮಾಡಬೇಕು, ನನ್ನ ಮೂಲಕ ಧ್ವನಿಯೊಂದು ತಾನಾಗೇ ಎಲ್ಲವನ್ನು ಮಾತನಾಡುವುದು ಎಂದು ಹೇಳಿದರು– ನಾನು ಅವರು ಹೇಳಿದಂತೆ ಮಾಡಿದೆ.– ನಾನು ಸಭೆಗೆ ಹೋಗುವಾಗ ಯಾರೋ ಒಬ್ಬರು ನನಗೊಂದು ಓದಲೆಂದು ವಾರ್ತಾಪತ್ರಿಕೆಯನ್ನು ನೀಡಿದರು. ಅದರ ಮೇಲಿದ್ದ ಉಪಶೀರ್ಷಿಕೆಯೊಂದು ನನ್ನ ಕಣ್ಣಿಗೆ ಬಿದ್ದಿತು, ಅದರ ಪ್ರಭಾವ ನನ್ನ ಮೇಲಾಯಿತು– ನಾನು ಸಭೆಯನ್ನು ಉದ್ದೇಶಿಸಿ ಮಾತನಾಡಲು ಎದ್ದು ನಿಂತಾಗ ಆ ಪರಿಕಲ್ಪನೆ ನನ್ನ ಮನಸ್ಸಿನಲ್ಲಿ ಮಿಂಚಿ ಹೊಳೆಯಿತು. ಆಗ ಒಮ್ಮೆಗೆ ಮಾತು ತಾನಾಗಿ ಹೊರಬರತೊಡಗಿತು– ಅದು ಲೇಲೆಯವರೊಂದಿಗೆ ನನ್ನ ಎರಡನೆಯ ಅನುಭವ. ಇದರಿಂದ ಅವರಲ್ಲಿ ಯೌಗಿಕ ಅನುಭವವನ್ನು ಬೇರೆಯವರಿಗೂ ನೀಡಬಲ್ಲ ಶಕ್ತಿ ಇತ್ತೆಂದು ತಿಳಿದು ಬರುತ್ತದೆ.

**ನೆರಳಿನಂತಹ, ಮಿಥ್ಯೆಯಿಂದ ಕೂಡಿದ ಜಗತ್ತಿನ ಅನುಭವ**

ನಾನಾಗ ಮುಂಬೈಯಲ್ಲಿದ್ದೆ, ಸ್ನೇಹಿತನೊಬ್ಬನ ಮನೆಯ ಬಾಲ್ಕನಿಯಿಂದ ನೋಡುತ್ತಿದ್ದಾಗ ಮುಂಬಯಿಯ ಎಲ್ಲ ಗದ್ದಲದ ಚಲನವಲನೆಗಳು

ಸಿನಿಮಾದೊಳಗಿನ ಚಿತ್ರಗಳಂತೆ ನನಗೆ ತೋರಿಬಂದವು– ಎಲ್ಲವೂ ಮಿಥ್ಯೆ ನೆರಳಿನ ಹಾಗಿರುವಂತಹದು. ಅದೊಂದು ವೇದಾಂತಿಕ ಅನುಭವ– ಅಂದಿನಿಂದ ನಾನು ನಿರಂತರ ಆ ಮನಶ್ಶಾಂತಿಯನ್ನು ಕಾಪಾಡಿಕೊಂಡು ಬಂದಿದ್ದೇನೆ, ನಾನದನ್ನು ಎಂತಹವೇ ಕಠಿಣ ಪ್ರಸಂಗಗಳಲ್ಲಿ ಕಳೆದುಕೊಂಡಿಲ್ಲ. ಮುಂಬೈನಿಂದ ಕೊಲ್ಕತ್ತಾಗೆ ಬರುವ ಸಮಯದಲ್ಲಿ ನಾವು ಮಾಡಿದ ಉಪನ್ಯಾಸಗಳು ಅದೊಂದೇ ಸ್ವಭಾವದವಾಗಿದ್ದವು– ಕೆಲ ಭಾಗಗಳಲ್ಲಿ ಮಾನಸಿಕ ಕಾರ್ಯದ ಮಿಶ್ರಣವಿತ್ತು, ಅಷ್ಟೇ. ವಿದಾಯ ಹೇಳುವುದರ ಮೊದಲು ನಾನು ಲೇಲೆಯವರಿಗೆ ಹೇಳಿದೆ: "ನಾವಿನ್ನು ಕೂಡಿ ಇರುವುದಿಲ್ಲವಾದ್ದರಿಂದ ಸಾಧನೆಯ ವಿಷಯ ಕುರಿತು ಸಲಹೆ ನೀಡಬೇಕು." ಇದೇ ಸಮಯದಲ್ಲಿ ನನ್ನ ಹೃದಯದಲ್ಲಿ ಸ್ಫುರಿಸಿದ್ದ ಮಂತ್ರವೊಂದನ್ನು ಕುರಿತು ಅವರಿಗೆ ಹೇಳಿದೆ. ಅವರು ಸಲಹೆ ನೀಡುತ್ತಿದ್ದಂತೆಯೇ ನಡುವೆ ನಿಲ್ಲಿಸಿಬಿಟ್ಟು ನಾನು ಆ ಮಂತ್ರವನ್ನು ಕೊಟ್ಟ ಪರಮಾತ್ಮನನ್ನು ಸಂಪೂರ್ಣವಾಗಿ ನಂಬುತ್ತೇನೆಯೇ ಅವಲಂಬಿಸಿರುತ್ತೇನೆಯೇ ಎಂದು ಕೇಳಿದರು. ನಾನು ಯಾವಾಗಲೂ ಹಾಗೆ ಮಾಡಬಲ್ಲೆ ಎಂದು ಹೇಳಿದೆ. ಆಗ ಸಲಹೆ, ಸೂಚನೆ ನೀಡುವ ಯಾವ ಅಗತ್ಯವೂ ಇಲ್ಲ ಎಂದು ಅವರು ಹೇಳಿದರು. ನಾವು ತಲುಪಬೇಕಾಗಿದ್ದ ಸ್ಥಳ ಮುಟ್ಟುವವರೆಗೆ ನಮ್ಮ ಮಾತುಕತೆ ಮುಂದುವರಿಯಲಿಲ್ಲ, ಕೆಲವು ತಿಂಗಳು ನಂತರ ಅವರು ಕೊಲ್ಕತ್ತಾಕ್ಕೆ ಬಂದರು. ನಾನು ಮುಂಜಾನೆ ಹಾಗೂ ಸಾಯಂಕಾಲ ಧ್ಯಾನ ಮಾಡುವುದನ್ನು ಮುಂದುವರಿಸಿದ್ದೇನೆಯೇ ಎಂದು ಕೇಳಿದರು. ನಾನು 'ಇಲ್ಲ' ಎಂದು ಹೇಳಿದೆ. ಆಗ ಯಾವುದೋ ದುಷ್ಟಶಕ್ತಿ ನನ್ನನ್ನು ಆವರಿಸಿಕೊಂಡಿದೆ ಎಂದು ಭಾವಿಸಿ ಕೆಲವು ಸಲಹೆಗಳನ್ನು ನೀಡಲಾರಂಭಿಸಿದರು. ನಾನು ಅವರಿಗೆ ಅವಮಾನ ಮಾಡಲಿಲ್ಲವಾದರೂ ಅವರು ಹೇಳಿದಂತೆ ಮಾಡಲಿಲ್ಲ. ನನಗೆ ಯಾವ ಮಾನವ ಗುರುವಿನ ಆವಶ್ಯಕತೆ ಇಲ್ಲ ಎಂಬ ಸಂದೇಶವೊಂದು ಅದಾಗಲೇ ಅಂತರಂಗದಿಂದ ಬಂದಿತ್ತು. ಧ್ಯಾನಕ್ಕೆ ಸಂಬಂಧಿಸಿದಂತೆ ನಾನು ಇಡೀದಿನ ಧ್ಯಾನದಲ್ಲೇ ಇರುತ್ತಿದ್ದೆ ಎಂದು ಹೇಳಲು ನಾನು ಸಿದ್ಧನಾಗಿರಲಿಲ್ಲ. ಅದೇ ಮನಸ್ಥಿತಿಯಲ್ಲೇ 'ವಂದೇ ಮಾತರಮ್' ಹಾಗೂ 'ಕರ್ಮಯೋಗಿ' ಪತ್ರಿಕೆಗಳನ್ನು ಬರೆದಿದ್ದೇನೆ– ಅಂದಿನಿಂದಾರಂಭಿಸಿ ನಾನು ಆಂತರಿಕ ಮಾರ್ಗದರ್ಶನವನ್ನೇ ನಂಬಿದ್ದೇನೆ. ಅದು ನನ್ನನ್ನು ತಪ್ಪುದಾರಿಗೆ ಎಳೆಯುತ್ತಿದೆಯೇನೋ ಎಂದೆನಿಸಿದಾಗಲೂ ಸಹ ಅದನ್ನೇ ಅನುಸರಿಸಿದ್ದೇನೆ. ಆರ್ಯದಲ್ಲಿ ಹಾಗೂ ಮುಂದಿನ ಇತರ ಎಲ್ಲ ಲೇಖನಗಳಲ್ಲಿ ಈ ಮಿದುಳನ್ನು

ಉಪಯೋಗಿಸಿಲ್ಲ. ಹೌದು ಆ ಶಕ್ತಿಯೇ ಸದಾ ಕಾರ್ಯ ಮಾಡುತ್ತಿತ್ತು. ನಾನು ಈಗ ಮಾತ್ರ ಆ ವಿಧಾನವನ್ನು ಅನುಸರಿಸುವುದಿಲ್ಲ. ನಾನದನ್ನು ಪರಿಪೂರ್ಣ–ವಾಗುವಂತೆ ಮೇಲಕ್ಕೆತ್ತಿ ಬೆಳೆಸಿದೆ; ನಂತರ ಅದನ್ನು ಬಿಟ್ಟುಕೊಟ್ಟೆ.

**(ಸಾಯಂಕಾಲದ ಮಾತುಕತೆಗಳು: 71, 72, 73) – ಶ್ರೀ ಅರವಿಂದರು**

*

**ನಿರ್ವಾಣ**



ಮೂಕ ಏಕತೆಯೊಂದನ್ನು ಹೊರತುಪಡಿಸಿ ಉಳಿದೆಲ್ಲವನ್ನೂ
ನಾಶಮಾಡಲಾಗಿಹುದು
ಯೋಚನೆಯಿಂದ ಮನಸ್ಸು ದುಃಖದಿಂದ ಹೃದಯ ವಿಮೋಚನೆಗೊಂಡು

ಅಸ್ತಿತ್ವದಲ್ಲಿರದಂತೆ ನಂಬಲಾಗದ ರೀತಿಯಲ್ಲಿ ಬೆಳೆಯುವವು;
ಅಲ್ಲಿ ನಾನಿಲ್ಲ, ಪರಿಚಿತ ಇಲ್ಲವೆ ಅಪರಿಚಿತ ಪ್ರಕೃತಿ ಅಲ್ಲಿಲ್ಲ
ನಗರ, ಛಾಯಾಪ್ರಕಾಶವಿಲ್ಲದ ನೆರಳಿನಂತಿರುವ ಒಂದು ಚಿತ್ರ,
ನೈಜವಲ್ಲದ ರೀತಿಯಲ್ಲಿ ತೇಲುತ್ತಿದೆ ಕಂಪಿಸುತ್ತಿದೆ; ಬೆಳ್ಳಿ ತೆರೆಯ ಮೇಲಿನ
ಖಾಲಿ ಆಕಾರಗಳನು
ತೆರಪಿಲ್ಲದಂತೆ ಪ್ರವಹಿಸುತ್ತದೆ, ಅದು ತೀರವಿಲ್ಲದ ಆಳವಾದ ಹಳ್ಳಗಳಲ್ಲಿ
ಹಡಗಿನ ಅಟ್ಟ ಕುಸಿದು ಬೀಳುವಂತಿರುವಂತೆ ಜಗತ್ತನ್ನು ಮಾಡಲಾಗಿದೆ
ಕೇವಲ ಮಿತಿಯಲ್ಲಿರಿಸಲಾಗದ ಶಾಶ್ವತತೆಯೊಂದು ಇಲ್ಲಿದೆ
ಅದ್ಭುತವಾದ, ಆಕಾರರಹಿತ, ನಿಶ್ಚಲ ದೈವೀ ಶಾಂತಿ ಎಲ್ಲವನ್ನೂ
ಸ್ಥಾನಾಂತರ ಮಾಡುತ್ತದೆ.
ನಾನೆಂಬುಬುದಾಗಿರುವುದರಲ್ಲಿ ಅನಾಮಧೇಯ ಶೂನ್ಯ ಆವರಿಸಿಕೊಂಡಿದೆ,
ತೃಪ್ತಿಯಿಂದ ದೈವೀ ಅಜ್ಞಾತವಾದುದರಲ್ಲಿ ಅದು ಬಾಡಿ ಹೋಗಬಹುದು
ಇಲ್ಲವೆ ದೈವೀ ಅನಂತದ ಪ್ರಕಾಶಮಯ ಸಾಗರಗಳೊಡನೆ
ರೋಮಾಂಚನಗೊಳ್ಳಬಹುದು.

**(CWSA, 2/561)** **– ಶ್ರೀ ಅರವಿಂದರು**

*

ನನ್ನದೇ ಯೋಗದ ಮೂಲಭೂತ ಪರಿಣಾಮ ನಿರ್ವಾಣವನ್ನು ತಲುಪುವುದಾಗಿತ್ತು. ಅದು ಇತರ ವಿಷಯಗಳನ್ನು ತನ್ನಲ್ಲಿ ಒಪ್ಪಿಕೊಳ್ಳುವುದಕ್ಕಿಂತ ಮೊದಲು ನಾನು ಹಗಲಿರುಳು ಆ ನಿರ್ವಾಣದಲ್ಲಿಯೇ ಜೀವಿಸುತ್ತಿದ್ದ ವಿಮೋಚನೆ ಪಡೆದ ನನ್ನ ಪ್ರಜ್ಞೆಯಲ್ಲಿ ನನ್ನ ಸಿದ್ಧಿಯತ್ತ ನನ್ನ ಹೊರಳುವಿಕೆಯ ಪ್ರಾರಂಭವಾಗಿತ್ತು. ಸಂಪೂರ್ಣ ಸಿದ್ಧಿಯತ್ತ ಮೊದಲ ಹೆಜ್ಜೆಯಾಗಿತ್ತು, ಏಕೈಕವಾದುದಲ್ಲ, ಸಾಧ್ಯವಾಗಬಹುದಾದುರ ನಿಜವಾದ ಸಿದ್ಧಿಯಾಗಿರಲಿಲ್ಲ, ಇಲ್ಲವೆ ಪರಾಕಾಷ್ಠೆ ತಲುಪುವಷ್ಟು ಕೊನೆಯದಾಗಿರಲಿಲ್ಲ.

**– ಶ್ರೀ ಅರವಿಂದರು**

*

# ಸ್ಮರಣೆಗಳು ಮತ್ತು ಉಪಾಖ್ಯಾನಗಳು

## ಪ್ರಾರ್ಥನೆಯ ಶಕ್ತಿ

ಪ್ರಾರ್ಥನೆಯ ಸಲುವಾಗಿ ನಿರ್ದಿಷ್ಟಪಡಿಸಲ್ಪಟ್ಟ ಮತ್ತು ಲಿಖಿತವಾಗಿ ರೂಪಿಲಸ್ಪಟ್ಟ ಯಾವುದೇ ನಿಯಮಾವಳಿಗಳು ಇಲ್ಲ. ಆ ರೀತಿಯಲ್ಲಿ ರೂಪಿಸಲೂ ಸಾಧ್ಯವಾಗುವದಿಲ್ಲ. ಕೆಲವೊಂದು ಪ್ರಾರ್ಥನೆಗೆ ಫಲಿತಾಂಶವು ದೊರೆಯದೇ ಇರಬಹುದು, ಆದರೆ ಎಲ್ಲ ಪ್ರಾರ್ಥನೆಯೂ ವಿಫಲವಾಗುವದಿಲ್ಲ. ಇದನ್ನು ಪುರಾವಿಸಲು ಯಾವುದಾದರೂ ಉದಾಹರಣೆ ಇದೆಯೇ ಎಂದು ಕೇಳಿದರೆ, ನನ್ನ (mesho) ಆಗಿರುವ, ಸಂಜೀವಿನೀ ಪತ್ರಿಕೆಯ ಸಂಪಾದಕನೂ ಆಗಿರುವ ಶ್ರೀ ಕೆ. ಕೆ. ಮಿಶ್ರಾನ ಉದಾಹರಣೆ ಇದೆ. ಈ ವ್ಯಕ್ತಿ ಯಾವುದೇ ರೀತಿಯಲ್ಲಿ ರಮ್ಯತೆಯನ್ನೇ ಆರಾಧಿಸುವ ಮೂಲಕ, ಇಲ್ಲವೇ ಗೂಢ ವಿದ್ಯೆಯ ಮೂಲಕವಾಗಲೀ, ಅಥವಾ ಭೌತಾತೀತ ಮತ್ತು ಕಲ್ಪನಾ ಲೋಕದ ಜೀವಿಯಂತೂ ಅಲ್ಲವೇ ಅಲ್ಲ. ಇವನ ಮಗಳಿಗೆ ಅನಾರೋಗ್ಯದ ನಿಮಿತ್ತವಾಗಿ, ಹಾಗೂ ವೈದ್ಯರ ಸಲಹೆಯ ಪ್ರಕಾರ ಉಪಯೋಗಿಸಿದ ಔಷಧಿಗಳ ವಿಷಯದಲ್ಲಿ ಮತ್ತು ರೋಗದ ನಿಧಾನ ಪದ್ಧತಿಯ ದೆಸೆಯಿಂದ ಹತಾಶನಾಗಿ, ವೈದ್ಯರ ಬಗೆಗೆ ಸಂಪೂರ್ಣ ನಿರಾಸಕ್ತಿಯ ಭಾವದಲ್ಲಿ ಮುಳುಗಿದ್ದನು. ಈ ಎಲ್ಲ ಪದ್ಧತಿಗಳು ಹಾಗೂ ಔಷಧಿಗಳು ಏನೂ ಉಪಯೋಗವಿಲ್ಲ ಎನ್ನುವ ಹಂತ ತಲುಪಿದ್ದನು.

ಆಮೇಲೆ, ಈಗ ದೇವರಲ್ಲಿ ಪ್ರಾರ್ಥಿಸುವದನ್ನು ಬಿಟ್ಟು ಬೇರೇನೂ ಉಳಿದಿಲ್ಲವೆಂದುಕೊಂಡ ಅವನು, ಅದೇ ರೀತಿ ನಿರ್ಧರಿಸಿ ಎಲ್ಲವನ್ನೂ ದೇವರ ಸುಪರ್ದಿಗೆ ಒಪ್ಪಿಸಿದನು. ಆ ಕ್ಷಣದಿಂದಲೇ ಅವನ ಮಗಳು ಚೇತರಿಸಿಕೊಳ್ಳಲು ಸಾಧ್ಯವಾಯಿತು. ವಿಷಮಶೀತಜ್ವರದಿಂದ ಅವಳು ತುಂಬ ಬಳಲುತ್ತಿದ್ದಳು. ಸಾವಿನ ಸಮೀಪಕ್ಕೂ ಸಹಿತ ಹೋಗಿ ಬಂದಾಗಿತ್ತು.

ಈ ತೆರನಾಗಿ ಆರೋಗ್ಯ ಪಡೆದುಕೊಂಡ ಘಟನೆಗಳ ಬಗೆಗೆ ನನಗೂ ಗೊತ್ತಿದೆ. ಸರಿ ಹಾಗಾದರೆ, ಎಲ್ಲರ ಪ್ರಾರ್ಥನೆಗಳೂ ಏಕೆ ಫಲಕಾರಿಯಾಗುತ್ತಿಲ್ಲ? ಎಂದು ನೀವು ಪ್ರಶ್ನೆ ಕೇಳಬಹುದು. ಎಲ್ಲ ಪ್ರಾರ್ಥನೆಗಳೂ ಫಲಿಸಲೇಬೇಕೆಂಬ ನಿಯಮವೇನಾದರೂ ಇದೆಯೇ? ಏಕೆಂದರೆ ಪ್ರಾರ್ಥನೆ ಎನ್ನುವದು ಒಂದು

ಯಾಂತ್ರಿಕ ಕ್ರಿಯೆಯಲ್ಲ. ಮೇಲಾಗಿ ಒಳದಾರಿಯಲ್ಲಿ ನುಗ್ಗಿ ಇಲ್ಲಿ ಫಲಿತಾಂಶವನ್ನೂ ಪಡೆಯುವದು ಸಾಧ್ಯವೇ ಇಲ್ಲ. ಬಹುತೇಕವಾಗಿ, ಮಾನವ ಸಮುದಾಯವು ಇಂತಹ ಸಂಕಷ್ಟಮಯ ಸ್ಥಿತಿಯಲ್ಲಿ ಮಾತ್ರವೇ, ವೈರುದ್ಧಮಯ ಸಮಯದಲ್ಲಿಯೇ ಫಲಿತಾಂಶವನ್ನು ನಿರೀಕ್ಷಿಸಿಕೊಂಡೇ ಪ್ರಾರ್ಥನೆಗೆ ತೊಡಗುತ್ತಾರೆ. ಆದರೆ ದೇವರು ಸದಾ ವಿರೋಧಾಭಾಸದ ಹಂತದಲ್ಲಿಯೇ ಇರುವದರಿಂದಾಗಿ, ಒಂದು ವೇಳೆ ಪ್ರಾರ್ಥನೆಗೆ ಫಲಿತಾಂಶವನ್ನು ಕೊಡಲು ಯತ್ನಿಸಿದರೂ ಸಹಿತ, ಅದು ಫಲಿಸದ ಹಾಗೆ ಇರುವ ಶೂನ್ಯ ಸ್ಥಿತಿಯಲ್ಲಿ ಇರುತ್ತಾನೆ.

**ಕಾಶ್ಮೀರದ ಸೌಂದರ್ಯ**

ಕಾಶ್ಮೀರದ ಬಗೆಗೆ ನಿನಗಿರುವ ಅಭಿಪ್ರಾಯಕ್ಕೆ ನನ್ನ ಸಹಮತವಿದೆ. ಅಲ್ಲಿನ ಪರ್ವತ ಶ್ರೇಣಿಗಳ ಗಾಂಭೀರ್ಯ ಮತ್ತು ನದಿಗಳ ಕಲರವ ಹಾಗೂ ಪರಮೋಚ್ಚವಾದ ಸೌಂದರ್ಯದ ಮಧ್ಯದಲ್ಲಿ, ಸದಾ ನಿಧಾನವಾಗಿ ಚಲಿಸುತ್ತಲೇ ಇರುವ ತೇಲು–ದೋಣಿಗಳ ಮನೆಯಲ್ಲಿ– ಇದೊಂದು ಭೂಮಿಯ ಮೇಲಿನ ಸ್ವರ್ಗದಂತಿರುವ ಸ್ಥಳ ತೇಲುತ್ತಲೇ ಮತ್ತೆ ಅಲ್ಲಿ ಝೀಲಮ್ ನದಿಯ ದಂಡೆಯ ಮೇಲೆ ವಿಹರಿಸುತ್ತ ಕಾವ್ಯವನ್ನು ರಚಿಸುತ್ತ, ಈ ಝೀಲಮ್ ನದಿಯು ಕಾಶ್ಮೀರದ ಕೊಳ್ಳ ಪ್ರದೇಶದಿಂದ ಬಯಲು ಪ್ರದೇಶದೆಡೆಗೆ ಪ್ರವಹಿಸುತ್ತಿರುವದನ್ನು ಗಮನಿಸುತ್ತಾ ಇರುವದು ಒಂದು ಅನುಭೂತಿದಾಯಕವಾದ ಸಂಗತಿಯಾಗಿದೆ.

ದುರ್ದೈವದ ಸಂಗತಿ ಎಂದರೆ, ಅಲ್ಲಿ ಅಭಿವೃದ್ಧಿಯ ಉಚ್ಛ್ರಾಯತೆಗಾಗಿ ಆ ಸ್ವರ್ಗವನ್ನು ತುಂಡರಿಸುತ್ತಿದ್ದಾರೆ. ಅವರು ಕಂಡ ಆ ಸ್ವರ್ಗಸದೃಶ ಯೋಚನೆಗಳೆಲ್ಲವೂ ಆಡಳಿತಾತ್ಮಕ ದಾಖಲೆಗಳಿಗೆ ಮತ್ತು ಇತರರು ತಮ್ಮ ಭಾಷಣಗಳನ್ನು ಸಿದ್ಧ ಪಡಿಸಿಕೊಳ್ಳಲು ಆಕರ ಗ್ರಂಥಗಳಾಗಿವೆ. ಏನೇ ಆದರೂ ಇದೆಲ್ಲದರ ಶ್ರೇಯಸ್ಸೂ ಅವರದೇ (ಶ್ರೀ ಅರವಿಂದರದೇ) ಆಗಿದೆ. ಆದರೆ ಬಡೋದಾ ವಾಸದ ನಂತರದಲ್ಲಿ (1893, 1906) ಅವರ ಮೂಲ ಆಶಯದಂತೆಯೇ ಅದು(ಕಾಶ್ಮೀರವು) ಪ್ರತಿಯೊಬ್ಬರಿಗೂ ಈಡನ್ ಇದ್ದಂತೆ ಇದೆ.

**(CWSA, 35/14–15)** **– ಶ್ರೀ ಅರವಿಂದರು**

*

## ಯೋಗ ಚಿಕಿತ್ಸೆ

ಯೋಗದ ಮೂಲಕ ಚಿಕಿತ್ಸೆ ಕೊಡಬಹುದು ಎನ್ನುವದನ್ನು ಓರ್ವ ನಂಗಾ ಸಾಧು ಅಥವಾ ನಾಗಾ ಸನ್ಯಾಸಿಯಿಂದ, ನಾನು ಪ್ರಪ್ರಥಮವಾಗಿ ಅರಿತುಕೊಂಡಿದ್ದೇನೆ. ಅಮರಕಂಟಕ ಪರ್ವತಶ್ರೇಣಿಗಳಲ್ಲಿ ತಿರುಗಾಟ ನಡೆಸುತ್ತಿದ್ದಾಗ ಬರೀನ್ ಎನ್ನುವವರಿಗೆ ಜ್ವರದಿಂದ ಬಳಲುವಂತಾಯಿತು. ಆಗ ಆ ಸನ್ಯಾಸಿಯು ಒಂದು ಪಾತ್ರೆಯಲ್ಲಿ ನೀರು ತೆಗೆದುಕೊಂಡು, ತನ್ನ ಕೈಲಿದ್ದ ಚಾಕುವಿನಂತಹ ಸಾಧನದಿಂದ, ಆ ಪಾತ್ರೆಯಲ್ಲಿದ್ದ ನೀರಿನ ಮೇಲೆ ಒಂದು ಉದ್ದ ಗೆರೆ ಹಾಗೂ ಒಂದು ಅಡ್ಡ ಗೆರೆಯನ್ನು ಕತ್ತರಿಸುವ ಚಿಹ್ನೆಯಲ್ಲಿ ಬರೆದು, ಅದನ್ನು ನಾಲ್ಕು ಭಾಗಗಳನ್ನಾಗಿಸಿ, ಆ ನೀರನ್ನು ಕುಡಿಯುವಂತೆ ಬರೀನ್‌ಗೆ ಹೇಳುತ್ತ, ಇನ್ನು ಮುಂದೆ ಇವನಿಗೆ ಜ್ವರ ಇರುವದಿಲ್ಲ ಎಂದು ಹೇಳುತ್ತಾನೆ. ಅದೇ ರೀತಿಯಲ್ಲಿಯೇ ಮರುದಿನವೇ ಅವನು ಜ್ವರದಿಂದ ಮುಕ್ತಿ ಪಡೆದಿದ್ದನು.

## ಬಡೋದೆಯ ವಿದ್ಯಾರ್ಥಿಗಳು

ಬಡೋದೆಯ ವಿದ್ಯಾರ್ಥಿಗಳು, ನನ್ನ ಪ್ರವಚನದ ಹೊತ್ತಿನಲ್ಲಿ ಮಾಡಿಕೊಳ್ಳುತ್ತದ್ದ ಟಿಪ್ಪಣಿಗಳ ಜೊತೆಜೊತೆಗೇ, ಮುಂಬುಯ ಪ್ರೊಫೆಸರ್ ಸಮುದಾಯವು ನೀಡುತ್ತಿದ್ದ ಟಿಪ್ಪಣಿಗಳನ್ನೂ ಸಂಗ್ರಹಿಸುತ್ತಿದ್ದರು. ಅದರಲ್ಲೂ, ಪರೀಕ್ಷಾ ವಿಭಾಗದಲ್ಲಿ ಇರುವ ಪ್ರೊಫೆಸರ್ ಕೊಟ್ಟ ಟಿಪ್ಪಣಿಗಳನ್ನು ಹೆಚ್ಚು ಆಸಕ್ತಿಯಿಂದ ಅಭ್ಯಾಸ ಮಾಡುತ್ತಿದ್ದರು.

ಒಂದು ಸಲ ನಾನು ಸೌಥೆಯ ನೆಲ್ಸನ್ನನ ಜೀವನ ಕೃತಿಯ ಕುರಿತು ಪಾಠ ಮಾಡುತ್ತಿದ್ದಾಗ, ಅವರು ಈ ಹಿಂದೆ ಸಂಗ್ರಹಿಸಿದ್ದ ಟಿಪ್ಪಣಿಯಂತೆ ನನ್ನ ಉಪನ್ಯಾಸ ಇರುತ್ತಿರಲಿಲ್ಲ. ಇದನ್ನು ಗಮನಿಸಿದ ವಿದ್ಯಾರ್ಥಿಗಳು, ತಮ್ಮ ಬಳಿ ಇರುವ ಟಿಪ್ಪಣಿಗಳ ಪ್ರಕಾರವಾಗಿ ನನ್ನ ಅಭಿಪ್ರಾಯ ಇಲ್ಲ ಎನ್ನುವದನ್ನು ಹೇಳುತ್ತಿದ್ದರು.ಅದಕ್ಕೆ ನಾನು ಕೊಟ್ಟ ಉತ್ತರವೆಂದರೆ, ನಾನು ಯಾವುದೇ ಟಿಪ್ಪಣಿಯನ್ನು ಓದಿಲ್ಲ.ಬಹಳಷ್ಟು ಸಮಯದಲ್ಲಿ ಇವು ನಿರರ್ಥಕವೆಂದೇ ಕಂಡಿವೆ. ನಾನಂತೂ ಅಂತಹ ಠರಾವು–ಟಿಪ್ಪಣಿಗಳನ್ನು ಎಂದೂ ನೋಡುವದಿಲ್ಲ. ನಾನು ಓದುವ ಮುನ್ನ ನನ್ನ ಮನಸ್ಸನ್ನು ಸಂಪೂರ್ಣ ಮುಕ್ತಗೊಳಿಸಿಕೊಂಡಿರುತ್ತೇನೆ. ಅದು ತನಗೆ ಹೇಗೆ ಬೇಕೋ ಹಾಗೆ ಯೋಚಿಸಲು ಸಾಧ್ಯವಾಗುತ್ತದೆ. ಈ

ಕಾರಣಗಳಿಂದಾಗಿಯೇ ನಾನು ಎಂದಿಗೂ ಪ್ರತಿಭಾವಂತನಾಗಲಿಲ್ಲ. ನನ್ನ ಹದಿನೈದನೇ ವರ್ಷದವರೆಗೂ ನನ್ನನ್ನು ಪ್ರತಿಭಾಶಾಲಿ ಎಂದೇ ಪರಿಗಣಿಸಲಾಗುತ್ತಿತ್ತು, ಆದರೆ ತದನಂತರದಲ್ಲಿ ಆ ಗೌರವವನ್ನು ನಾನು ಕಳೆದುಕೊಂಡೆ.

*ವಿದ್ಯಾರ್ಥಿ: ಏಕೆ ಹೀಗಾಯಿತು?*

ಶ್ರೀ ಅರವಿಂದರು; ನಾನು ಕಾವ್ಯಗಳನ್ನುಮತ್ತು ಕಾದಂಬರಿಗಳನ್ನು ಓದುತ್ತಿದ್ದುದೇ ಅದಕ್ಕೆ ಮೂಲ ಕಾರಣ. ಆದರೆ ಪರೀಕ್ಷೆಯ ಸಮಯಕ್ಕೆ, ಪರೀಕ್ಷೆಯ ಸಲುವಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದೆ. ನಾನು ಬರೆಯುತ್ತಿದ್ದ ಗ್ರೀಕ್ ಮತ್ತು ಲ್ಯಾಟಿನ್ ಕಾವ್ಯದ ಸಾಲುಗಳನ್ನು ಕಂಡ ನನ್ನ ಶಿಕ್ಷಕರು, ಇದೆಲ್ಲ ಪ್ರಲಾಪವೆಂದು ಪರಿಗಣಿಸಿ, ನನ್ನ ಸೋಮಾರಿತನದಿಂದಾಗಿ ನನಗಿದ್ದ ಪ್ರತಿಭೆಯನ್ನು ಉಪಯೋಗಿಸಿಕೊಳ್ಳುತ್ತಿಲ್ಲ ಎಂದು ಹೇಳುತ್ತಿದ್ದರು.

ಕೆಂಬ್ರಿಜ್ಜಿನ ಕಿಂಗ್ಸ ಕಾಲೇಜಿನಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ಅಲ್ಲಿಗೆ ಹೋದಾಗ, ಆಸ್ಕರ್ ಬ್ರೌನಿಂಗ್ ಹೇಳಿದ್ದೇನೆಂದರೆ, ಈವರೆಗೂ ಇಂತಹ ಗಮನಾರ್ಹವಾದ ಲೇಖನಗಳನ್ನು ನಾನು ನೋಡಿಲ್ಲ. ಹೀಗಾಗಿ ನನ್ನ ಸೋಮಾರಿತನದ ಮಧ್ಯದಲ್ಲಿಯೇ ನಾನು ಎಲ್ಲಿಯೂ ಕರಗಿ ಹೋಗಲಿಲ್ಲ.

**(ಸಾಯಂಕಾಲದ ಮಾತುಕತೆಗಳು: 132, 245) – ಶ್ರೀ ಅರವಿಂದರು**

*

**ಬ್ರಹ್ಮಚಾರಿ**

ಶ್ರೀ ಅರವಿಂದರು ಅತ್ಯಂತ ಸರಳ ಜೀವನ ಶೈಲಿಯನ್ನು ಅಳವಡಿಸಿಕೊಂಡಿದ್ದರು. ಹಾಗೆಂದು ತಮ್ಮ ಅಭಿರುಚಿಗಳ ಬಗೆಗೆ ಉಪೇಕ್ಷಾ ಭಾವವನ್ನು ಹೊಂದಿದ್ದರೆಂತಲ್ಲ. ತಾವು ಧರಿಸುತ್ತಿದ್ದ ವಸ್ತ್ರಗಳ ಬಗೆಗಾಗಲಿ ಮತ್ತು ಆಹಾರದ ವಿಷಯದಲ್ಲಾಗಲೀ ಎಂದಿಗೂ ಮಮಕಾರ ಭಾವ ಹೊಂದಿರಲಿಲ್ಲ. ಏಕೆಂದರೆ ಅವುಗಳಿಗೆ ಅವರೆಂದೂ ತಮ್ಮನ್ನು ಒಪ್ಪಿಕೊಳ್ಳಲೇ ಇಲ್ಲ. ತಮ್ಮ ಬಟ್ಟೆಗಳಿಗಾಗಿಯೂ ಅವರೆಂದೂ ಮಾರುಕಟ್ಟೆಗೆ ಹೋಗಲಿಲ್ಲ. ಮನೆಯಲ್ಲಿ ಇದ್ದಾಗಲೂ ಸತತ ಒಂದು ಬಿಳಿಯ ಸಾದಾ ಧೋತಿಯನ್ನು ಹಾಗೂ ಒಂದು

ಬಿಳಿಯ ಬಟ್ಟೆಯನ್ನು ಹೊದೆದುಕೊಳ್ಳುತ್ತಿದ್ದರು. ನಾವೆಲ್ಲರೂ ಸಾಮಾನ್ಯವಾಗಿ ಮಲಗಲು ಬಳಸುವ ಮೆತ್ತನೆಯ ಗಾದಿಯನ್ನು ಅವರೆಂದಿಗೂ ಮಲಗಲು ಬಳಸಲೇ ಇಲ್ಲ. ಅದಕ್ಕಾಗಿ ತೆಂಗಿನ ನಾರಿನಿಂದ ಸಿದ್ಧ ಪಡಿಸಿದ ಹಾಸಿಗೆಯೊಂದನ್ನು ಮತ್ತು ಅದರ ಮೇಲೆ ಮಲಬಾರ್ ಹುಲ್ಲಿನಿಂದ ಮಾಡಿದ ಚಾಪೆಯನ್ನು ಮೇಲು ಹಾಸಿಗೆಯನ್ನಾಗಿ ಬಳಸುತ್ತಿದ್ದರು.

ಹೀಗೇಕೆ ಈ ರೀತಿ ಕಠಿಣವಾದ ಹಾಸಿಗೆಯನ್ನು ಬಳಸುತ್ತೀರಿ? ಎಂದು ಒಂದು ಸಾರೆ ನಾನು ಪ್ರಶ್ನಿಸಿದಾಗ, ಅವರು ತಮ್ಮದೇ ಅಸ್ಮಿತೆಯ ಮುಗುಳ್ನಗೆ–ಯೊಂದಿಗೆ ಓ, ನಿನಗೆ ಗೊತ್ತಿಲ್ಲವೇ? ನಾನೋರ್ವ ಬ್ರಹ್ಮಚಾರಿ ಎನ್ನುವದು ನಿನಗೆ ಗೊತ್ತಿಲ್ಲವೇ ಹುಡುಗಾ? ನಮ್ಮ ಶಾಸ್ತ್ರಗಳು ವಿಧಿಸಿದ ಹಾಗೆ ಬ್ರಹ್ಮಚಾರಿ–ಯಾದವನು ಎಂದಿಗೂ ಮೆತ್ತನೆಯ ಹಾಸಿಗೆಯನ್ನು ಬಳಸುವಂತಿಲ್ಲ ಎಂದು ಹೇಳಿದ್ದರು.

**ಹಣಕಾಸಿನ ವಿಷಯದಲ್ಲಿ ನಿರಾಸಕ್ತಿ**

ನಾನು ಗಮನಿಸಿದ ಮತ್ತೊಂದು ಮುಖ್ಯ ಸಂಗತಿ ಎಂದರೆ, ಹಣಕಾಸಿನ ವಿಷಯದಲ್ಲಿ ಅವರಿಗಿದ್ದ ನಿರಾಸಕ್ತಿ. ಮೂರು ತಿಂಗಳಿಗಾಗುವಷ್ಟು ಹಣ ಅವರ ಬಳಿಯಿದ್ದ ಚೀಲದಲ್ಲಿ ಇರಬೇಕಾದದ್ದನ್ನು ತಮ್ಮ ಎದುರಿಗಿದ್ದ ಮೇಜಿನ ಮೇಲಿನ ತಟ್ಟೆಯಲ್ಲಿಯೇ ಇಡುತ್ತಿದ್ದರು. ಅವರೆಂದಿಗೂ ಹಣವನ್ನು ಸುರಕ್ಷಿತವಾಗಿ, ಕೀಲಿ ಹಾಕಿ ಜೋಪಾನವಾಗಿ ಇಡಲೇ ಇಲ್ಲ. ತಾವು ಮಾಡುತ್ತಿದ್ದ ಖರ್ಚಿನ ವಿಷಯದಲ್ಲೂ ಅಷ್ಟೇ ಯಾವುದೇ ದಾಖಲಾತಿಗಳನ್ನು ಬರೆಯುತ್ತಿರಲಿಲ್ಲ.

ಏಕೆ ಈ ರೀತಿಯಲ್ಲಿ ಹಣಕಾಸಿನ ವಿಷಯದಲ್ಲಿ ಹೀಗಿದ್ದೀರಿ ಎಂದು ಒಂದು ಬಾರಿ ನಾನು ಸಹಜವಾಗಿ ಕೇಳಿದ್ದೆ. ಅದನ್ನು ಕೇಳಿ ಅವರು ಸುಮ್ಮನೆ ನಕ್ಕು, ಇದೂ ಒಳ್ಳೆಯದೇ ಅಲ್ಲವೇ? ನಾವು ಬದುಕುತ್ತಿರುವದು ಪ್ರಾಮಾಣಿಕರ ಮಧ್ಯದಲ್ಲಿಯೇ ಎನ್ನುವದಕ್ಕೆ ಇದು ಪುರಾವೆಯಲ್ಲವೇ? ಎಂದು ಕೇಳಿದ್ದರು.

ಆದರೆ ನೀವೆಂದೂ ಹಣಕಾಸಿನ ಲೆಕ್ಕ–ಪತ್ರಗಳನ್ನು ಇಟ್ಟಿಲ್ಲ, ಇದು ನಿಮ್ಮ ಸುತ್ತಲೂ ಇರುವವರ ಪ್ರಾಮಾಣಿಕತೆಯನ್ನೂ ಪರೀಕ್ಷಿಸುತ್ತಿಲ್ಲವೇನು? ಎಂದು ಕೇಳಿದ್ದೆ. ಅದಕ್ಕೆ ಅವರು ತಮ್ಮದೇ ಆದ ಸಾತ್ವಿಕ ಭಾವದಲ್ಲಿ ಒಮ್ಮೆ ನನ್ನನ್ನು ದಿಟ್ಟಿಸಿ

ನೋಡಿ, ನನ್ನ ಲೆಕ್ಕ–ಪತ್ರಗಳನ್ನು ದೇವರೇ ನನಗಾಗಿ ನಿರ್ವಹಿಸುತ್ತಿದ್ದಾನೆ. ನಾನು ಏನನ್ನು ಆಶಿಸುತ್ತೇನೆಯೋ ಅದನ್ನು ದೇವರು ನನಗೆ ಒದಗಿಸಿ ಕೊಡುತ್ತಿದ್ದಾನೆ. ಹೀಗಾಗಿ ನಾನು ಎಲ್ಲವನ್ನೂ ಅವನ ಮೇಲೆಯೇ ಬಿಟ್ಟಿದ್ದೇನೆ. ಯಾವುದೇ ಸಂದರ್ಭದಲ್ಲಿಯೂ ನಾನು ಬೇಡುವಂತೆ ಅವನು ಮಾಡಿಯೇ ಇಲ್ಲ. ಹೀಗಾಗಿ ಅದರ ಬಗೆಗೆ ಮತ್ತೆ ನಾನೇಕೆ ಯೋಚಿಸಲಿ? ಎಂದಿದ್ದರು.

**ಅವರ ಬೋಧನಾ ಪದ್ಧತಿ**

ಇಂಟರ್–ಮೀಡಿಯೇಟ್ ಹಂತದ ಶಿಕ್ಷಣದ ಸಂದರ್ಭದಲ್ಲಿ ನಾನು ಅವರ ಶಿಷ್ಯನಾಗುವ ಸುಯೋಗ ದೊರಕಿತ್ತು. ಅವರು ಕಲಿಸುತ್ತಿದ್ದ ರೀತಿ ಅಪರೂಪದ್ದಾಗಿತ್ತು. ಅಮೋಘವಾಗಿತ್ತು. ಪ್ರಾರಂಭದಲ್ಲಿಯೇ ಅವರು ತಾವು ಕಲಿಸುತ್ತಿದ್ದ ವಿಷಯ ಕುರಿತು ಹಲವಾರು ಪರಿಚಯಾತ್ಮಕ ವಿಷಯಗಳನ್ನು ಕೊಡುತ್ತಿದ್ದರು.ಜೊತೆಗೆ ಆ ಪಠ್ಯದ ಬಗೆಗೆ ಆಸಕ್ತಿ ಹುಟ್ಟುವಂತೆ ಕಲಿಸುತ್ತಿದ್ದರು. ಇಷ್ಟೆಲ್ಲಾ ಆದ ಮೇಲೆಯೇ ಮೂಲ ಪಠ್ಯವನ್ನು ಕಲಿಸಲು ಪ್ರಾರಂಭಿಸುತ್ತಿದ್ದರು. ಮಧ್ಯ–ಮಧ್ಯದಲ್ಲಿ ಬರುವ ಕಠಿಣ ಶಬ್ದಗಳನ್ನು ಅರ್ಥೈಸಿಕೊಳ್ಳುವ ವಿಧಾನವನ್ನೂ ಸಹಿತ ವಿವರಿಸುತ್ತಿದ್ದರು. ಆ ಪಠ್ಯವನ್ನು ಸಮಾಪನಗೊಳಿಸುವ ಹಂತದಲ್ಲಿ ಅದಕ್ಕೆ ಸಂಬಂಧಿಸಿದ ಇತರೇ ಸಾಮಾನ್ಯ ಸಂಗತಿಗಳನ್ನೂ ಸಹಿತ ತಮ್ಮ ಉಪನ್ಯಾಸದ ಮೂಲಕ ತಿಳಿಸುತ್ತಿದ್ದರು. ಇದರಿಂದಾಗಿ ನಮಗೆ ಅಭ್ಯಸಿಸಲು ಅನುಕೂಲವಾಗಿತ್ತು.

ಕಾಲೇಜಿನಲ್ಲಿ ಕೊಡುತ್ತಿದ್ದ ಉಪನ್ಯಾಸಗಳಿಗಿಂತ, ಅವರು ಸಭೆಗಳಲ್ಲಿ ನೀಡುತ್ತಿದ್ದ ಉಪನ್ಯಾಸಗಳನ್ನು ಆಲಿಸುವದೇ ಒಂದು ಅಪೂರ್ವ ಘಟನೆಯಾಗಿತ್ತು. ಕಾಲೇಜಿನಲ್ಲಿ ನಡೆಯುತ್ತಿದ್ದ ಚರ್ಚಾಕೂಟಗಳಲ್ಲಿ ಆಗಾಗ ಅವರು ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತಿದ್ದರು. ಕಾಲೇಜಿನ ಆ ದೊಡ್ಡ ಸಭಾಂಗಣವು ಅವರ ಅಧ್ಯಕ್ಷೀಯ ಭಾಷಣವನ್ನು ಕೇಳಲು ಕಿಕ್ಕಿರಿದು ತುಂಬಿರುತ್ತಿತ್ತು. ಅವರು ಅತ್ಯಾಕರ್ಷಕಾಗಿ ಮಾತನಾಡಬಲ್ಲ ವಾಕ್ಪಟುವಂತೂ ಆಗಿರಲಿಲ್ಲ; ಆದರೆ ಗಾಂಭೀರ್ಯದಿಂದ ತುಂಬಿದ ವಿಷಯದ ಪ್ರತಿಪಾದಕರಾಗಿದ್ದರು. ಹೀಗಾಗಿ ಅವರ ಉಪನ್ಯಾಸವನ್ನು ಸಂಪೂರ್ಣ ಲಕ್ಷ್ಯ ಕೊಟ್ಟು ಕೇಳಬೇಕಾಗಿತ್ತು. ಭಾಷಣದ ಸಮಯದಲ್ಲಿ ನಿಂತ ಭಂಗಿಯಲ್ಲಾಗಲೀ ಎಂದಿಗೂ ಸ್ಥಿರತೆಯನ್ನು ಕಾಯ್ದುಕೊಂಡಿರುತ್ತಿದ್ದರು. ಇನ್ನು ಅವರ ಮಾತಿನ

ಶೈಲಿಯಂತೂ ಭಾಷೆಯೊಂದು ತುಂಬು ಗಾಂಭೀರ್ಯದಿಂದ ಅವರ ತುಟಿಗಳ ಮೂಲಕವೇ ಪ್ರವಹಿಸುತ್ತಿರುವಂತೆ ತೋರುತ್ತಿತ್ತು. ಜೊತೆಗೆ ಮಾತಿನ ಮಾಧುರ್ಯತೆಯೂ ಸತತ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸುತ್ತಿತ್ತು. ಅವರ ವಾಕ್ಚರಿಯನ್ನು ಕೇಳಿ ಐವತ್ತಕ್ಕೂ ಹೆಚ್ಚು ವರ್ಷಗಳೇ ಗತಿಸಿದ್ದರೂ ಸತತ, ಅವರ ಆ ಆಕರ್ಷಕ ವ್ಯಕ್ತಿತ್ವ ಮತ್ತು ಕಂಚಿನ ಕಂಠದ ವಾಣಿಯನ್ನು ನಾನು ಈಗಲೂ ಸದಾ ಸ್ಮರಿಸಿಕೊಳ್ಳುತ್ತಲೇ ಇದ್ದೇನೆ.

**– ಆರ್.ಎನ್. ಪಾಠಕ (ರಿಷಭಾನಂದ)**

*

**ಅನಿಕೇತ: [ವಿಶ್ವಾತ್ಮನಾಗುವ ರೀತಿ]**

ಬಂಗಾಲದ ದಿನೇಂದ್ರಕುಮಾರ ರಾಯ್ ರವರು ಬರೆದ ಶ್ರೀ ಅರವಿಂದ ಪ್ರಸಂಗ ಪುಸ್ತಕದಲ್ಲಿ, ಶ್ರೀ ಅರವಿಂದರು ಅರಮನೆಯಲ್ಲಿಯೇ ಇರಲಿ ಅಥವಾ ಕುಟೀರದಲ್ಲಿಯೇ ಇರಲಿ ಯಾವುದೇ ವ್ಯತ್ಯಾಸವನ್ನು ಕಾಣುತ್ತಿರಲಿಲ್ಲ. ಯಾವ ಭಟ್ಟಿಯಲ್ಲಿಯೂ ಸುಟ್ಟು ತಯಾರಾಗಿ ಬಂದ ಹಂಚುಗಳು ಅವರ ಮನೆಗೆ ಇರಲೇ ಇಲ್ಲ; ಅವರ ಮನೆಯ ಮಾಳಿಗೆಯೆಂದೂ ಸೋರಲೇ ಇಲ್ಲ. ಏಕೆಂದರೆ ಅವರು ಅಳವಡಿಸಿಕೊಂಡ ಜೀವನ ಶೈಲಿಯು ಭಗವದ್ಗೀತೆಯಲ್ಲಿ ಹೇಳಿರುವಂತೆ ಅನಿಕೇತ ಸ್ವರೂಪದ್ದಾಗಿತ್ತು. ಅಂದರೆ ಇಡೀ ಅವಕಾಶವೇ ಅವರು ವಾಸಿಸುವ ನೆಲೆಯಾಗಿದ್ದು, ಅಲ್ಲಿ ವಾಸಕ್ಕೆ ಅವರದೇ ಆದ ಪ್ರತ್ಯೇಕ ವಾಸಸ್ಥಾನ ಜಗತ್ತಿನಲ್ಲಿ ಇರುವದಿಲ್ಲ.

*

**ಮಾನವನ ಸ್ವಾರ್ಥ ಮತ್ತು ಆತಂಕದಿಂದ ದೂರ**

ಕೇವಲ ಕೆಲವೇ ಕೆಲವು ದಿನಗಳ ಕಾಲ ಅವರೊಡನೆ ಇದ್ದ ಅನುಭವದಲ್ಲಿ ನಾನು ಕಂಡುಕೊಂಡದ್ದೇನೆಂದರೆ, ಅವರಲ್ಲಿ ಯಾವುದೇ ತೆರನಾದ ಸಂಕುಚಿತತೆಯಾಗಲಿ ಅಥವಾ ಪೃಥ್ವಿಯ ಅಶುದ್ಧತೆಯಾಗಲಿ ಇರಲೇ ಇಲ್ಲ. ಅವರ ನಗೆಯೂ ಸತತ ಮುಗ್ಧಮಗುವಿನ ಮಂದಸ್ಮಿತದಂತೆ ಇದ್ದು, ಅಷ್ಟೇ ಮೃದುತ್ವವನ್ನೂ ಮತ್ತು ಸಂವಹನಾ ಸಲಿಲತೆಯನ್ನು ಹೊಂದಿತ್ತು. ತುಟಿಯಂಚಿನಲ್ಲಿ ಆಗಾಗ ಕ್ಷಣಕಾಲ ಸಂಚಲನ ಕಂಡುಬಂದರೂ ಸತತ, ಅವರ

ಹೃದಯದಲ್ಲಿ ಕಿಂಚಿತ್ತೂ ಈ ಸಾಮಾನ್ಯ ಮನುಷ್ಯರಿಗೆ ಇರುವ ಲೌಕಿಕದ ಬಗೆಗೆ ಮತ್ತು ಸ್ವಾರ್ಥ ಭಾವನೆಯ ಲವಲೇಶವೂ ಇರಲಿಲ್ಲ. ಅವರ ಹೃದಯ ಸದಾ ಸ್ಪಂದಿಸುತ್ತಿದ್ದುದು, ಸದಾ ಧ್ಯಾನಿಸುತ್ತಿದ್ದದ್ದು ದೈವತ್ವವನ್ನು ಕುರಿತ ಸಂಗತಿಗಳನ್ನು ಮಾತ್ರ ಆಗಿತ್ತು. ಮಾನವನ ಬದುಕು ಸದಾ ಎದುರಿಸುತ್ತಿರುವ ತೊಂದರೆಗಳನ್ನು ಮುಕ್ತಗೊಳಿಸಲು, ತಮ್ಮನ್ನೇ ತಾವು ತ್ಯಾಗಕ್ಕೆ ಒಪ್ಪಿಸಿಕೊಳ್ಳುವುದನ್ನು ಕುರಿತೇ ಸದಾ ಅವರ ಹೃದಯ ತುಡಿಯುತ್ತಿತ್ತು.

ಶ್ರೀ ಅರವಿಂದರು ಬಂಗಾಲಿ ಭಾಷೆಯಲ್ಲಿ ಮಾತನಾಡದೇ ಇದ್ದರೂ ಸಹಿತ, ತಮ್ಮ ಮಾತೃಭಾಷೆಯಲ್ಲಿ ಮಾತನಾಡಲು ಸದಾ ಉತ್ಸುಕರಾಗಿದ್ದರು. ನಾನು ಒಂದು ಹಗಲು ಮತ್ತು ಒಂದು ರಾತ್ರಿ ಉಳಿಯುವ ಸದವಕಾಶ ದೊರಕಿತ್ತು. ಆಗ ಅವರ ಹೃದಯ ವೈಶಾಲ್ಯತೆಯನ್ನು ಸಂಪೂರ್ಣ ಅನುಭವಿಸಿದ್ದೇನೆ. ಆಗ ನನಗೆ ಮನದಟ್ಟಾಗಿದ್ದೇನೆಂದರೆ, ಇವರು ಈ ಭೂ–ಬದುಕಿಗೆ ಸಂಬಂಧಪಟ್ಟ ಚೇತನವಲ್ಲ; ಬಹುಶಃ ಶಾಪಕ್ಕೆ ಸಿಲುಕಿ ಆ ದಿವ್ಯಸ್ವರ್ಗದಿಂದ ಅವತರಣಗೊಂಡು ಬಂದಿರುವ ಅಪೂರ್ವ ಚೇತನ–ಶಕ್ತಿಯಾಗಿದ್ದಾರೆ.

ತಾಯಿಯ ಪ್ರೀತಿಯಲ್ಲಿ ಮಿಂದೆದ್ದು ಅವರ ತೊಡೆಯ ಮೇಲೆ ಆಟವಾಡುವ ಆ ಚಿಕ್ಕ ವಯಸ್ಸಿನ ಸಮಯದಲ್ಲಿಯೇ, ತಮ್ಮ ಮೂಲ ನೆಲೆಯಿಂದ– ಅಭಿಶಾಪಗೊಂಡ ನೆಲವಾದ ಬಂಗಾಲದಿಂದ– ಏಕೆ ಇವರು ಇಂಗ್ಲಂಡಿಗೆ ಹೋಗುವಂತಾಯಿತು ಎನ್ನುವದನ್ನು ಆ ದೇವರೇ ಹೇಳಬೇಕಾಗಿದೆ. ಮತ್ತೆ ತಾರುಣ್ಯದ ಹೊಸ್ತಿಲಲ್ಲಿಯೇ ಮತ್ತೆ ಭಾರತಕ್ಕೆ ಏಕೆ ತಿರುಗಿ ಬರುವಂತಾಯಿತು ಎನ್ನುವದನ್ನೂ ಸಹಿತ ಆ ದೇವರೇ ಹೇಳಬೇಕಾಗಿದೆ.

ಎಲ್ಲಕ್ಕಿಂತ ಮಿಗಿಲಾಗಿ ನನ್ನನ್ನು ಆಶ್ಚರ್ಯಚಕಿತನನ್ನಾಗಿಸಿದ ಘಟನೆ ಎಂದರೆ, ಅವರ (ಶ್ರೀ ಅರವಿಂದರ) ಪರಿಶುದ್ಧ ಹೃದಯವೆಂದಿಗೂ ಈ ವೈಭೋಗಪೂರಿತವಾದ ಮತ್ತು ಆಕರ್ಷಣೆಗಳಿಗೆ ಸಿಕ್ಕು ವಿಚಲಿತವಾಗಲಿಲ್ಲ. ಅಲ್ಲಿರುವ ಕಣ್ಣು ಕೋರೈಸುವ ವಿಭ್ರಮೆಯ ಪ್ರಕಾಶಕ್ಕೂ ಹಾಗೂ ಪ್ರಭಾವಕ್ಕೂ ಸಿಲುಕದೇ, ಮತ್ತೆ ಮೇಲಾಗಿ ಅತ್ಯಂತ ಆಕರ್ಷಣೀಯವಾಗಿದ್ದ ಪಾಶ್ಚಿಮಾತ್ಯ ಸಮಾಜಕ್ಕೂ ಸಿಲುಕದೇ, ಕಲುಷಿತರಾಗದೇ ಉಳಿದಿದ್ದಾರೆ.

*

**ಸಮತೆ**

ಶ್ರೀ ಅರವಿಂದರು ಸಂತೋಷದಲ್ಲಾಗಲೀ ಅಥವಾ ನೋವಿಲ್ಲಾಗಲೀ, ಸುಖ ಸೌಲಭ್ಯದಲ್ಲಾಗಲೀ ಅಥವಾ ವಿಪತ್ತಿನಲ್ಲಾಗಲೀ, ಹೊಗಳಿಕೆಗೆ ಅಥವಾ ತೆಗಳಿಕೆಗೆ ಎಂದೂ ವಿಚಲಿತರಾಗದ ಸ್ಥಿರ ಮನೋಭಾವ ಹೊಂದಿದ್ದರು.ಅವರು ಸದಾ ಸ್ಮರಿಸಿಕೊಳ್ಳುತ್ತಿದ್ದ ಸೂಕ್ತಿ ಎಂದರೆ, ಓ ದೇವರೇ, ನೀನೇ ನಿಯತಿಗೊಳಿಸಿರುವಂತೆ ನನ್ನ ಹೃದಯದಲ್ಲಿ ನೆಲೆಸಿ, ನನ್ನನ್ನು ಸದಾ ಕರ್ತವ್ಯಪರತೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿಯೇ ರೂಪಿಸಿದ್ದೀಯ. ಅದರಂತೆ ನಾನೂ ಕೂಡಾ ಕರ್ಮದಲ್ಲಿ ನಿರತನಾಗಿದ್ದೇನೆ. ಎಂದು ಸದಾ ತಮ್ಮ ಆರಾಧ್ಯ ದೈವತ್ವವನ್ನು ಸ್ಮರಿಸಿಕೊಳ್ಳುತ್ತಲೇ ಇದ್ದರು. ಈ ಮೂಲಕ ತಮ್ಮನ್ನು ಆ ದೈವತ್ವದಲ್ಲಿಯೆ ಮಿಲನಗೊಳಿಸಿಕೊಂಡಿದ್ದರು. ಯಾವ ಅಗ್ನಿಯು ಸಾಮಾನ್ಯ ಮನುಷ್ಯನನ್ನು ತನ್ನಲ್ಲಿ ಲೀನಗೊಳಿಸಿಕೊಂಡು ಬಿಡುತ್ತದೆಯೋ, ಅದೇ ಅಗ್ನಿಯು ಇವರಲ್ಲಿ ಕೇವಲ ಅಹಂ ಭಾವವನ್ನು ಮಾತ್ರ ನಿವಾರಿಸಿ, ಅವರನ್ನು ಮೊದಲಿಗಿಂತ ಹೆಚ್ಚು ಜಾಜ್ವಲ್ಯಮಾನರನ್ನಾಗಿಸಿದೆ.

ಶ್ರೀ ಅರವಿಂದರು ತಮ್ಮ ಮೇಜಿನ ಎದುರು ಕುಳಿತುಕೊಂಡು, ಎಣ್ಣೆಯಿಂದ ಬೆಳಗುತ್ತಿರುವ ದೀಪದ ಬೆಳಕಿನಲ್ಲಿ ಮುಂಜಾನೆ ಒಂದು ಗಂಟೆಯಾಗುವವರೆಗೆ ಓದುತ್ತಿದ್ದರು. ತಮ್ಮನ್ನು ಕಚ್ಚುತ್ತಿದ್ದ ಸೊಳ್ಳೆಗಳಿಂದಲೂ ಅವರು ವಿಚಲಿತ–ರಾಗುತ್ತಿದ್ದಿಲ್ಲ. ಒಂದೇ ಭಂಗಿಯಲ್ಲಿ ಕುಳಿತು ಓದುತ್ತಿದ್ದುದನ್ನು ನಾನು ನೋಡಿದ್ದೇನೆ. ಅವರ ಕಣ್ಣುಗಳು ಪುಸ್ತಕದಲ್ಲಿಯೇ ಕೀಲಿಸಿದ್ದವು. ಒಬ್ಬ ಯೋಗಿಯ ತೆರದಲ್ಲಿ ಸಂಪೂರ್ಣ ತನ್ಮಯತೆಯಲ್ಲಿ ಮಗ್ನರಾಗಿ, ಬಾಹ್ಯ ಜಗತ್ತಿನಲ್ಲಿ ಏನು ನಡೆಯುತ್ತಿದೆ ಎನ್ನುವದರ ಬಗೆಗೆ ಕಿಂಚಿತ್ತೂ ವಿಚಲಿತರಾಗದ ಗಾಢತೆಯಲ್ಲಿ ಮುಳುಗಿರುತ್ತಿದ್ದರು. ಒಂದು ವೇಳೆ ಈ ಸಮಯದಲ್ಲಿ ಮನೆಗೆ ಬೆಂಕಿ ಬಿದ್ದರೂ ಸಹಿತ ಅದರಿಂದ ವಿಚಲಿತಗೊಳ್ಳದಂತೆ ಇದ್ದರು. ಈ ರೀತಿಯಾಗಿ ಪ್ರತಿ ದಿನವೂ ಮಧ್ಯರಾತ್ರಿಯವರೆಗೂ ದೀಪವುರಿಸುತ್ತ, ಬೇರೆ–ಬೇರೆ ಭಾಷೆಗಳ, ಯುರೋಪಿನ ಬೇರೆ ಬೇರೆ ಭಾಷೆಗಳ ಗ್ರಂಥಗಳನ್ನು ಓದುತ್ತಿದ್ದರು. ಅವುಗಳಲ್ಲಿ ಕಾವ್ಯ, ಕಾದಂಬರಿ, ಇತಿಹಾಸ, ತತ್ವಶಾಸ್ತ್ರ, ಇತ್ಯಾದಿ ಇತ್ಯಾದಿ ವಿಷಯಗಳೆಲ್ಲವೂ ಇದ್ದವು. ಅವರು ಅಧ್ಯಯನ ಮಾಡುತ್ತಿದ್ದ ಗ್ರಂಥಗಳಲ್ಲಿ ಫ್ರೆಂಚ್, ಜರ್ಮನ್, ರಶಿಯನ್, ಇಂಗ್ಲೀಷ, ಗ್ರೀಕ್, ಲ್ಯಾಟಿನ್ ಭಾಷೆಗಳೂ ಸೇರಿದ್ದವು. ಇವುಗಳ ಬಗೆಗೆ ನನಗೇನೂ ತಿಳಿಯದು.

ಇಂಗ್ಲೀಷಿನ ಎಲ್ಲ ಕವಿಗಳ ಬಗೆಗೆ, ಚಾಸರ್ ನಿಂದ ಸ್ವಿನ್ ಬರ್ನ್ ತನಕ ಎಲ್ಲ ಸಾಹಿತ್ಯ ಕೃತಿಗಳೂ ಅಲ್ಲಿದ್ದವು. ಅವರ ಪುಸ್ತಕದ ಕಪಾಟಿನಲ್ಲಿ ಇಂಗ್ಲೀಷ ಕಾದಂಬರಿಗಳ ಸಂಖ್ಯೆ ಅಪರಿಮಿತವಾಗಿತ್ತು. ಅಷ್ಟೇ ಅಲ್ಲದೇ ಅವರು ಕುಳಿತುಕೊಳ್ಳುತ್ತಿದ್ದ ಕೋಣೆಯ ಮೂಲೆಗಳಲ್ಲಿಯೂ ಸಹಿತ ಪುಸ್ತಕಗಳನ್ನು ಪೇರಿಸಿಡಲಾಗಿತ್ತು. ಸೆಲ್ಫಗಳಲ್ಲಿ ಜೋಡಿಸಿಡಲಾಗಿತ್ತು. ಅವರ ಬಳಿಯಿದ್ದ ಸ್ಟೀಲ್ ಟ್ರಂಕಿನಲ್ಲಿಯೂ ಸಹಿತ ತುಂಬಿಸಿಡಲಾಗಿತ್ತು. ಹೋಮರನ ಇಲಿಯಡ್, ಡಾಂಟೆಯ ಡಿವೈನ್ ಕಾಮಿಡಿ, ನಮ್ಮ ರಾಮಾಯಣ, ಮಹಾಭಾರತ, ಕಾಳಿದಾಸನ ಗ್ರಂಥಗಳೂ ಅಲ್ಲಿದ್ದವು. ಅವರಿಗೆ ರಶಿಯನ್ ಸಾಹಿತ್ಯದ ಬಗೆಗೆ ವಿಶೇಷ ಆಸಕ್ತಿ ಇತ್ತು.

**– ರಿಷಭಚಂದ**

**ನಿಶ್ಚಲ ನೀರವತೆಯಲ್ಲಿರುವ ಮೌನದ ಬ್ರಹ್ಮ ಪ್ರಜ್ಞೆ ಮತ್ತು ಶೂನ್ಯ**

ಬ್ರಹ್ಮಜ್ಞಾನವನ್ನು ಪಡೆದುಕೊಳ್ಳುವವನು ಯಾವಾಗಲೂ ಮಮಕಾರರಹಿತ ಸ್ಥಿತಿಯಲ್ಲಿಯೇ ಇರಬೇಕಾಗುತ್ತದೆ ಎನ್ನುವ ಸಾರ್ವತ್ರಿಕ ವಿಚಾರವೊಂದಿದೆ. ಆದರೆ ಇದು ಸತ್ಯ ಸಂಗತಿಯಾಗಿಲ್ಲ. ನಾನು ನನ್ನ ಮನೋವ್ಯಾಪಾರದ ಹಂತದಿಂದ ಹೊರಬಂದಾಗಲೇ ಈ ತೆರನಾದ ಬ್ರಹ್ಮಜ್ಞಾನದ ಅನುಭವವನ್ನು ಅದರಲ್ಲೂ ನಿಶ್ಚಲ ನೀರವತೆ ಮೌನದ ಬ್ರಹ್ಮಜ್ಞಾನದ ಅನುಭವವನ್ನು ಬಡೋದಾದಲ್ಲಿಯೇ ಅನುಭವಿಸಿದ್ದೇನೆ. ಇದ್ದಕ್ಕಿದ್ದಂತೆಯೇ ಅದು ಮನೋಚೇತನದಲ್ಲಿ ಆವಿರ್ಭಾವವಾಗಿತ್ತು. ಅದನ್ನು ನಾನೇ ಒಂದು ತಿಂಗಳು ಕಾಲ ಇಟ್ಟುಕೊಂಡಿದ್ದೆನು. ಆದರೆ ಆಗ ಪ್ರಜ್ಞಾವಸ್ಥೆಯಲ್ಲಿ ಇರಲಿಲ್ಲ. ಇಲ್ಲಿನ ಮನುಕುಲ ಮತ್ತು ಸರ್ವ ವಸ್ತುಗಳೂ ನನಗೆ ಕೇವಲ ಮಾಯೆಯಂತೆ ಕಾಣತೊಡಗಿತ್ತು. ಆದರೆ ಆ ಪರಮ ಸತ್ಯದ ಎದುರು ಉಳಿದ ಎಲ್ಲವೂ ಕುಬ್ಜವಾಗಿ ಕಾಣುತ್ತಿತ್ತು.

ಇನ್ನು ಶೂನ್ಯದ ಅನುಭವದ ಬಗೆಗೆ, ಇದು ಮೊದಲಿನ ಅನುಭವಕ್ಕಿಂತ ಹೆಚ್ಚಿನದಾಗಿದೆ. ಆತ್ಮವನ್ನೂ ಸಹಿತ ನಿರಾಕರಣೆ ಮಾಡಿಕೊಳ್ಳುವದರ ಮೂಲಕವೇ ಈ ಜ್ಞಾನ ಪ್ರಾಪ್ತಿಯಾಗುತ್ತದೆ ಮತ್ತು ಸಿದ್ಧಿ ದೊರಕುತ್ತದೆ.

**ಬಡೋದಾ ಮಹಾರಾಣಿಗೆ ಬರೆದ ಪತ್ರ (1930)**

*

ಯೋಗದ ಮೂಲಕ ಪ್ರಾಪ್ತಿಯಾಗುವ ಪರಮ ಸಿದ್ಧಿಯ ಮೂಲಕ ನಾನು ಉಚ್ಚತರ ಆಧ್ಯಾತ್ಮಿಕ ಹಂತದ ಆ ತುರೀಯಾವಸ್ಥೆಯನ್ನು ಸಾಧಿಸಿದ್ದೇನೆ ಎನ್ನುವದು ಸತ್ಯ, ಇದು ನಿಗದಿಗೊಳಿಸಲ್ಪಟ್ಟ ಕೆಲವು ಶಕ್ತಿಗಳ ಮೂಲಕವೇ ಘಟಿಸುತ್ತದೆ. ಯಾರು ನಿಶ್ಚಿಂತ ಮನೋಭಾವದಿಂದ ಹಾಗೂ ಪ್ರಶಾಂತ ಮನಸ್ಸಿನಿಂದ ಜೊತೆಗೆ ಆತ್ಮಶಕ್ತಿಯಿಂದ, ಪರಮಾನಂದದಿಂದ ಕೂಡಿದ್ದು, ಪರಿಪೂರ್ಣತೆಯನ್ನು ಪಡೆಯುವಲ್ಲಿ ಯಾವುದೇ ಸಮಯದಲ್ಲೂ ದೃಢತೆಯಲ್ಲಿ ಇರುತ್ತಾರೆಯೋ, ಅವರಿಗೆ ಸಹಾಯ ಮಾಡಲು, ಮಾರ್ಗದರ್ಶಿಯಾಗಲು, ಸಂವಹನಗೊಳ್ಳಲು ವಿಶೇಷ ಶಕ್ತಿಯೊಂದು ಸದಾ ಸಿದ್ಧವಾಗಿರುತ್ತದೆ. ಆದರೆ ಈ ಆಧ್ಯಾತ್ಮಿಕ ಪ್ರಶಾಂತತೆ (ನಿರಾಮಯತೆ) ಮತ್ತು ಸಂತೋಷವು ಮಾನಸಿಕ ತೃಪ್ತಿ ಮತ್ತು ಸಂತೋಷಕ್ಕಿಂತ ಸಂಪೂರ್ಣ ಬೇರೆಯದೇ ಆಗಿರುತ್ತದೆ. ಹೀಗಾಗಿ ಯಾವುದೇ ಆಧ್ಯಾತ್ಮಿಕ ನೀತಿ–ನಿಯಮಬದ್ಧತೆ ಇಲ್ಲದೇ ಈ ಹಂತವನ್ನು ತಲುಪುವದು ಸಾಧ್ಯವೆ ಆಗುವದಿಲ್ಲ.

ಮಹಾರಾಣಿಯವರ ಸಮ್ಮುಖಕ್ಕೆ ನಾನು ಈ ವಿಷಯವನ್ನು ಸೂಕ್ತವಾಗಿ ನಿವೇದಿಸಿದ್ದೇನೆಯೋ ಇಲ್ಲವೋ ಎನ್ನುವದು ನನಗೆ ಗೊತ್ತಿಲ್ಲ. ಸಂಕ್ಷಿಪ್ತವಾಗಿಯೇ ಹೇಳಬೇಕೆಂದರೆ, ಚೇತನದಲ್ಲಿ (ಚಿತ್ತಿನಲ್ಲಿ) ಎರಡು ಹಂತಗಳಿದ್ದು, ಅವುಗಳಲ್ಲಿ ಯಾವುದೇ ಒಂದರಲ್ಲಿ ವ್ಯಕ್ತಿಯೋರ್ವನು ಜೀವಿಸಬಹುದಾಗಿದೆ. ಅದರಲ್ಲಿ ಮೊದಲನೇಯದು ಅಧಿಮಾನಸ ಚೇತನ (Higher Consciousness) ವಾಗಿದ್ದು ಇದು ಜೀವನದ ಸ್ತರಕ್ಕಿಂತಲೂ ಮೇಲೆಯೇ ಇರುತ್ತದೆ. ಆದರೆ ಇದು ಜೀವನವನ್ನು ಅಧಿನಿಯಮಕ್ಕೆ ಒಳಪಡಿಸುತ್ತದೆ. ಇದನ್ನೇ ವಿಶೇಷವಾಗಿ ಆತ್ಮ[Self] ಎಂತಲೂ ಕರೆಯಲಾಗುತ್ತದೆ. ಮತ್ತೆ ಇದನ್ನೇ ಶಕ್ತಿ ಎಂತಲೂ ಇಲ್ಲವೇ ದಿವ್ಯತ್ವವೆಂತಲೂ ಕರೆಯಲಾಗುತ್ತದೆ.

ಇನ್ನೊಂದು ಸಾಮಾನ್ಯ ಚೇತನವಾಗಿದ್ದು, ಇದರಲ್ಲಿ ಮಾನವ ವರ್ಗ ಬದುಕುತ್ತಿದೆ; ಇದು ಕೇವಲ ಮೇಲ್ಮೈ–ಸ್ತರದಲ್ಲಿಯೇ ಇರುವ ವಿಶೇಷವಾಗಿದ್ದು, ಆ ಶಕ್ತಿಯು ಜೀವನವನ್ನು ಹಾಗೂ ಅದರ ಲೀಲೆಗಳನ್ನು ನಿರ್ವಹಿಸುವ ಒಂದು ವಿಶೇಷ ಉಪಕರಣ ಮಾತ್ರ ಇದಾಗಿದೆ. ಸಾಮಾನ್ಯ ಚೇತನಾವಸ್ಥೆಯಲ್ಲಿ ಬದುಕಿ, ಕರ್ತವ್ಯಗಳನ್ನು ನಿರ್ವಹಿಸುತ್ತಿರುವವರೆಲ್ಲರೂ, ಸಾಮಾನ್ಯವಾಗಿ ಮನೋವ್ಯಾಪಾರದ

ಮೂಲಕವೇ ಘಟಿಸಲ್ಪಡುವ ವ್ಯವಹಾರಗಳಿಂದ ನಿಯಂತ್ರಿತರಾಗಿರುತ್ತಾರೆ. ಹೀಗಾಗಿ ಸರ್ವೇಸಾಮಾನ್ಯವಾಗಿ ದುಃಖ ಮತ್ತು ಸಂತೋಷ ಹಾಗೂ ಮಾನಸಿಕ ಒತ್ತಡಗಳಿಗೆ ತಲ್ಲಣಗಳಿಗೆ ಜೊತೆಗೆ ವಾಂಛೆಗಳಿಗೆ ಅಥವಾ ಒಟ್ಟಾಗಿ ಇವೆಲ್ಲಕ್ಕೂ ಪಕ್ಕಾಗುವ ಸಾಮಾನ್ಯ ಬದುಕಿನ ಸಾರವಾಗಿರುವಲ್ಲಿಯೇ ಇರುತ್ತಾರೆ. ಮಾನಸಿಕ ಸ್ತಿಮಿತತೆಯನ್ನು ಮತ್ತು ಸಂತೋಷವನ್ನು ಇವರು ಪಡೆದುಕೊಂಡರೂ ಸಹಿತ, ಅದು ಚಿರಂತನವಾಗಿರುವದಿಲ್ಲ ಜೊತೆಗೆ ಸುರಕ್ಷಿತವೂ ಆಗಿರುವುದಿಲ್ಲ.

ಆದರೆ ದೈವೀಪ್ರಜ್ಞೆಯು ಯಾವಾಗಲೂ ಪ್ರಕಾಶಮಾನವಾಗಿದ್ದು, ಪ್ರಶಾಂತವಾಗಿದ್ದು, ಶಕ್ತಿಯಾಗಿದ್ದು ಮತ್ತು ಸಂತೋಷದಿಂದ ತುಂಬಿರುತ್ತದೆ. ಒಂದು ವೇಳೆ ಓರ್ವ ವ್ಯಕ್ತಿಯು ಇವೆಲ್ಲವುಗಳ ಮಧ್ಯದಲ್ಲಿಯೇ ಬದುಕಿದ್ದರೆ, ಅವನಿಗೆ ಅನ್ಯ ಪ್ರಶ್ನೆಗಳೇ ಉದ್ಭವಿಸುವದಿಲ್ಲ. ಇವೆಲ್ಲ ಅಂಶಗಳೂ ಸಹಜವಾಗಿ ಮತ್ತು ಸುರಕ್ಷಿತವಾಗಿ ಅವನವೇ ಆಗಿರುತ್ತವೆ. ಒಂದು ವೇಳೆ ವ್ಯಕ್ತಿಯು ಅಂಶಿಕವಾಗಿ ಮಾತ್ರ ಈ ಸ್ತರದಲ್ಲಿ ಬದುಕುತ್ತಿದ್ದರೆ, ಅಥವಾ ಈ ಹಂತದತ್ತ ತನ್ನನ್ನು ತಾನು ಮುಕ್ತಗೊಳಿಸಿಕೊಳ್ಳುತ್ತಿದ್ದಲ್ಲಿ, ಈ ದೈವೀ ಪ್ರಕಾಶವನ್ನು ಬೇಕಾದಷ್ಟು ಪಡೆದುಕೊಳ್ಳುತ್ತಾನೆ. ಜೊತೆಜೊತೆಗೆ ಪ್ರಶಾಂತತೆಯನ್ನೂ, ಬಲವನ್ನೂ ಮತ್ತು ಸಂತೋಷವನ್ನೂ ಪಡೆದುಕೊಂಡು, ಸುರಕ್ಷಿತವಾಗಿ ತನ್ನಲ್ಲಿಯೇ ಇಟ್ಟುಕೊಂಡು, ಜೀವನದ ಎಲ್ಲ ಆಘಾತಗಳಲ್ಲಿಯೂ ಸುರಕ್ಷಿತವಾಗಿ ಸಾಗುತ್ತಾನೆ.

ಈ ರೀತಿಯ ದೈವೀ ಚೇತನವನ್ನು ಪಡೆದುಕೊಂಡ ಯಾವುದೆ ವ್ಯಕ್ತಿಯು, ಅದರಿಂದ ಏನನ್ನು ನಿರೀಕ್ಷಿಸುತ್ತಾನೆಯೋ ಅದನ್ನು ಪಡೆದುಕೊಂಡು ಅದನ್ನೇ ಆಧಾರಭೂಮಿಯಾಗಿಸಿಕೊಳ್ಳುತ್ತಾನೆ. ಇದೇ ಪ್ರಶಾಂತ ಶಾಂತಿಯೂ ಹೌದು. ಇದರ ಮೂಲಕವೇ ವ್ಯಕ್ತಿಯು ಶಾಂತಿಯನ್ನು ಪಡೆದುಕೊಳ್ಳುತ್ತಾನೆ. ಇದು ಒಂದು ವೇಳೆ ಪ್ರಕಾಶ ಅಥವಾ ಜ್ಞಾನವಾಗಿದ್ದರೆ, ಆಗ ಆ ವ್ಯಕ್ತಿಯು ಆ ಪರಮ–ಪ್ರಕಾಶದಲ್ಲಿಯೇ ಜೀವಿಸುತ್ತಾನೆ, ಮತ್ತು ಗಾಢವಾದ ಆಳವಾದ, ಚಿರಂತನವಾದ, ಸಾಮಾನ್ಯ ಮನುಷ್ಯನು ಪಡೆಯಲು ಸಾಧ್ಯವಾಗದ ಚಿರಸತ್ಯದ ಜ್ಞಾನವನ್ನು ಪಡೆದುಕೊಳ್ಳುತ್ತಾನೆ. ಒಂದು ವೇಳೆ ಇದು ಬಲ ಅಥವಾ ಶಕ್ತಿಯಾಗಿದ್ದಲ್ಲಿ, ಆಗ ಆ ವ್ಯಕ್ತಿಯು ತನ್ನಲ್ಲಿ ಅಂತರ್ಗತವಾಗಿರುವ ಯೋಗದ ಶಕ್ತಿಯನ್ನು ಮತ್ತು ಆತ್ಮಬಲವನ್ನೂ ಪಡೆದುಕೊಳ್ಳುತ್ತಾನೆ. ಈ ಮೂಲಕ ಬಾಹ್ಯ ಜಗತ್ತಿನ

ಕಾರ್ಯಗಳನ್ನು ನಿರ್ವಹಿಸುತ್ತಾನೆ. ಒಂದು ವೇಳೆ ಇದೇ ಸಂತೋಷವಾಗಿದ್ದಲ್ಲಿ, ಆಗ ಆ ವ್ಯಕ್ತಿಯು ಎಲ್ಲ ಸಂತೋಷಗಳಿಗೂ ಪರಮೋಚ್ಚವಾದ ಪರಮಸಂತೋಷದ– ಅನುಭವ ಪಡೆದುಕೊಳ್ಳುತ್ತಾನೆ. ಇದು ಸಾಮಾನ್ಯ ಮಾನವರಿಗೆ ಸಾಧ್ಯವಾಗದು.

ಈ ದೈವೀ ಚೇತನವನ್ನು ತಲುಪಲು ಹಲವಾರು ಪಥಗಳಿವೆ. ಅಥವಾ ಈ ದೈವೀ ಚೇತನದ ವಲಯವನ್ನು ಪ್ರವೇಶಿಸಿಲು ಇಲ್ಲವೆ ಅದರಲ್ಲಿ ಪ್ರವೇಶಿಸಿಲು ಹಲವಾರು ಅವಕಾಶಗಳಿವೆ ಎನ್ನಬಹುದು. ನಾನು ಅನುಸರಿಸುತ್ತಿರುವ ಮಾರ್ಗವೆಂದರೆ, ಅದರಲ್ಲೂ ಮತ್ತೊಬ್ಬರಿಗೆ ತಿಳಿಸುವದೆಂದರೆ, ಸತತವಾಗಿ ನಮ್ಮ ಆಂತರ್ಯದಲ್ಲಿ ಪ್ರಯೋಗದ ಮೂಲಕ ಅರಿತುಕೊಳ್ಳುವ ಮೂಲಕ ದೃಢನಿರ್ಧಾರದೊಂದಿಗೆ ಸತತವಾಗಿ ಪ್ರಯತ್ನಿಸುತ್ತಿರಬೇಕು. ಆ ದಿವ್ಯತ್ವವನ್ನು ಪಡೆಯುವಲ್ಲಿ ಅಭೀಪ್ಸೆಯನ್ನೂ ಹೊಂದಿರಬೇಕು. ಒಮ್ಮೆ ಈ ಚೇತನ ಉದಯಿಸಿತು ಎಂದರೆ, ಅದರಿಂದ ಲಭಿಸುವ ಕ್ರಿಯೆಯೂ ಸಹಿತ ವ್ಯಕ್ತಿತ್ವವನ್ನು ಪರಿಪೂರ್ಣಗೊಳಿಸುವತ್ತಲೇ ಸಾಗಲು ಸಹಕರಿಸುತ್ತದೆ.

ಈ ರೀತಿಯಾಗಿ, ತನ್ನಲ್ಲಿ ತಾನೆ ತನ್ನನ್ನು ಅರ್ಪಿಸಿಕೊಳ್ಳುವದು ಎಂದರೆ, ಯಾವುದೇ ಕಾರಣಕ್ಕೂ ಬಾಹ್ಯದಿಂದ ಏನನ್ನೂ ಯಾಚಿಸದೇ ಇರುವದು ಎಂದರ್ಥ. ಆದರೆ ಸದಾ ಕಾಲವೂ ಆ ದಿವ್ಯ–ಚೇತನದೊಂದಿಗೆ ಸಂಯೋಗಗೊಂಡು ಅಥವಾ ಸದಾ ಅದರ ಜೊತೆಗೇ ಸಂಪರ್ಕ ಹೊಂದಿರುವ ಸ್ಥಿತಿಯಾಗಿದೆ. ಇದರಿಂದ ಶಾಂತಿ, ಶಕ್ತಿ, ಪ್ರಶಾಂತತೆ ಮತ್ತು ಅನುಭೂತಿಯ ಸಲುವಾಗಿ ಅಭೀಪ್ಸೆ ಹೊಂದಿರುವದೇ ವಿನಾ ಬೇರೆ ಏನನ್ನೂ ಕೇಳುವಂತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಗಮನಿಸಬೇಕಾದ ಸಂಗತಿ ಎಂದರೆ, ಜೀವನದಲ್ಲಾಗಲೀ ಮತ್ತು ಕ್ರಿಯೆಗಳಲ್ಲಾಗಲೀ ನಾವು ಕೇವಲ ಒಂದು ಉಪಕರಣದಂತೆ ಮಾತ್ರ ಇದ್ದೇವೆ ಎನ್ನುವದನ್ನು ಅರಿತುಕೊಂಡು, ಅದು ನಿಗದಿಪಡಿಸಿದ ಕಾರ್ಯವನ್ನು ಈ ಜಗತ್ತಿನಲ್ಲಿ ನಿರ್ವಹಿಸುವದಷ್ಟೇ ನಮ್ಮ ಗುರಿಯಾಗಿರಬೇಕು.

ಯಾವುದೇ ವ್ಯಕ್ತಿಯು ಒಮ್ಮೆ ಈ ರೀತಿಯಾಗಿ ತನ್ನಲ್ಲಿ ತಾನು ಆ ದಿವ್ಯಚೇತನವನ್ನು, ಆ ಆತ್ಮಿಕ ಬಲವನ್ನು ತನಗೆ ದತ್ತವಾಗಿರುವ ದೇಹದ

ಮೂಲಕ, ಮನಸ್ಸಿನ ಮೂಲಕ ಮತ್ತು ಹೃದಯದ ಮೂಲಕ ಕಾರ್ಯ ನಿರ್ವಹಿಸುವದರ ಮೂಲಕವಾಗಿ ಅನುಭವಿಸುತ್ತಾನೆಯೋ, ಆಗ ಉಳಿದೆಲ್ಲವೂ ಸಹಜವಾಗಿಯೇ ವಿಶ್ವಾಸಪೂರ್ವಕವಾಗಿಯೇ ಅದೇ ಸ್ಥಿತಿಯಲ್ಲಿ ಅಳವಡುತ್ತದೆ. ಈ ಸ್ತರಕ್ಕಿಂತ ಕೆಳಗಿನ ಹಂತದ ಸ್ವಭಾವದ ಚೇತನದಲ್ಲಿ ಬರಬಹುದಾದ/ ಬರುವ ಎಲ್ಲ ಸಂಗತಿಗಳನ್ನೂ ತಿರಸ್ಕರಿಸುತ್ತದೆ.

ನನ್ನ ಸದ್ಯದ ಸ್ಥಿತಿಯ ಹಂತದ ಕುರಿತು ಮತ್ತು ನನ್ನ ಯೋಗ ಶಕ್ತಿಯ ಕುರಿತು ಈಗಾಗಲೇ ಸಾಕಷ್ಟು ವಿಷಯಗಳನ್ನು ಬರೆದಿದ್ದೇನೆ. ನಾನು ಯಾರಿಗೂ ಈ ಪದ್ಧತಿಯಲ್ಲಿ ಯೋಗದ ಅಭ್ಯಾಸ ಮಾಡಿರಿ ಎಂದು ಹೇಳ ಬಯಸುವದಿಲ್ಲ. ಏಕೆಂದರೆ ಯಾರು ಇದನ್ನು ಹೊಂದಲು ಆತ್ಮಗತವಾದ ಹಂಬಲವನ್ನು ಹೊಂದಿದ್ದಾರೆಯೊ, ಅಭೀಪ್ಸೆಯನ್ನು ಹೊಂದಿದ್ದಾರೆಯೊ ಮತ್ತು ಅದರ ಸಲುವಾಗಿ ಅವಿಚಲವಾದ ಅವಿರತವಾದ ನಿರ್ಧಾರವನ್ನು ಹೊಂದಿರುತ್ತಾರೆಯೋ ಅವರಿಗೆ ಮಾತ್ರ ಇದು ಸಿದ್ಧಿಸುವದಾಗಿದೆ. ಮತ್ತೆ ಉಳಿದವರಿಗೆ ಇದರ ಗಮ್ಯದ ವರೆಗೆ ಸಾಗಲು ಸಾಧ್ಯವಾಗುವದಿಲ್ಲ. ನಾನು ನನ್ನ ಪಥವನ್ನು ಬಿಟ್ಟು ಅವರಿಗೆ ಅದರಲ್ಲೂ ಬಹಳಷ್ಟು ಯೋಗಿಗಳು ಬಯಸುತ್ತಿರುವಂತೆ, ಪ್ರಯತ್ನಿಸುತ್ತಿರುವಂತೆ ಮತ್ತು ಕೇವಲ ಬಾಹ್ಯ ಪ್ರಪಂಚದಲ್ಲಿ ಆಕರ್ಷಣೀಯವಾಗಿರುವ ಘಟನೆಗಳಂತಹ ಸಿದ್ಧಿಗಳನ್ನು ಬಯಸುತ್ತಿರುವವರಿಗೆ ಸಹಾಯ ಮಾಡಲು ನನಗೆ ಸಾಧ್ಯ–ವಾಗುವದಿಲ್ಲ. ಹಾಗೆಂದು ಕೆಲ ಸಂದರ್ಭಗಳಲ್ಲಿ ಕ್ರಮವೂ ಅಗತ್ಯವಾಗಿರುತ್ತದೆ ಎನ್ನುವ ಸಂಗತಿಯನ್ನೂ ನಾನು ಅಲ್ಲಗಳೆಯುವದಿಲ್ಲ.

ನನ್ನ ಗುರಿ ಇರುವದು ಆ ತುರೀಯದಲ್ಲಿ ಇರುವ ವಿಶ್ವಪ್ರಜ್ಞೆಯನ್ನು (ಋತ–ಚೇತನವನ್ನು) ಅವತರಣಗೊಳಿಸುವದರ ಮೂಲಕ ಇಲ್ಲಿಗೆ ತರುವ ಸಲುವಾಗಿ ಆಧ್ಯಾತ್ಮಿಕ ಕೇಂದ್ರವೊಂದನ್ನು ಸ್ಥಾಪಿಸುವದಾಗಿದೆ. ಇದನ್ನು ಕೇವಲ ಶಕ್ತಿಮೂಲ–ವನ್ನಾಗಿಸದೇ ಮತ್ತು ಕೇವಲ ಮುಕ್ತಿಯನ್ನು ದೊರಕಿಸಿಕೊಳ್ಳುವ ಸ್ಥಾನವಾಗಿಸದೇ, ದಿವ್ಯ–ಜೀವನವನ್ನು ಈ ಭೂಮಿಯ ಬದುಕಿಗೆ ದೊರಕಿಸಿ ಕೊಡುವ ಉದ್ದೇಶ ಹೊಂದಿದ್ದೇನೆ.

ಈ ಉದ್ದೇಶದ ಕಾರಣದಿಂದಾಗಿ ನಾನು ಸಾರ್ವಜನಿಕ ಜೀವನದಿಂದ ವಿಮುಕ್ತನಾಗಿ, ಈ ಪಾಂಡಿಚೇರಿಯಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದ್ದೇನೆ.

(ಆಶ್ರಮ ಎಂದಾಕ್ಷಣ ಕೇವಲ ಸನ್ಯಾಸಿಗಳಿಗಾಗಿ ಮಾತ್ರವೇ ಎಂದರ್ಥವಲ್ಲ. ಯಾರು ಈ ಅಭೀಪ್ಸೆಯನ್ನು ಹೊಂದಿ, ಈ ಪಥದಲ್ಲಿ ಸಾಗಲು ಸಿದ್ಧರಿದ್ದಾರೆಯೋ ಅವರೆಲ್ಲರಿಗಾಗಿಯೂ ಈ ಆಶ್ರಮವಿದೆ).

ಆದರೂ, ಸದ್ಯ ಭಾರತದಾದ್ಯಂತ ನನಗೆ ಕೆಲವೆ ಕೆಲವು ಅನುಯಾಯಿಗಳು ಇದ್ದಾರೆ. ಅವರೆಲ್ಲರೂ ತಮ್ಮ ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿದ್ದರೂ, ಈ ದೂರದಿಂದಲೇ ಅವರಿಗೆ ಅಧ್ಯಾತ್ಮಿಕ ಸಹಾಯವನ್ನು ನನ್ನಿಂದ ಪಡೆದುಕೊಳ್ಳುತ್ತಿದ್ದಾರೆ.

ಸದ್ಯದ ಸ್ಥಿತಿಯಲ್ಲಿ ತಮ್ಮ ಸನ್ನಿಧಾನಕ್ಕೆ ಇಷ್ಟನ್ನು ಮಾತ್ರ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ತಾವು ಈ ವಿಷಯವಾಗಿ ನಿರ್ಧರಿಸಲಿರುವ ಯಾವುದೇ ನಿರ್ಧಾರಗಳು ಮತ್ತು ನಾನು ನನ್ನ ಪತ್ರದಲ್ಲಿ ವಿವರಿಸಿರುವ ವಿಷಯಗಳ ಕುರಿತಾಗಿ ತಮ್ಮ ಸನ್ನಿಧಾನ ನಿರ್ಣಯಿಸುತ್ತದೆ ಎಂದು ಆಶಿಸುತ್ತೇನೆ.

**(CWSA, 36/340–344)** **– ಶ್ರೀ ಅರವಿಂದರು**

*



*Banish all thought from thee*
*and be God's void.*

- Sri Aurobindo

**RNI No. 22511/1971**
No. of Pages **60 + 4 (Cov. Page)**
KAR Reg No : RNP/KA/BGS/368/2018-2020
Date of Publication on 7th of Every Month
Permitted to Post 10th of Every Month. Reg. Valid till : 31-12-2020
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ಅತಿಥಿ ಗೃಹ ಸೌಲಭ್ಯವಿರುತ್ತದೆ. ಶ್ರೀಮಾತಾರವಿಂದರ ಭಕ್ತರು, ಗುರು–ಬಂಧುಗಳು, ಸದಸ್ಯರು ಮತ್ತು ಕೇಂದ್ರ ಹಾಗೂ ಶಾಖೆಗಳ ಪದಾಧಿಕಾರಿಗಳಿಗೆ ಸೌಲಭ್ಯದಲ್ಲಿ ರಿಯಾಯತಿ ಪಡೆಯಬೇಕಾದಲ್ಲಿ ಮುಂಚಿತವಾಗಿ ತಿಳಿಸುವುದು. ಸದಸ್ಯರು ಚಾಲ್ತಿಯಲ್ಲಿರುವ ತಮ್ಮ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿರಬೇಕಾಗುತ್ತದೆ.

**ಸಂಪರ್ಕಿಸಬೇಕಾದ ವಿಳಾಸ:**

ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ, ಬೆಂಗಳೂರು – 560 078.
ದೂರವಾಣಿ: 080 – 22339882, 22459628

Ed. Dr. K.S. Amur, M.sc., PhD, Pub: Dr. Ajit S. Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.